ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 30 ಬುಧವಾರ 2025

₹4

46

ಸಂಪುಟ: 46 | ಸಂಚಿಕೆ: 15 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಹಾಸನ ಮಿತ್ರ

ಹಾಸನ ನಗರಸಭೆ ಅಧ್ಯಕ್ಷ ಚಂದ್ರೇಗೌಡರ ವಿರುದ್ಧದ ಅವಿಶ್ವಾಸ ನಿರ್ಣಯಕ್ಕೆ ಸೋಲು



ಹಾಸನ, ಏ.29– ನಗರಸಭೆ ಅಧ್ಯಕ್ಷರಾಗಿರುವ ತನ್ನದೇ ಪಕ್ಷದ ಎಂ. ಚಂದ್ರೇಗೌಡರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದ್ದ ಜೆಡಿಎಸ್ ಮುಖಭಂಗ ಅನುಭವಿಸುವಂತಾಗಿದೆ. ಬಿಜೆಪಿ–ಕಾಂಗ್ರೆಸ್ ಸದಸ್ಯರ ಬೆಂಬಲದಿಂದಾಗಿ ಅವಿಶ್ವಾಸ ನಿರ್ಣಯಕ್ಕೆ ಸೋಲಾಗಿದ್ದು, ಚಂದ್ರೇಗೌಡ ಅಧ್ಯಕ್ಷರಾಗಿ ಮುಂದುವರಿಯಲಿದ್ದಾರೆ.

ಇಲ್ಲಿನ ನಗರಸಭೆ ಸಭಾಂಗಣದಲ್ಲಿ ನಡೆದ ವಿಶೇಷ ಸಾಮಾನ್ಯ ಸಭೆಯಲ್ಲಿ ಹಾಲಿ ಅಧ್ಯಕ್ಷ ಎಂ.ಚಂದ್ರೇಗೌಡರ ವಿರುದ್ಧ ಜೆಡಿಎಸ್ ಸದಸ್ಯರು ಅವಿಶ್ವಾಸ ನಿರ್ಣಯ ಮಂಡಿಸಿದರು. ಆದರೆ, ಅವಿಶ್ವಾಸ ನಿರ್ಣಯದ ಪರವಾಗಿ ಬೇಕಿದ್ದ 26 ಮತಗಳ ಪೈಕಿ, 21 ಮತಗಳು ಸಿಕ್ಕಿದ್ದು, ಜೆಡಿಎಸ್ ಹಿನ್ನಡೆ ಅನುಭವಿಸುವಂತಾಗಿದೆ. ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರು, ಅವಿಶ್ವಾಸ ನಿರ್ಣಯದ ವಿರುದ್ಧ ಮತ ಚಲಾಯಿಸಿದರು.

ನಗರಸಭೆಯಲ್ಲಿ ಜೆಡಿಎಸ್‌ನ 17, ಬಿಜೆಪಿಯ 14, ಕಾಂಗ್ರೆಸ್ ಹಾಗೂ ಪಕ್ಷೇತರ ತಲಾ ಇಬ್ಬರು ಸದಸ್ಯರಿದ್ದಾರೆ. ಇದರ ಜೊತೆಗೆ ಸಂಸದ ಶ್ರೇಯಸ್ ಪಟೇಲ್, ಶಾಸಕ ಸ್ವರೂಪ್ ಪ್ರಕಾಶ್, ವಿಧಾನಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ ಸಭೆಯಲ್ಲಿ ಹಾಜರಿದ್ದು, ಒಟ್ಟು 38 ಮತಗಳಿದ್ದವು. ಎಂ.ಚಂದ್ರೇಗೌಡ ತಟಸ್ಥವಾಗಿ ಉಳಿದಿದ್ದರಿಂದ 37 ಮತಗಳು ಚಲಾವಣೆ ಆಗಬೇಕಿತ್ತು. ಅವುಗಳ ಪೈಕಿ ಅವಿಶ್ವಾಸ ನಿರ್ಣಯದ ಪರವಾಗಿ 26 ಮತಗಳು ಅಗತ್ಯವಾಗಿದ್ದವು.

ಜೆಡಿಎಸ್‌ನ ಎಲ್ಲ 16 ಸದಸ್ಯರು, ಶಾಸಕ ಸ್ವರೂಪ್ ಪ್ರಕಾಶ್, ಡಾ.ಸೂರಜ್ ರೇವಣ್ಣ ಹಾಗೂ ಕಾಂಗ್ರೆಸ್‌ನ ಒಬ್ಬ ಸದಸ್ಯರು, ಇಬ್ಬರು ಪಕ್ಷೇತರ ಸದಸ್ಯರು ಸೇರಿದಂತೆ 21 ಜನರು ಅವಿಶ್ವಾಸ ನಿರ್ಣಯದ ಪರ ಮತ ಚಲಾಯಿಸಿದರು. ಆದರೆ, ಬಿಜೆಪಿಯ 14, ಕಾಂಗ್ರೆಸ್‌ನ ಒಬ್ಬರು ಮತ್ತು ಸಂಸದ ಶ್ರೇಯಸ್ ಪಟೇಲ್ ಸೇರಿ 16 ಜನರು ಅವಿಶ್ವಾಸ ನಿರ್ಣಯದ ವಿರುದ್ಧ ಮತ ಹಾಕಿದರು.

ಭದ್ರತಾ ವೈಫಲ್ಯವೇ ಪಹಲ್ಗಾಮ್ ಘಟನೆಗೆ ಕಾರಣ



ಶ್ರೇಯಸ್ ಪಟೇಲ್

ಹಾಸನ, ಏ.29– ಕಾಶ್ಮೀರದ ಪಹಲ್ಗಾಮ್ ದಾಳಿಗೆ ಭದ್ರತಾ ವೈಫಲ್ಯವೇ ಕಾರಣ ಎಂದು ಸಂಸದ ಶ್ರೇಯಸ್ ಪಟೇಲ್ ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉಗ್ರರನ್ನು ದಂಡಿಸುವ ವಿಷಯದಲ್ಲಿ ಇಡೀ ದೇಶ ಒಟ್ಟಾಗಿ ನಿಲ್ಲಬೇಕಿದೆ. ನಾವು ಕೇಂದ್ರ ಸರ್ಕಾರದ ಪರ ಇದ್ದೇವೆ. ಆದರೆ ಎಲ್ಲೋ ಒಂದು ಕಡೆ ಭದ್ರತಾ ಲೋಪ ಆಗಿದೆ ಎನಿಸುತ್ತಿದೆ ಎಂದರು.

ಹಿಂದೂಗಳ ನರಮೇಧದ ನಂತರವೇ ಅಲ್ಲಿ ಯಾವುದೇ ಭದ್ರತೆ ಇರಲಿಲ್ಲ ಎಂಬುದು ಗೊತ್ತಾಗಿದ್ದು. ಇದಕ್ಕೆ ಕಾರಣ ಯಾರು? ಏಕೆ ಭದ್ರತೆ ಕೊಟ್ಟಿರಲಿಲ್ಲ. ಗುಪ್ತಚರ ಇಲಾಖೆ ಏನು ಮಾಡುತ್ತಿತ್ತು? ಇದರ ಬಗ್ಗೆ ಅನುಮಾನ ಹುಟ್ಟುತ್ತದೆ. ಸಂವಿಧಾನದ 370ನೇ ವಿಧಿ ತೆಗೆದ ಮೇಲೆ ಕೇಂದ್ರ ಸರ್ಕಾರ ಎಚ್ಚೆತ್ತುಕೊಳ್ಳಬೇಕಿತ್ತು. ಭದ್ರತೆ ಹೆಚ್ಚಿಸಬೇಕಿತ್ತು. ಮುಂದೆ ಹಾಗೆ ಆಗುವುದು ಬೇಡ ಎಂದರು.

ರಾಜಕೀಯ ಬದಿಗೊತ್ತಿ ಇಡೀ ದೇಶ ಒಮ್ಮತವಾಗಿ ನಿಂತು ಉಗ್ರರ ವಿರುದ್ಧ ಹೋರಾಡಬೇಕಿದೆ. ಇದರಲ್ಲಿ ಪಕ್ಷ, ಜಾತಿ, ಧರ್ಮ ನೋಡಬಾರದು. ಇಡೀ ದೇಶ ಉಗ್ರಗಾಮಿಗಳ ವಿರುದ್ಧ ನಿಲ್ಲಬೇಕಾಗುತ್ತದೆ. ಪ್ರಧಾನಮಂತ್ರಿ ಸರ್ವಪಕ್ಷ ಸಭೆ ಕರೆದಿದ್ದರು. ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಭಾಗಿಯಾಗಿದ್ದರು ಎಂದರು. ಪಾಕ್ ವಿರುದ್ಧ ಯುದ್ಧ ಬೇಡ ಎಂದು ಸಿದ್ದರಾಮಯ್ಯ ಯಾವ ಅರ್ಥದಲ್ಲಿ ಹೇಳಿದ್ದಾರೋ ಗೊತ್ತಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರವಾಗಿ ಹೇಳಿದರು.

'ಗ್ಯಾರಂಟಿ' ಲೋಪವಾಗದಂತೆ ಎಚ್ಚರ ವಹಿಸಿ

ದೇಶಾಣಿ ಆನಂದ್ ತಾಕೀತು



ಬೇಲೂರು, ಏ.29– ಸರ್ಕಾರದ ಗ್ಯಾರಂಟಿ ಯೋಜನೆಗಳು ಫಲಾನುಭವಿಗಳಿಗೆ ತಲುಪುವಲ್ಲಿ ಯಾವುದೇ ಲೋಪವಾಗದಂತೆ ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸಬೇಕು ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲ್ಲೂಕು ಘಟಕದ ಅಧ್ಯಕ್ಷ ದೇಶಾಣಿ ಆನಂದ್ ತಾಕೀತು ಮಾಡಿದರು.

ಇಲ್ಲಿನ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಆಯೋಜಿಸಿದ್ದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗೃಹಲಕ್ಷ್ಮಿ ಯೋಜನೆಯಲ್ಲಿ ನಾವು ಶೇ.96ರಷ್ಟು ಪ್ರಗತಿ ಸಾಧಿಸಿದ್ದು, ಇದು ಶೇ.100 ಆಗಬೇಕು. ಪಡಿತರ ವಿತರಣೆಗಾಗಿ ಇಕೆವೈಸಿ ಮಾಡಿಸುವಲ್ಲಿ ಸಾರ್ವಜನಿಕರು ನಿರ್ಲಕ್ಷ್ಯ ತೋರುತ್ತಿದ್ದು, ತಕ್ಷಣ ಗಮನ ಹರಿಸಬೇಕು ಎಂದರು.

ಯುವನಿಧಿ ಫಲಾನುಭವಿಗಳನ್ನು ಗುರುತಿಸಲು ಕಾರ್ಯಾಗಾರ ಆಯೋಜಿಸಬೇಕು ಹಾಗೂ ಹೆಚ್ಚಿನ ಪ್ರಚಾರ ನೀಡಬೇಕು ಎಂದು ಕೌಶಲ ಅಭಿವೃದ್ಧಿ ಅಧಿಕಾರಿ ವಿಜಯಲಕ್ಷ್ಮಿ ಅವರಿಗೆ ಸೂಚಿಸಿದರು. ನರೇಗಾ ಯೋಜನೆ ಸಹಾಯಕ ನಿರ್ದೇಶಕ ದಯಾನಂದ್, ಆಹಾರ ನಿರೀಕ್ಷಕಿ ವೀಣಾ, ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಂಯೋಜಕಿ ರಮ್ಯ, ಗ್ಯಾರಂಟಿ ಯೋಜನೆಯ ಸದಸ್ಯರಾದ ಶರತ್, ವಿಶಾಲಕ್ಷಿ, ಸುರೇಶ್, ಮಹೇಶ್, ಪ್ರತಾಪ್, ನಿಶ್ಚಲ್, ಸತೀಶ್, ಮನ್ಸೂರ್ ಅಹಮ್ಮದ್ ಇನ್ನಿತರರಿದ್ದರು.

ಅಭಿನಂದನೆ...



ಮೈಸೂರು ಮಹಾನಗರಪಾಲಿಕೆಯ ವಲಯ ಕಚೇರಿ–3ರ ನೂತನ ಕಟ್ಟಡ ನಿರ್ಮಾಣಕ್ಕೆ ಶ್ರಮಿಸಿದ ಉಪ ಆಯುಕ್ತ ಟಿ.ಎಸ್.ಸತ್ಯಮೂರ್ತಿ ಅವರನ್ನು ಶಾಸಕರಾದ ಕೆ.ಹರೀಶ್‌ಗೌಡರ ಅಭಿಮಾನಿ ಬಳಗದಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಪ್ರದೀಪ್(ದೀಪು), ನಂಜುಂಡಸ್ವಾಮಿ (ದೀಪು) ಸತೀಶ್, ಮಹದೇವ, ಮಹೇಶ, ಗಿರೀಶ ಉಪಸ್ಥಿತರಿದ್ದಾರೆ.

ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಮೇ 5ರಿಂದ 9ರವರೆಗೆ ಉಚಿತ ಡಿ–ಸಿಇಟಿ ತರಬೇತಿ

ಮೈಸೂರು,ಏ.29–ನಂಜನಗೂಡಿನ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸುತ್ತಮುತ್ತಲ ತಾಲೂಕು ಹಾಗೂ ಪ್ರತಿಭಾನ್ವಿತ ಅಭ್ಯರ್ಥಿಗಳ ತಾಂತ್ರಿಕ ಭವಿಷ್ಯಕ್ಕೆ ಅನುಕೂಲವಾಗಲೆಂದು ಡಿಪ್ಲೊಮಾ ನಂತರದ ಇಂಜಿನಿಯರ್ ಆಕಾಂಕ್ಷಿಗಳಿಗೆ ಉಚಿತ ಡಿ–ಸಿಇಟಿ ತರಬೇತಿ ನೀಡಲಾಗುತ್ತಿದೆ. 2025–2026ನೇ ಸಾಲಿನ ಅಭ್ಯರ್ಥಿಗಳಿಗೆ ಮೇ 5ರಿಂದ 9ರವರೆಗೆ ಉಚಿತ ಡಿ–ಸಿಇಟಿ ತರಬೇತಿ, ಉಚಿತ ಮಧ್ಯಾಹ್ನದ ಊಟದ ವ್ಯವಸ್ಥೆ ಹಾಗೂ ಬರುವ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಸಾರಿಗೆ ಸೌಲಭ್ಯ (ಬಸ್ ವ್ಯವಸ್ಥೆ) ಕಲ್ಪಿಸಲಾಗಿದೆ. ಈ ಅವಕಾಶವನ್ನು ಅರ್ಹ ಅಭ್ಯರ್ಥಿಗಳು ಸದುಪಯೋಗ ಪಡಿಸಿಕೊಳ್ಳಬೇಕೆಂದು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಡಾ.ಎಂ.ಜಿ.ಶ್ರೀನಿವಾಸ್, ಮೊ. 96202 28056, ಡಾ.ಅಜಯ್‌ಕುಮಾರ್, ಮೊ. 98865 01743, ಮಹಾದೇವಪ್ರಸಾದ್, ಮೊ.77958 06110 ಅವರನ್ನು ಸಂಪರ್ಕಿಸಬಹುದು.

ಮಗುವಿನೊಂದಿಗೆ ತಾಯಿ ನಾಪತ್ತೆ



ಮೈಸೂರು,ಏ.29–ಮೈಸೂರು ತಾಲೂಕು ಇಲವಾಲ ಹೋಬಳಿ ಸೀಗಳ್ಳಿ ನಿವಾಸಿ ಈಶ್ವರ ಎಂಬುವರ ಪತ್ನಿ ಸಿಂಚನಾ (25) ಮತ್ತು ಪುತ್ರಿ ರುತಿಕ್ಷಾ (2) ನಾಪತ್ತೆಯಾಗಿದ್ದಾರೆ. ಪತ್ನಿ ಸಿಂಚನಾ, ಪುತ್ರಿ ರುತಿಕ್ಷಾಳೊಂದಿಗೆ ಏ.25ರಂದು ಮನೆಯಿಂದ ತಿಪ್ಪೆಗೆ ಕಸ ಹಾಕಲು ಹೊರ ಹೋದವರು ಕಾಣೆಯಾಗಿರುವುದಾಗಿ ಪತಿ ಈಶ್ವರ ದೂರು ನೀಡಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ದೂ. 0821–2402222 ಸಂಪರ್ಕಿಸಲು ಇಲವಾಲ ಠಾಣೆ ಪೊಲೀಸರು ಕೋರಿದ್ದಾರೆ.

ಪ್ರೇಕ್ಷಕರ ಮನಸೂರೆಗೊಂಡ ಜಾರ್ಖಂಡ್‌ನ ಚೌಹು ಮಹಿಷಾಸುರ ಮರ್ದಿನಿ ನೃತ್ಯ ರೂಪಕ



ವಿಶ್ವ ನೃತ್ಯ ದಿನಾಚರಣೆ ಅಂಗವಾಗಿ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಆಯೋಜಿಸಿರುವ ಐದು ದಿನಗಳ ಎಸ್‌ಎನ್‌ಎ ಫೆಲೋಗಳು ಮತ್ತು ಪ್ರಶಸ್ತಿ ಪುರಸ್ಕೃತರ ಸಂಗೀತ ಮತ್ತು ನೃತ್ಯೋತ್ಸವದಲ್ಲಿ ಚೌಹು ನೃತ್ಯದ ಮೂಲಕ ಮಹಿಷಾಸುರ ಮರ್ದಿನಿ ನೃತ್ಯ ರೂಪಕ ಪ್ರೇಕ್ಷಕರ ಮನ ಸೆಳೆಯಿತು.

ಮೈಸೂರು,ಏ. 29(ಜಿಎ)– ಜಾರ್ಖಂಡ್ ಮೂಲದ ಚೌಹು ಮಹಿಷಾಸುರ ಮರ್ದಿನಿ ನೃತ್ಯ ರೂಪಕ ಪ್ರೇಕ್ಷಕರ ಮನ ಸೆಳೆದರು.

ವಿಶ್ವ ನೃತ್ಯ ದಿನಾಚರಣೆ ಅಂಗವಾಗಿ ಸಂಗೀತ ನಾಟಕ ಅಕಾಡೆಮಿ ಮತು ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ವತಿಯಿಂದ ಮಾನಸಗಂಗೋತ್ರಿ ವಿಜ್ಞಾನ ಭವನದಲ್ಲಿ ಆಯೋಜಿಸಿರುವ ಐದು ದಿನಗಳ ಎಸ್‌ಎನ್‌ಎ ಫೆಲೋಗಳು ಮತ್ತು ಪ್ರಶಸ್ತಿ ಪುರಸ್ಕೃತರ ಸಂಗೀತ ಮತ್ತು ನೃತ್ಯೋತ್ಸವದಲ್ಲಿ ಚೌಹು ನೃತ್ಯ ಪ್ರಕಾರವು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಸಂಗೀತ ನಾಟಕ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತರಾದ ಜಾರ್ಖಂಡ್‌ನ ಪರೀಕ್ಷಿತ್ ಮಹತೋ 15 ಮಂದಿ ತಂಡವನ್ನು ಕಟ್ಟಿಕೊಂಡು ದೇಶದ ವಿವಿಧ ರಾಜ್ಯಗಳಲ್ಲಿ ರಾಮಾಯಣ, ಮಹಾಭಾರತ ಸೇರಿದಂತೆ ವಿವಿಧ ಪುರಾಣ ಕಥೆಗಳಿಗೆ ಚೌಹು ನೃತ್ಯದ ಮೂಲಕ ನೃತ್ಯ ರೂಪಕದಿಂದ ಗಮನ ಸೆಳೆದಿದ್ದು, ಇಂದು ಮೈಸೂರಿನಲ್ಲಿ ನಡೆದ ನೃತ್ಯೋತ್ಸವದಲ್ಲಿ ಮೈಸೂರಿನ ಮಹಿಷಾಸುರನನ್ನು ಚಾಮುಂಡೇಶ್ವರಿ ಮರ್ದಿಸಿದ ಸಂದರ್ಭವನ್ನು ವಿಶೇಷ ಉಡುಗೆ ತೊಡುಗೆಗಳ ಮೂಲಕ ನೃತ್ಯ ಮಾಡಿ ಸಭಾಂಗಣದಲ್ಲಿದ್ದ ಎಲ್ಲರ ಚಪ್ಪಾಳೆ ಗಿಟ್ಟಿಸಿಕೊಂಡರು.

ಇದಕ್ಕೂ ಮುನ್ನ ಖ್ಯಾತ ಹಿರಿಯ ವೀಣಾ ವಾದಕ ಆರ್.ವಿಶ್ವೇಶ್ವರನ್ ಸಂಗೀತ ಮತ್ತು ನೃತ್ಯೋತ್ಸವವನ್ನು ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ಭಾರತೀಯ ಸಾಂಸ್ಕೃತಿಕ ವಲಯದಲ್ಲಿ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಯನ್ನು ಅತ್ಯುತ್ತಮ ಪ್ರಶಸ್ತಿ ಎಂದು ಗುರುತಿಸಲಾಗುತ್ತದೆ. ಇಂತಹ ಸಂಸ್ಥೆಯು ಮೈಸೂರಿನಲ್ಲಿ ಈ ರೀತಿ ಉತ್ಸವ ಆಯೋಜಿಸಿರುವುದನ್ನು ಕಂಡು ಸಂತಸವಾಗುತ್ತಿದೆ ಎಂದರು.

> "ಭಾರತೀಯ ಸಂಗೀತ ಎಂದ ತಕ್ಷಣ ಹಿಂದೂಸ್ಥಾನಿ ಸಂಗೀತ ಎಂಬುದು ಮಾತ್ರ ಇದೆ. ಕರ್ನಾಟಕ ಸಂಗೀತ ಕೂಡ ತನ್ನದೇ ಆದ ಛಾಪು ಹೊಂದಿದೆ. ಎಲ್ಲ ಪ್ರಕಾರದ ಕಲೆ, ಸಂಗೀತಕ್ಕೂ ಸಂಗೀತ ನಾಟಕ ಅಕಾಡೆಮಿ ಯಾವುದೇ ಭೇದ ಭಾವ ಮಾಡದೇ ಸಹಕಾರ ನೀಡಬೇಕು.
> –ಪ್ರೊ.ನಾಗೇಶ್ ವಿ.ಬೆಟ್ಟಕೋಟೆ, ಕುಲಪತಿ, ಸಂಗೀತ ವಿವಿ

ಹಿರಿಯ ಭರತನಾಟ್ಯ ಗುರು ಲಲಿತಾ ಶ್ರೀನಿವಾಸ್ ಮಾತನಾಡಿ, ಇಂತಹ ಕಾರ್ಯಕ್ರಮ ಆಯೋಜಿಸಿ ಜನರ ಮನ್ನಣೆ ಗಳಿಸುವುದು ಸುಲಭವಲ್ಲ. 1984ರಲ್ಲಿ ನಮ್ಮ ನೂಪುರ ಸಂಸ್ಥೆ ಮೂಲಕ ಮೊದಲು ಈ ರೀತಿ ಉತ್ಸವವನ್ನು ಆರಂಭಿಸಿ, 30 ವರ್ಷ ಮಾಡಿದ್ದೆವು. ಈ ರೀತಿ ಕಾರ್ಯಕ್ರಮಗಳಿಂದ ಎಲ್ಲರಿಗೂ ಉಪಯುಕ್ತವಾಗುತ್ತದೆ. ಮುಂದಿನ ದಿನಗಳಲ್ಲಿ ಇದೇ ರೀತಿ ಕಾರ್ಯಕ್ರಮ ಆಯೋಜಿಸಿ ಎಂದು ಶುಭ ಕೋರಿದರು.

ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿಯ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಮಾತನಾಡಿ, ಸಂಗೀತ ನಾಟಕ ಅಕಾಡೆಮಿ ನಮ್ಮ ಮೇಲೆ ನಂಬಿಕೆ ಇಟ್ಟು ಮೈಸೂರಿನಲ್ಲಿ ಉತ್ಸವಕ್ಕೆ ಅವಕಾಶ ನೀಡಿದೆ ಎಂದು ತಿಳಿಸಿದರು.

ನಮ್ಮ ಕಲೆ ಉಳಿಯಬೇಕು ಎಂದರೆ ಶೈಕ್ಷಣಿಕವಾಗಿ ನಡೆಯಬೇಕು. ಈ ನಿಟ್ಟಿನಲ್ಲಿ ವಿವಿ ಉತ್ತಮ ಕೆಲಸ ಮಾಡುತ್ತಿದೆ. 12 ಸಾವಿರಕ್ಕೂ ಅಧಿಕ ಮಂದಿ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿಯಿಂದ ಪರೀಕ್ಷೆ ಪಡೆದಿದ್ದಾರೆ. ಮುಂದಿನ ದಿನಗಳಲ್ಲಿ ವಿವಿಯಿಂದ ಮತ್ತಷ್ಟು ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ಹಿರಿಯ ವೀಣಾವಾದಕ ಆರ್.ವಿಶ್ವೇಶ್ವರನ್ ಅವರು ವೀಣಾವಾದನ ಮತ್ತು ಕರ್ನಾಟಕ ಸಂಗೀತ ಗಾಯನ ಮೂಲಕ ಎಲ್ಲ ಮನಸೂರೆಗೊಳಿಸಿದರು. ಸಂಗೀತ ನಾಟಕ ಅಕಾಡೆಮಿ ಜಂಟಿ ನಿರ್ದೇಶಕ ರಘು, ಕುಲಸಚಿವ(ಮೌಲ್ಯಮಾಪನ) ಪ್ರೊ.ಎಂ.ಜಿ. ಮಂಜುನಾಥ್, ಹಣಕಾಸು ಅಧಿಕಾರಿ ಕೆ.ಎಸ್.ರೇಖಾ, ಕಾರ್ಯಕ್ರಮದ ಅಧಿಕಾರಿ ಶಿಲ್ಪ ನಾಗರಾಜು ಮತ್ತಿತರರು ಉಪಸ್ಥಿತರಿದ್ದರು.

ಕಾಯಕದಲ್ಲಿ ತಾರತಮ್ಯ ಇರಬಾರದು

ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಕೊಡಗು ವಿವಿ ಕುಲಪತಿ ಡಾ.ಅಶೋಕ್ ಎಸ್.ಅಲ್ಲೂರು



ಮೈಸೂರಿನ ಶ್ರೀ ಹೊಸಮಠದಲ್ಲಿ ಅಕ್ಕ ಮಹಾದೇವಿ ಮತ್ತು ಬಸವ ಜಯಂತ್ಯುತ್ಸವ ಅಂಗವಾಗಿ ಆಯೋಜಿಸಿರುವ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಕೊಡಗು ವಿವಿ ಕುಲಪತಿ ಡಾ.ಅಶೋಕ್ ಎಸ್.ಅಲ್ಲೂರು ಮಾತನಾಡಿದರು.

ಮೈಸೂರು,ಏ.29(ಜಿಎ)–ಕಾಯಕವೇ ಕಡ್ಡಾಯ, ಕಾಯಕದಲ್ಲಿ ತಾರತಮ್ಯ ಇರಬಾರದು ಎಂದು ಕೊಡಗು ವಿಶ್ವವಿದ್ಯಾನಿಲಯದ ಕುಲಪತಿ ಡಾ. ಅಶೋಕ್ ಎಸ್ ಅಲ್ಲೂರು ಅಭಿಪ್ರಾಯಪಟ್ಟರು.

ಮೈಸೂರಿನ ಶ್ರೀ ಹೊಸಮಠ, ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳು, ಲಿಂಗಾಯತ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ವಿದ್ವಾನ್ ಶ್ರೀ ಗುರುಶಾಂತ ಸ್ವಾಮೀಜಿಯವರ 30ನೇ ಪುಣ್ಯಾರಾಧನೆ ಹಾಗೂ ಅಕ್ಕ ಮಹಾದೇವಿ ಮತ್ತು ಬಸವ ಜಯಂತ್ಯುತ್ಸವ ಅಂಗವಾಗಿ ಆಯೋಜಿಸಿರುವ 'ಬಸವಣ್ಣನವರ ದೃಷ್ಟಿಯಲ್ಲಿ ಸಮ ಸಮಾಜ' ಎಂಬ ವಿಷಯದ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು.

ಬಸವಣ್ಣನವರ ವಚನಗಳನ್ನು ಅರ್ಥೈಸುವುದರ ಮೂಲಕ ಮನುಷ್ಯ ನಡೆದಂತೆ ನುಡಿಯಬೇಕು. ನುಡಿದಂತೆ ನಡೆಯಬೇಕು ಮತ್ತು ಅರಿವು, ಆಚಾರ, ಚಿಂತನೆ, ಕೌಶಲ ನಿಮ್ಮಲ್ಲಿ ಮಿಡಿಯುವಂತೆ ಇರಬೇಕು. ಜೊತೆಗೆ ಅತೀ ಮುಖ್ಯವಾಗಿ ಕಾಯಕವೇ ಕಡ್ಡಾಯ, ಕಾಯಕದಲ್ಲಿ ತಾರತಮ್ಯ ಇರಬಾರದು. ಕಾಯಕ ಐಚ್ಛಿಕವಾಗಿರಬೇಕು, ಕಾಯಕ ದಾಸೋಹ ಸಹಿತ ಪರಿಕಲ್ಪನೆಯಾಗಿರಬೇಕು ಹಾಗೂ ಕಾಯಕ ಅಸ್ಪೃಶ್ಯತೆಯಿಂದಿರಬೇಕು ಎಂಬ ಐದು ಮುಖ್ಯವಾದ ಕಾಯಕದ ಸಿದ್ಧಾಂತವನ್ನು ಡಾ. ಅಶೋಕ್ ಅರ್ಥಪೂರ್ಣವಾಗಿ ತಿಳಿಸಿಕೊಟ್ಟರು.

ಕಾರ್ಯಕ್ರಮದಲ್ಲಿ ಬಸವಣ್ಣನವರ ದೃಷ್ಟಿಯಲ್ಲಿ ಸಮ ಸಮಾಜ ಎಂಬ ವಿಷಯದ ಬಗ್ಗೆ ಆಕಾಶವಾಣಿ ನಿವೃತ್ತ ಸಹಾಯಕ ನಿರ್ದೇಶಕ ಅಬ್ದುಲ್ ರಶೀದ್ ಮಾತನಾಡಿ, ಕಾಯಕವೇ ಕೈಲಾಸ. ನಿಮ್ಮ ಮನಸ್ಸು ನಿಮ್ಮ ಚಿಂತನೆ ಎಲ್ಲವೂ ಶುದ್ಧವಾಗಿದ್ದಲ್ಲಿ ನೀವು ಮಾಡುವ ಕಾಯಕವೇ ಎಲ್ಲವೂ ಪರಿಪೂರ್ಣತೆ ಎಂಬ ಸಂದೇಶವನ್ನು ಉಪನ್ಯಾಸದಲ್ಲಿ ನೀಡಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ, ಶ್ರೀ ನಟರಾಜ ಪ್ರತಿಷ್ಠಾನ ವಿಶೇಷ ಅಧಿಕಾರಿಗಳು ಪ್ರೊ.ಎಸ್.ಶಿವರಾಜಪ್ಪ, ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ ಪ್ರಾಂಶುಪಾಲ ಡಾ.ಮಹೇಶ್ ದಳಪತಿ, ಚೂಡಾಮಣಿ, ಪ್ರಾಧ್ಯಾಪಕ ಸಂತೋಷ್ ಪಟೇಲ್ ಮತ್ತಿತರರು ಉಪಸ್ಥಿತರಿದ್ದರು.

ಮೇ 2, 'ಸದೃಢವಾದ ನಗರ–ಹಸಿರು ಭವಿಷ್ಯ ನಿರ್ಮಾಣ' ಸಂವಾದ

ಮೈಸೂರು,ಏ.29(ಎಂಟಿವೈ)– ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ವಿಪ್ರರ ನಿರ್ಮಾಣ ಮಂಟಪದ ಸಭಾಂಗಣದಲ್ಲಿ ಮೇ 2ರಂದು ಸಂಜೆ 4ರಿಂದ 6 ಗಂಟೆವರೆಗೆ 'ಸದೃಢವಾದ ನಗರ–ಹಸಿರು ಭವಿಷ್ಯ ನಿರ್ಮಾಣ' ವಿಷಯ ಕುರಿತು ತಜ್ಞರೊಂದಿಗೆ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಭಾರತೀಯ ಹಸಿರು ಕಟ್ಟಡಗಳ ಮಂಡಳಿ(ಐಜಿಬಿಸಿ) ಮೈಸೂರು ಘಟಕದ ಅಧ್ಯಕ್ಷ ವಿನೋದ್ ಮಾರೋಳಿ ತಿಳಿಸಿದ್ದಾರೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಂಸ್ಕೃತಿಕ ನಗರಿ ಮೈಸೂರನ್ನು ಮುಂದಿನ ದಿನಗಳಲ್ಲಿ ಇನ್ನಷ್ಟು ಹಸಿರಾಗಿಸಲು ಬೇಕಾದ ವಾತಾವರಣ ಸೃಷ್ಟಿಸಲು ಚರ್ಚಿಸುವ ನಿಟ್ಟಿನಲ್ಲಿ ತಜ್ಞರೊಂದಿಗೆ ಸಂವಾದ ನಡೆಸಲಾಗುತ್ತಿದ್ದು, ಈ ಸಂವಾದದಲ್ಲಿ ಅರಣ್ಯ ಇಲಾಖೆ ಹಾಗೂ ಸಂಬಂಧಪಟ್ಟ ವಿವಿಧ ಇಲಾಖೆಗಳ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ ಎಂದರು.

ಭಾರತೀಯ ಕೈಗಾರಿಕೆಗಳ ಒಕ್ಕೂಟಕ್ಕೆ (ಸಿಐಐ) ಸೇರಿರುವ ಭಾರತೀಯ ಹಸಿರು ಕಟ್ಟಡಗಳ ಮಂಡಳಿ (ಐಜಿಬಿಸಿ) ವತಿಯಿಂದ ನಡೆಯುತ್ತಿರುವ ಈ ಸಂವಾದದ ಉದ್ದೇಶ ಮೈಸೂರು ನಗರವನ್ನು 'ಹಸಿರು ನಗರ'ವಾಗಿ ರೇಟಿಂಗ್ ಪಡೆಯಲು ಕಾರ್ಯಯೋಜನೆ ರೂಪಿಸುವುದಾಗಿದೆ. ಪುಣೆ ನಗರವು ಹೇಗೆ ಹಸಿರು ನಗರ ರೇಟಿಂಗ್ ಪಡೆದಿದೆ ಎಂಬ ವಿಷಯ ಕುರಿತು ಪ್ರಣತಿ ಶ್ರಾಫ್ ಮುನೋತ್ ಅವರಿಂದ ಕೇಸ್ ಸ್ಟಡಿಯನ್ನು ಪ್ರದರ್ಶನ ಮಾಡಲಾಗುವುದು ಎಂದು ತಿಳಿಸಿದರು.

ಸಂವಾದ ಕಾರ್ಯಕ್ರಮದ ನಂತರ ಸಂಜೆ 6.30ರಿಂದ 8ರವರೆಗೆ ಐಜಿಬಿಸಿ ಮೈಸೂರು ಚಾಪ್ಟರ್‌ನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆಯಲಿದೆ. ಐಜಿಬಿಸಿ ಮೈಸೂರು ಚಾಪ್ಟರ್‌ನ ನೂತನ ಚೇರ್ಮನ್ ಅಗಿ ವಿನೋದ್ ಮಾರೋಳಿ, ಸಹ ಚೇರ್ಮನ್ ಆಗಿ ಶ್ರೀಹರಿ ಅವರು ಅಧಿಕಾರ ಸ್ವೀಕರಿಸಲಿದ್ದಾರೆ. ಈ ಸಂದರ್ಭದಲ್ಲಿ ಐಜಿಬಿಸಿಯ ರಾಷ್ಟ್ರೀಯ ಸಹ–ಚೇರ್ಮನ್ ಸಿ. ಶೇಖರ್ ರೆಡ್ಡಿ ಪಾಲ್ಗೊಳ್ಳಲಿದ್ದಾರೆ ಎಂದರು.

ಐಜಿಬಿಸಿಯು ಭಾರತದಲ್ಲಿ ಹಸಿರು ಕಟ್ಟಡ ಚಳವಳಿಯನ್ನು ಮುನ್ನಡೆಸುತ್ತಿರುವ ಸಂಸ್ಥೆಯಾಗಿ 20 ವರ್ಷದಿಂದ ತಾಂತ್ರಿಕ ಮಾರ್ಗಸೂಚಿ, ಹಸಿರು ಹಾಗೂ ನೆಟ್–ಜಿರೋ ಪ್ರಮಾಣಪತ್ರ, ಸಾಮರ್ಥ್ಯ ವೃದ್ಧಿ, ಪ್ರಮಾಣೀಕರಣ ಮತ್ತು ಸದಸ್ಯತ್ವ ಸೇವೆ ಒದಗಿಸುತ್ತಿದೆ. ದೇಶದಾದ್ಯಂತ 30 ಪ್ರಾದೇಶಿಕ ಶಾಖೆಗಳೊಂದಿಗೆ ಕಾರ್ಯನಿರ್ವಹಿಸುತ್ತಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಜೆಎಸ್‌ಎಸ್ ಫೌಂಡೇಷನ್ ಮುಖ್ಯಸ್ಥ ಶ್ರೀಹರಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.04.2025 ಬುಧವಾರ, ಮಳೆ ನಕ್ಷತ್ರ: ಭರಣಿ 27.04.2025 ರಿಂದ 10.05.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ರೋಹಿಣಿ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಶ್ರೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾ ಸಂಸ್ಥಾನಮ್ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠ ಶೃಂಗೇರಿ, ಅಭಿನವ ಶಂಕರಾಲಯ:** ಶ್ರೀ ಶಂಕರ ಜಯಂತ್ಯುತ್ಸವ–2025, ಬೆಳಗ್ಗೆ 7 ಗಂಟೆಯಿಂದ ಶ್ರೀ ಶಂಕರ ಸನ್ನಿಧಿಯಲ್ಲಿ ಮಹಾನ್ಯಾಸ ಪೂರ್ವಕ ಏಕದಶವಾರ, ರುದ್ರಾಭಿಷೇಕ, ರುದ್ರಕ್ರರೂರ್ಚನೆ, ವೇದ ಪಾರಾಯಣಗಳು, ಭಾಷ್ಯಾ ಪಾರಾಯಣಗಳು, ಶ್ರೀ ಶಂಕರ ವಿಜಯ ಪಾರಾಯಣ, ವಿಷ್ಣು ಸಹಸ್ರನಾಮ ಪಾರಾಯಣ ಮತ್ತು ನವಗ್ರಹ ಜಪ, ಮಹಾಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ, ಸಂಜೆ 6ರಿಂದ ಉಪನ್ಯಾಸ ಮಾಲಿಕೆ, ಬೆಂಗಳೂರಿನ ವಿದ್ವಾನ್ ಜಿ.ಬಿ. ಹರೀಶ್ ಅವರಿಂದ ಅದ್ವೈತ ಮತ್ತು ಕ್ವಾಂಟಮ್ ವಿಜ್ಞಾನ ಕುರಿತು ಉಪನ್ಯಾಸ, ಸ್ಥಳ: ಶೃಂಗೇರಿ ಶ್ರೀ ಶಂಕರ ಮಠ, ಫೋರ್ಟ್ ಮೊಹಲ್ಲಾ.

■ **ಜಾಗತಿಕ ಲಿಂಗಾಯತ ಮಹಾಸಭಾ :** ಬಸವ ಜಯಂತ್ಯುತ್ಸವ, ಷಟ್‌ಸ್ಥಳ ಧ್ವಜಾರೋಹಣ : ಶ್ರೀ ಹೊಸ ಮಠದ ಶ್ರೀ ಚಿದಾನಂದ ಸ್ವಾಮೀಜಿ, ಸಾನ್ನಿಧ್ಯ : ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ಮುಖ್ಯ ಅತಿಥಿಗಳು: ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಅಧ್ಯಕ್ಷತೆ : ಜಾಗತಿಕ ಲಿಂಗಾಯತ ಮಹಾಸಭಾ ಅಧ್ಯಕ್ಷ ಶರಣ ಮಹಾದೇವಪ್ಪ, ಬೆಳಗ್ಗೆ 7 ರಿಂದ ಇಷ್ಟಲಿಂಗದೀಕ್ಷಾ, ಸಹಜ ಶಿವಯೋಗ, ಬೆಳಗ್ಗೆ 8 ರಿಂದ ಷಟ್‌ಸ್ಥಲ ಧ್ವಜಾರೋಹಣ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ, ಬೆಳಗ್ಗೆ 9 ರಿಂದ ವೇದಿಕೆ ಕಾರ್ಯಕ್ರಮ, ಸ್ಥಳ: ಬಸವ ಕೇಂದ್ರ, ಬಸವೇಶ್ವರ ರಸ್ತೆ, ಅಗ್ರಹಾರ.

■ **ಬಸವ ಬಳಗಗಳ ಒಕ್ಕೂಟ :** ಬಸವ ಜಯಂತಿ ಮಹೋತ್ಸವ, ಸಾನ್ನಿಧ್ಯ : ಹರಗುರು ಚರಮೂರ್ತಿ, ಪುಷ್ಪಾರ್ಚನೆ : ಶಾಸಕ ಟಿ.ಎಸ್. ಶ್ರೀವತ್ಸ, ವಿಶೇಷ ಆಹ್ವಾನಿತರು : ಮಹೇಂದರ್, ಎಸ್. ನಂದೀಶ್, ನಾಗೇಂದ್ರ, ಎಂ.ಕೆ. ಸೋಮಶೇಖರ್, ಸ್ಥಳ: ಗೊಬ್ಬಳಿಮರ ವೃತ್ತ, ಜೆ.ಪಿ.ನಗರ, ಸಂಜೆ 8ಕ್ಕೆ.

■ **ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಮೈಸೂರು ಜಿಲ್ಲಾ ಘಟಕ :** ಜಿಲ್ಲಾ ಮಹಾಸಭಾ ಕಟ್ಟಡ ಕಾಮಗಾರಿ ಪ್ರಾರಂಭೋತ್ಸವ, ಪೂಜಾ ಕಾರ್ಯಕ್ರಮ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮುಖ: ಎಲ್ಲಾ ತಾಲೂಕಿನ ಪೂಜ್ಯ ಮಠಾಧೀಶರು ಹಾಗೂ ಹರಗುರು ಚರಮೂರ್ತಿಗಳು, ಸ್ಥಳ: ನಿವೇಶನ ಸಂಖ್ಯೆ ಸಿಎ–ಜೆ–03, ರಾಜಕುಮಾರ್ ರಸ್ತೆ, ಜೆಎಸ್‌ಎಸ್ ಬಡಾವಣೆ 1ನೇ ಹಂತ, ಬಸವೇಶ್ವರ ವೃತ್ತ, ಬೆಳಗ್ಗೆ 8.30ಕ್ಕೆ.


■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಯಕೃತ್ತಿನ ಸಮಸ್ಯೆಗೆ ಚಿಕಿತ್ಸಾ ಶಿಬಿರ, ಕುತ್ತಿಗೆ ಮತ್ತು ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಪುನಶ್ಚೇತನ (ರೆಜುವಿನೇಷನ್) ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ :** ಆರ್ಟಿಸ್ಟ್ರಿ ಶೋ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್, ಬಿ.ಎನ್. ರಸ್ತೆ, ಸಬ್ ಅರ್ಬನ್ ಬಸ್ ನಿಲ್ದಾಣದ ಹತ್ತಿರ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ದೇವರತ್ನ ಫೌಂಡೇಷನ್, ಲಯನ್ಸ್ ಕ್ಲಬ್ ಆಫ್ ಮೈಸೂರು ಅಂಬಾಸಿಡರ್ಸ್, ಭೂಮಿಗಿರಿ ಪ್ರಕಾಶನ :** ಯಶಿಕರವರ ವಸಂತ ಕಾವ್ಯ ಕವನ ಸಂಕಲನ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕೃತಿ ಬಿಡುಗಡೆ : ಡಾ. ನಾಗರಾಜ್ ವಿ. ಬೈರಿ, ಕೃತಿ ಕುರಿತು : ಸಾಹಿತಿ ಟಿ. ಸತೀಶ್ ಜವರೇಗೌಡ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ರಂಗ ದಿಗ್ಗಜರು–ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯ ಮರೆಯಬಾರದ ಮಹನೀಯರು, ನಿರೂಪಣೆ ಮತ್ತು ಲೇಖನ–ಎಸ್.ರಾಮನಾಥ, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಕೆ.ಟಿ.ಉದಯಕಿರಣ್, ನಿತಿನ್ ರಾಜಾರಾಂ ಶಾಸ್ತ್ರಿ, ವ್ಯಾಖ್ಯಾನ–ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30–ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಚಿತ್ರಗೀತೆಗಳು, 9.00 ವೃತ್ತಿ ಮಾರ್ಗದರ್ಶನ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಶಕ್ತಿಧರ್. ವಿ. ಆರ್–ಕೊಳಲು ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ : ಟಿ.ನರಸೀಪುರ ತಾಲೂಕು ಬನ್ನೂರು ಹೋಬಳಿ ಮಾದಿಗಳ್ಳಿ ಗ್ರಾಮದ ರಾಜಮ್ಮ ಮತ್ತು ಸಂಗಡಿಗರಿಂದ ಭೈರವೇಶ್ವರನ ಹಾಡು, 1.00ಪ್ರಗತಿ ಪಥ –ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಪ್ರಥಮ್ ಭಟ್, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಸ್.ಶಶಾಂಕ್–ಕೊಳಲು ವಾದನ, 4.00 ಮಹಿಳಾರಂಗ, 4.45 ಹಿಂದಿ ಪಾಠ, ಪ್ರಸ್ತುತಿ: ಕಿಶೋರ್. ಎಂ. ಕಾಕಡೆ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಮೇವು ಮೆಲುಕು–ಮೇವಿನ ಬೆಳೆಗಳ ಬೇಸಾಯ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ, ಬಂಡೂರು ಕುರಿ ಸಾಕಾಣಿಕೆ. ಈ ಕುರಿತು ಟಿ.ನರಸೀಪುರ ತಾಲೂಕು ರಂಗ ಸಮುದ್ರದ ಪಿ.ರಮೇಶ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ನಕ್ಷತ್ರಲೋಕ–ಸಿನಿ ಸೆಲೆಬ್ರಿಟಿಗಳೊಂದಿಗೆ ಮಾತುಕತೆ ಹೆಸರಾಂತ ಸಂಗೀತ ನಿರ್ದೇಶಕ ಮನೋಮೂರ್ತಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುವವರು–ಪ್ರಭುಸ್ವಾಮಿ ಮಳಿಮಠ್ ಮತ್ತು ಶ್ರೀಮಾನ್. ಎಸ್., 9.30 ಕ್ರೀಡಾಲೋಕ, 10.00 ಹಳ್ಳಿ ಹಾಡು, ಭಾಗವಹಿಸುತ್ತಾರೆ–ಮಂಡ್ಯ ಜಿಲ್ಲೆ ಬಿ. ಗೌಡಗೆರೆಯ ನವೀನ್ ಕುಮಾರ್, ಪ್ರಸ್ತುತಿ: ಡಾ.ಮೈಸೂರು ಉಮೇಶ್, 10.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು

■ **ಇಂಡಿಯನ್ ರಬ್ಬರ್ ಇನ್ಸ್‌ಟಿಟ್ಯೂಟ್ :** ಡಾ. ಡಿ. ಬ್ಯಾನರ್ಜಿ ಸೆಂಟರ್ ಆಫ್ ಎಕ್ಸಲೆನ್ಸ್, ಪಾಲಿಮರ್ ಸೈನ್ಸ್ ಅಂಡ್ ರಬ್ಬರ್ ಟೆಕ್ನಾಲಜಿ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಜೆಕೆ ಟೈರ್ಸ್ ಸಿಎಂಡಿ ಡಾ. ರಘುಪತಿ ಸಿಂಘಾನಿಯಾ, ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ, ಉಪಸ್ಥಿತರು : ಡಾ. ಆರ್. ಮುಖ್ಯೋಪಾಧ್ಯಾಯ, ವಿ.ಕೆ. ಮಿಶ್ರಾ, ಪಿ.ಕೆ. ಮೊಹಮ್ಮದ್, ಸ್ಥಳ: ರಘುಪತಿ ಸಿಂಘಾನಿಯಾ ಸಭಾಂಗಣ, ಜೆಎಸ್‌ಎಸ್ ಕ್ಯಾಂಪಸ್, ಬೆಳಗ್ಗೆ 11.15ಕ್ಕೆ.

■ **ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರ :** ವಿಶ್ವ ನೃತ್ಯ ದಿನದ ಪ್ರಯುಕ್ತ 56ನೇ ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ ಮತ್ತು ಕಲೆಮನೆ ಕಲಾಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಮೈಸೂರಿನ ಇಸ್ಕಾನ್ ದೇವಾಲಯದ ಉಪಾಧ್ಯಕ್ಷ ಕಾರುಣ್ಯ ಸಾಗರ ದಾಸ, ಪ್ರಶಸ್ತಿ ಪುರಸ್ಕೃತರು : ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಮಾನಸ (ಸಾಹಿತ್ಯ ಕ್ಷೇತ್ರ), ಭರತನಾಟ್ಯ ನೃತ್ಯ ಕ್ಷೇತ್ರದಲ್ಲಿ : ಡಾ. ಕೆ. ಆರ್ ಸತ್ಯವತಿ, ಬೆಂಗಳೂರು, ಡಾ. ಪದ್ಮಪ್ರಿಯ ಮಣಿಕಂಠನ್.ಪಿ, ಚೆನ್ನೈ, ಗುರು ವಿದುಷಿ ಭಾವನಾ, ಬೆಂಗಳೂರು, ಸ್ಥಳ: ಕಲೆಮನೆ ಸಭಾಂಗಣ, ಮಧ್ಯಾಹ್ನ 3.30ಕ್ಕೆ.

■ **ಕರ್ನಾಟಕ ರಾಜ್ಯ ಭೀಮ್ ಸೇನೆ:** ಡಾ.ಅಂಬೇಡ್ಕರ್‌ರವರ 134ನೇ ಜಯಂತ್ಯುತ್ಸವ, ಬಸವೇಶ್ವರರ ಜಯಂತಿ, ಅಧ್ಯಕ್ಷತೆ : ಶಾಸಕ ಕೆ.ಹರೀಶ್‌ಗೌಡ, ಉದ್ಘಾಟನೆ: ಸಂಸದ ಯದುವೀರ್ ಒಡೆಯರ್, ಮುಖ್ಯ ಭಾಷಣ: ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ, ಸನ್ಮಾನಿತರು : ಕೆ.ವಿ.ಚೇತನ್, ಎಂ.ಪ್ರಕಾಶ್. ಕೆ.ಗಿರೀಶ್, ಮಹದೇವು, ಸ್ಥಳ: ಅಂಬೇಡ್ಕರ್ ಬಡಾವಣೆ, ಕುಂಬಾರಕೊಪ್ಪಲು, ಸಂಜೆ 6ಕ್ಕೆ.

ತಲಕಾಡಿನಲ್ಲಿಂದು

■ **ಜಿಲ್ಲಾ ಶರಣ ಸಾಹಿತ್ಯ ಪರಿಷತ್, ತಾಲೂಕು ಶರಣ ಸಾಹಿತ್ಯ ಪರಿಷತ್, ತಿ. ನರಸೀಪುರ, ಶ್ರೀ ಬಸವೇಶ್ವರ ಸೇವಾ ಸಂಘ, ತಲಕಾಡು :** ಶ್ರೀ ಬಸವೇಶ್ವರ ಜಯಂತಿ, ದತ್ತಿ ಉಪನ್ಯಾಸ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ಸಾಹಿತಿ ಕಿರಣ್ ಸಿಡ್ಲೇಹಳ್ಳಿ ಅವರಿಂದ ಬಸವಣ್ಣನವರ ಸಾಮಾಜಿಕ ಚಿಂತನೆಗಳು ಕುರಿತು ದತ್ತಿ ಉಪನ್ಯಾಸ, ಆಶಯ ನುಡಿ : ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ. ಚಂದ್ರಶೇಖರ್, ಅಧ್ಯಕ್ಷತೆ : ತಾಲೂಕು ಶರಣ ಸಾಹಿತ್ಯ ಪರಿಷತ್, ತಿ. ನರಸೀಪುರ ಅಧ್ಯಕ್ಷ ಸೋಮಶೇಖರಪ್ಪ ಕೆಬ್ಬೇಹುಂಡಿ, ಸ್ಥಳ: ಶ್ರೀ ಕರಿಬಸವೇಶ್ವರ ದೇವಸ್ಥಾನ, ಹಳೇ ಬೀದಿ, ತಲಕಾಡು.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 30 ಬುಧವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 15 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಉಗ್ರರ ಸಂಹರಿಸಲು ಸೇನೆ ಪೂರ್ಣ ಸ್ವತಂತ್ರ

ನವದೆಹಲಿ, ಏ.29– ಪಹಲ್ಗಾಮ್ ಭಯೋತ್ಪಾದಕ ದಾಳಿಯ ಬೆನ್ನಲ್ಲಿಯೇ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಇಂದು ಮಹತ್ವದ ಸಭೆ ನಡೆದಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಕೂಡ ಸಭೆಯಲ್ಲಿ ಹಾಜರಿದ್ದರು. ಪ್ರಧಾನಿ ನಿವಾಸದಲ್ಲಿ ನಡೆದ ಈ ಸಭೆಯಲ್ಲಿ ರಕ್ಷಣಾ ಸಿಬ್ಬಂದಿ ಮುಖ್ಯಸ್ಥ ಅನಿಲ್ ಚೌಹಾಣ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಧೋವಲ್ ಮತ್ತು ಮೂರು ಸಶಸ್ತ್ರ ಪಡೆಗಳ ಮುಖ್ಯಸ್ಥರು ಉಪಸ್ಥಿತರಿದ್ದರು. ಸಭೆ ಒಂದೂವರೆ ಗಂಟೆಗಳ ಕಾಲ ನಡೆಯಿತು.

ಈ ವೇಳೆ ಭಯೋತ್ಪಾದನೆ ವಿರುದ್ಧ ಕ್ರಮ ಕೈಗೊಳ್ಳಲು ಪ್ರಧಾನಿ ಮೋದಿ ಸೇನೆಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿದ್ದಾರೆ ಎಂದು ವರದಿಯಾಗಿದೆ. ಪಹಲ್ಗಾಮ್ ದಾಳಿಗೆ ಯಾವ ರೀತಿಯಲ್ಲಿ ಪ್ರತಿಕ್ರಿಯಿಸಬೇಕು, ಯಾವ ವಿಧಾನ, ಗುರಿ ಹಾಗೂ ಸಮಯವನ್ನು ಸೇನೆಯೇ ನಿರ್ಧರಿಸಬೇಕು ಎಂದು ಪ್ರಧಾನಿ ತಿಳಿಸಿದ್ದಾರೆ. ಸೇನೆಯ ಸಾಮರ್ಥ್ಯದಲ್ಲಿ ನಮಗೆ ಸಂಪೂರ್ಣ ನಂಬಿಕೆ ಇದೆ. ಭಯೋತ್ಪಾದನೆಗೆ ಸೂಕ್ತ ಉತ್ತರ ನೀಡುವುದು ರಾಷ್ಟ್ರೀಯ ಸಂಕಲ್ಪವಾಗಿದೆ ಎಂದು ಹೇಳಿದ್ದಾರೆ.

ಭಯೋತ್ಪಾದನೆಗೆ ಬಲವಾದ ಪ್ರತಿಕ್ರಿಯೆ ನೀಡುವುದು ತಮ್ಮ ದೃಢ ರಾಷ್ಟ್ರೀಯ ಸಂಕಲ್ಪ ಎಂದು ಪ್ರಧಾನಿ ಮೋದಿ ರಕ್ಷಣಾ ಅಧಿಕಾರಿಗಳಿಗೆ ತಿಳಿಸಿದರು ಮತ್ತು ಭಾರತೀಯ ಸಶಸ್ತ್ರ ಪಡೆಗಳ ವೃತ್ತಿಪರ ಸಾಮರ್ಥ್ಯಗಳಲ್ಲಿ ಸಂಪೂರ್ಣ ವಿಶ್ವಾಸ ವ್ಯಕ್ತಪಡಿಸಿದರು ಎಂದು ಮೂಲಗಳು ತಿಳಿಸಿವೆ.

ಭಾನುವಾರದ 'ಮನ್ ಕಿ ಬಾತ್' ಭಾಷಣದಲ್ಲಿ, ಪಹಲ್ಗಾಮ್ ದಾಳಿಯ ದುಷ್ಕರ್ಮಿಗಳು ಮತ್ತು ಪಿತೂರಿ ಮಾಡಿದವರಿಗೆ ಅತ್ಯಂತ ಕಠಿಣ ಪ್ರತಿಕ್ರಿಯೆ ನೀಡಲಾಗುವುದು ಎಂದು ಪ್ರಧಾನಿ ಪುನರುಚ್ಚರಿಸಿದ್ದರು.



ಪ್ರಧಾನಮಂತ್ರಿ ನರೇಂದ್ರ ಮೋದಿ ಮಂಗಳವಾರ ನವದೆಹಲಿಯಲ್ಲಿ ರಕ್ಷಣಾ ಸಚಿವ ರಾಜನಾಥ್‌ಸಿಂಗ್, ರಕ್ಷಣಾ ಸಲಹೆಗಾರ ಅಜಿತ್ ಧೋವಲ್, ರಕ್ಷಣಾ ಪಡೆಗಳ ಮುಖ್ಯಸ್ಥ ಅನಿಲ್ ಚೌಹಾಣ್, ಸೇನಾ ಮುಖ್ಯಸ್ಥ ಉಪೇಂದ್ರ ದ್ವಿವೇದಿ, ವಾಯುಪಡೆ ಮುಖ್ಯಸ್ಥ ಅಮರ್‌ಪ್ರೀತ್ ಸಿಂಗ್, ನೌಕಾಪಡೆ ಮುಖ್ಯಸ್ಥ ದಿನೇಶ್ ಕೆ. ತ್ರಿಪಾಠಿ ಅವರೊಂದಿಗೆ ಮಹತ್ವದ ಸಭೆ ನಡೆಸಿದರು.

ಭಯೋತ್ಪಾದನೆಯ ವಿರುದ್ಧದ ನಮ್ಮ ಹೋರಾಟದಲ್ಲಿ ಇಡೀ ಜಗತ್ತು 140 ಕೋಟಿ ಭಾರತೀಯರೊಂದಿಗೆ ನಿಂತಿದೆ. ಸಂತ್ರಸ್ತ ಕುಟುಂಬಗಳಿಗೆ ಮತ್ತು ನ್ಯಾಯ ಸಿಗಲಿದೆ ಎಂದು ನಾನು ಮತ್ತೊಮ್ಮೆ ಭರವಸೆ ನೀಡುತ್ತೇನೆ. ಈ ದಾಳಿಯ ಅಪರಾಧಿಗಳು ಮತ್ತು ಸಂಚುಕೋರರಿಗೆ ಅತ್ಯಂತ ಕಠಿಣ ಪ್ರತಿಕ್ರಿಯೆ ನೀಡಲಾಗುವುದು ಎಂದು ಅವರು ಹೇಳಿದ್ದರು. ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ, ಮಂಗಳವಾರ ಗೃಹ ಸಚಿವಾಲಯದಲ್ಲಿ ಮಹತ್ವದ ಸಭೆ ನಡೆಯಿತು. ಈ ಉನ್ನತ ಮಟ್ಟದ ಸಭೆಯಲ್ಲಿ ಗೃಹ ಸಚಿವ ಅಮಿತ್ ಶಾ ಜೊತೆಗೆ ರಾಷ್ಟ್ರೀಯ ಭದ್ರತಾ ಪಡೆ, ಗಡಿ ಭದ್ರತಾ ಪಡೆ, ಕೇಂದ್ರ ಮೀಸಲು ಪೊಲೀಸ್ ಪಡೆ ಮತ್ತು ಸಶಸ್ತ್ರ ಸೀಮಾ ಬಲ್ (SSB) ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಇಂದು ಕೇಂದ್ರ ಸಂಪುಟ ಸಭೆ

ನವದೆಹಲಿ, ಏ.29– ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಏಪ್ರಿಲ್ 22ರಂದು ನಡೆದ ಭಯೋತ್ಪಾದಕ ದಾಳಿಯ ನಂತರ ಮೊದಲ ಬಾರಿಗೆ ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಬುಧವಾರ ಬೆಳಗ್ಗೆ 11 ಗಂಟೆಗೆ ಕೇಂದ್ರ ಸಚಿವ ಸಂಪುಟ ಸಭೆ ನಡೆಯಲಿದೆ.

ಕಳೆದ ವಾರ ಕೇಂದ್ರ ಸಚಿವ ಸಂಪುಟದ ಯಾವುದೇ ಸಭೆ ನಡೆದಿರಲಿಲ್ಲ. ಏ.23 ರಂದು ಭದ್ರತೆ ಕುರಿತ ಸಂಪುಟ ಸಮಿತಿ ಸಭೆ ನಡೆದಿತ್ತು. ಭಯೋತ್ಪಾದಕ ದಾಳಿಯನ್ನು ಖಂಡಿಸಲಾಗಿತ್ತು. ಭದ್ರತಾ ಕುರಿತ ಸಂಪುಟ ಸಮಿತಿ ಸಭೆ ನಂತರ ಭಾರತ ಪಾಕಿಸ್ತಾನದೊಂದಿಗಿನ ರಾಜತಾಂತ್ರಿಕ ಸಂಬಂಧಗಳನ್ನು ಕಡಿಮೆ ಮಾಡುವುದು ಸೇರಿದಂತೆ ಇನ್ನಿತರ ಹಲವು ಕ್ರಮಗಳನ್ನು ಘೋಷಿಸಿತ್ತು. ಆರು ದಶಕಗಳ ಹಳೆಯದಾದ ಸಿಂಧೂ ನದಿ ನೀರು ಒಪ್ಪಂದ ರದ್ದು, ಕೂಡಲೇ ಅಟ್ಟಾರಿ ಗಡಿ ಬಂದ್ ಕ್ರಮ ಕೈಗೊಳ್ಳಲಾಗಿತ್ತು.

ಏ.22 ರಂದು ಕಾಶ್ಮೀರದ ಪಹಲ್ಗಾಮ್ ಬಳಿಯ ಜನಪ್ರಿಯ ಬೈಸರನ್ ಕಣಿವೆಯಲ್ಲಿ ಭಯೋತ್ಪಾದಕರು ನಡೆಸಿದ ಗುಂಡಿನ ದಾಳಿಯಲ್ಲಿ 28 ಪ್ರವಾಸಿಗರು ಸಾವನ್ನಪ್ಪಿದ್ದಾರೆ ಮತ್ತು ಹಲವರು ಗಾಯಗೊಂಡಿದ್ದಾರೆ. ಈ ಭಯೋತ್ಪಾದಕ ದಾಳಿಯು 2019 ರ ಪುಲ್ವಾಮಾ ದಾಳಿಯ ನಂತರ ಈ ಪ್ರದೇಶದಲ್ಲಿ ನಡೆದ ಅತ್ಯಂತ ಭೀಕರ ಘಟನೆಯಾಗಿದೆ.

ರೂಪಾಯಿ ಲಂಚವಿಲ್ಲದೆ 1000 ಗ್ರಾಮ ಆಡಳಿತಾಧಿಕಾರಿಗಳ ನೇಮಕ

- ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಮ್ಮೆ ನುಡಿ
- ನೂತನ ಗ್ರಾಮ ಆಡಳಿತಾಧಿಕಾರಿಗಳಿಗೆ ನೇಮಕಾತಿ ಆದೇಶ
- ಇದೇ ವೇಳೆ 'ಸಾಧನೆಯ ಹಾದಿ' ಪುಸ್ತಕ ಬಿಡುಗಡೆ



ಗ್ರಾಮ ಆಡಳಿತಾಧಿಕಾರಿಯಾಗಿ ಆಯ್ಕೆಯಾದವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ನೇಮಕಾತಿ ಆದೇಶ ನೀಡಿದರು.

ಬೆಂಗಳೂರು, ಏ.29(ಕೆಎಂಶಿ)– ಗ್ರಾಮ ಆಡಳಿತಾಧಿಕಾರಿಗಳ ನೇಮಕಾತಿಯನ್ನು ಒಂದು ರೂಪಾಯಿ ಲಂಚವಿಲ್ಲದೇ, ಮಧ್ಯವರ್ತಿಗಳ ಹಾವಳಿಯಿಲ್ಲದೇ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.

ನೂತನವಾಗಿ ಆಯ್ಕೆಯಾದ 1,000 ಗ್ರಾಮ ಆಡಳಿತಾಧಿಕಾರಿಗಳಿಗೆ ನೇಮಕಾತಿ ಆದೇಶ, 4,000 ಕ್ರೋಮ್‌ಬುಕ್ ವಿತರಣೆ ಹಾಗೂ ಸಾಧನೆಯ ಹಾದಿಯಲ್ಲಿ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದರು.

ಹಿಂದೆ 1994–95ರಲ್ಲಿ ಗೋವಿಂದೇಗೌಡರು ಶಿಕ್ಷಣ ಸಚಿವರಾಗಿದ್ದಾಗ ಒಂದು ಲಕ್ಷ ಉಪಾಧ್ಯಾಯರನ್ನು ಲಂಚವಿಲ್ಲದೇ, ಮಧ್ಯವರ್ತಿಗಳ ಹಾವಳಿ ಇಲ್ಲದೇ ನೇಮಕಾತಿ ಮಾಡಲಾಗಿತ್ತು. ಪ್ರಸ್ತುತ ಆರು ಲಕ್ಷ ಅರ್ಜಿಗಳಲ್ಲಿ ಒಂದು ಸಾವಿರ ಗ್ರಾಮ ಆಡಳಿತಾಧಿಕಾರಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ ಪರೀಕ್ಷೆಯಲ್ಲಿ ಮೆರಿಟ್ ಆಧಾರದ ಮೇಲೆ ಆಯ್ಕೆಯಾಗಿದ್ದಾರೆ.

ರಾಜ್ಯದಲ್ಲಿ 9834 ಗ್ರಾಮ ಆಡಳಿತಾಧಿಕಾರಿಗಳಿದ್ದು, 8003 ಜನ ಕಾರ್ಯನಿರ್ವಹಿಸುತ್ತಿದ್ದಾರೆ, ಪ್ರಸ್ತುತ 1,000 ಗ್ರಾಮ ಆಡಳಿತಾಧಿಕಾರಿಗಳು ಸೇರ್ಪಡೆಯಾಗುತ್ತಿದ್ದು, ಯಾವುದೇ ಗ್ರಾಮ ಆಡಳಿತಾಧಿಕಾರಿಯ ಹುದ್ದೆ ಖಾಲಿ ಇಲ್ಲದಂತೆ ಭರ್ತಿ ಮಾಡುವ ಕೆಲಸವನ್ನು ಸರ್ಕಾರ ಮಾಡಲಿದೆ ಎಂದರು. ಗ್ರಾಮ ಆಡಳಿತಾಧಿಕಾರಿಗಳು ಸಾಧ್ಯವಾದಷ್ಟು ಗ್ರಾಮಗಳಲ್ಲಿಯೇ ವಾಸ ಮಾಡಬೇಕು, ನಮ್ಮ ದೇಶ ಗ್ರಾಮಗಳ ದೇಶ, ಕೃಷಿ ಪ್ರಮುಖ ಉದ್ಯೋಗ, ಶೇ.60 ಕ್ಕೂ ಹೆಚ್ಚು ಜನ ಕೃಷಿ ಮೇಲೆ ಅವಲಂಬಿತರಾಗಿದ್ದಾರೆ.

ಜಮೀನುಗಳ ಲೆಕ್ಕ ಇಡುವುದು ಗ್ರಾಮ ಆಡಳಿತಾಧಿಕಾರಿಗಳ ಜವಾಬ್ದಾರಿ, ಹಳ್ಳಿಗಳಲ್ಲಿ ಶಾಂತಿ, ನೆಮ್ಮದಿ ನೆಲೆಸಲು ದಾಖಲಾತಿಗಳು ಕರಾರುವಾಕ್ಕಾಗಿ ಸರಿಯಾಗಿರಬೇಕು, ತಂತ್ರಜ್ಞಾನ, ■ 6ನೇ ಪುಟಕ್ಕೆ

ಶಾನ್‌ಭೋಗ್ರ ಮಾತ್ ಕೇಳಿದ್ರೆ ಸಿಎಂ ಆಗ್ತಿರ್ಲಿಲ್ಲ!

ಬೆಂಗಳೂರು, ಏ.29(ಕೆಎಂಶಿ)–ನಮ್ಮೂರ ಶಾನುಭೋಗರ ಮಾತಿಗೆ ತಲೆದೂಗಿದ್ದರೆ ಮುಖ್ಯಮಂತ್ರಿಯೇ ಆಗುತ್ತಿರಲಿಲ್ಲ ಎಂದು ಸಿದ್ದರಾಮಯ್ಯ ತಮ್ಮ ಬದುಕಿನ ಹಿಂದಿನ ಕ್ಷಣಗಳನ್ನು ಇಂದಿಲ್ಲಿ ಸ್ಮರಿಸಿದರು.

ವಕೀಲಿ ವೃತ್ತಿ ಮಾಡುವ ಸಂದರ್ಭದಲ್ಲಿ ತಾಲೂಕು ಮಂಡಳಿ ಚುನಾವಣೆಗೆ ಸ್ಪರ್ಧಿಸಿದಾಗ, ನಮ್ಮ ತಂದೆ, ಚುನಾವಣೆಗೆ ನಿಲ್ಲಿಸಬೇಕೇ, ಬೇಡವೇ ಎಂದು ಶಾನುಭೋಗರನ್ನು ಕೇಳಿದರು. ಚುನಾವಣೆಗೆ ನಿಂತರೆ ಹುಡುಗರು ದಾರಿ ತಪ್ಪುತ್ತಾರೆ, ಪೋಲಿಗಳಾಗುತ್ತಾರೆ, ಚುನಾವಣೆಗೆ ನಿಲ್ಲುವುದು ಬೇಡ ಎಂಬ ಶಾನುಭೋಗರ ಮಾತಿಗೆ ನಮ್ಮ ತಂದೆಯವರೂ ಹಠಕ್ಕೆ ಬಿದ್ದರು.

ನಂತರ ತಂದೆ ಅವರ ಮನವೊಲಿಸಿ ಚುನಾವಣೆಗೆ ನಿಲ್ಲುವ ಮೂಲಕ ಸಕ್ರಿಯ ರಾಜಕಾರಣ ಪ್ರವೇಶಿಸಿದೆ. ನನ್ನ ವಕೀಲಿ ವೃತ್ತಿಯಿಂದ ಸಂಪಾದಿಸಿದ್ದ 3,500 ರೂ. ವೆಚ್ಚ ಮಾಡಿದ್ದೆ. ಅಂದು ಶಾನುಭೋಗರ ಮಾತಿನಿಂದ ಹಿಂದೆ ಸರಿದಿದ್ದರೆ ನಾನು ಮೈಸೂರಿನಲ್ಲಿ ವಕೀಲನಾಗಿ ಇಲ್ಲವೇ ಊರಿನಲ್ಲಿ ಕೃಷಿಕನಾಗಿ ಇರುತ್ತಿದ್ದೆ. ಹಿಂದೆ ಗ್ರಾಮಗಳಲ್ಲಿ ಜಮೀನಿನ ವಿವರಗಳನ್ನು ■ 6ನೇ ಪುಟಕ್ಕೆ

ಶ್ರೀ ಚಾಮುಂಡೇಶ್ವರಿ, ಉತ್ತನಹಳ್ಳಿ ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನ 14 ಎಕರೆ ಭೂಮಿ ರಕ್ಷಣೆ

- ವ್ಯಾಪಕ ಅತಿಕ್ರಮಣ ತೆರವಿಗೆ ಮುಂದಾಗಿರುವ ಚಾಮುಂಡೇಶ್ವರಿ ಪ್ರಾಧಿಕಾರ
- ಈ ಭೂಮಿಯ ಮೌಲ್ಯ ಕೋಟಿ ಕೋಟಿ
- ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ ಸಲಹೆಗನುಸಾರ ಭೂಮಿ ರಕ್ಷಣೆ ಕಾರ್ಯ

ಮೈಸೂರು, ಏ.29(ಎಸ್‌ಬಿಡಿ)– ಮೈಸೂರಿನ ಶ್ರೀ ಚಾಮುಂಡೇಶ್ವರಿ ಅಮ್ಮನವರು ಹಾಗೂ ಉತ್ತನಹಳ್ಳಿ ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ದೇವಾಲಯಗಳಿಗೆ ಸೇರಿದ ಸುಮಾರು 50 ಕೋಟಿ ಮೌಲ್ಯದ 13 ಎಕರೆಗೂ ಹೆಚ್ಚು ಭೂಮಿಯನ್ನು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಕ್ಷಿಸಿದೆ.

ಚಾಮುಂಡಿಬೆಟ್ಟದ ದಾಸೋಹ ಭವನದಲ್ಲಿ ಕಳೆದ ಸೆಪ್ಟೆಂಬರ್ 3ರಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಪ್ರಥಮ ಸಭೆಯಲ್ಲಿ, ಪ್ರಾಧಿಕಾರ ವ್ಯಾಪ್ತಿಯ ದೇವಸ್ಥಾನಗಳಿಗೆ ಸೇರಿದ ಆಸ್ತಿ ಒತ್ತುವರಿಯನ್ನು ಪತ್ತೆಮಾಡಿ, ತೆರವುಗೊಳಿಸಲು ನಿರ್ಣಯಿಸಲಾಗಿತ್ತು ಈ ಸಂಬಂಧ ತ್ವರಿತ ಕ್ರಮಕ್ಕೆ ಮುಖ್ಯಮಂತ್ರಿಗಳು ಸೂಚಿಸಿದ್ದರು. ಈ ಹಿನ್ನೆಲೆಯಲ್ಲಿ ಕಾರ್ಯಾರಂಭಿಸಿದ ಪ್ರಾಧಿಕಾರದ ಅಧಿಕಾರಿಗಳು, ಖಾಸಗಿ ವ್ಯಕ್ತಿಗಳು ಅತಿಕ್ರಮಿಸಿಕೊಂಡಿದ್ದ ಉತ್ತನಹಳ್ಳಿ ವ್ಯಾಪ್ತಿಯ 6.34 ಎಕರೆ ಹಾಗೂ ಹಡಜನ ಚಿಕ್ಕೇಗೌಡನಹುಂಡಿ ಗ್ರಾಮ ವ್ಯಾಪ್ತಿಯ 6.16 ಎಕರೆ ಭೂಮಿಯನ್ನು ಸುಪರ್ದಿಗೆ ಪಡೆದಿದ್ದಾರೆ. ಅಲ್ಲದೆ ಉತ್ತನಹಳ್ಳಿ ದೇವಸ್ಥಾನದ ಸುತ್ತಮುತ್ತಲಿನ 17.24 ಎಕರೆ ಭೂಮಿಯನ್ನೂ ಬಂದೋಬಸ್ತ್ ಮಾಡಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿದ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪಾ, ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಪ್ರಾಧಿಕಾರದ ಪ್ರಥಮ ಸಭೆಯಲ್ಲಿ ನಿರ್ಣಯಿಸಿದಂತೆ ಜಿಲ್ಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಾಲಯ ■ 6ನೇ ಪುಟಕ್ಕೆ



ಶ್ರೀ ಚಾಮುಂಡೇಶ್ವರಿ ಹಾಗೂ ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ದೇವಸ್ಥಾನಗಳಿಗೆ ಸೇರಿದ ವಿವಿಧ ಸರ್ವೆ ನಂಬರ್‌ಗಳಲ್ಲಿದ್ದ ಆಸ್ತಿಯನ್ನು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಸುಪರ್ದಿಗೆ ತೆಗೆದುಕೊಂಡಿತು.

▶ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರವು ಶ್ರೀ ಚಾಮುಂಡೇಶ್ವರಿ ಹಾಗೂ ಉತ್ತನಹಳ್ಳಿ ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮ ದೇವಸ್ಥಾನಗಳ ಭೂಮಿ ಅತಿಕ್ರಮಣವನ್ನು ತೆರವುಗೊಳಿಸಿ, ದೇವಸ್ಥಾನಗಳ ಸುಪರ್ದಿಗೆ ಪಡೆದಿದೆ. ದೇವಸ್ಥಾನಗಳಿಗೆ ಸೇರಿದ ಆಸ್ತಿ ಸಂರಕ್ಷಣೆ ಕಾರ್ಯ ಮುಂದುವರೆಯಲಿದೆ.



-ಜಿ.ಲಕ್ಷ್ಮೀಕಾಂತ ರೆಡ್ಡಿ
ಜಿಲ್ಲಾಧಿಕಾರಿ

▶ ಸದ್ಯ ಜಿಲ್ಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಶ್ರೀ ಚಾಮುಂಡೇಶ್ವರಿ ಹಾಗೂ ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನ ದೇವಸ್ಥಾನಗಳಿಗೆ ಸೇರಿದ ಅಪಾರ ಪ್ರಮಾಣದ ಆಸ್ತಿಯನ್ನು ರಕ್ಷಿಸಲಾಗಿದೆ. ಆ ಜಾಗಗಳಲ್ಲಿ 'ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಸ್ವತ್ತು' ಫಲಕ ಅಳವಡಿಸಿ, ಕಾಂಪೌಂಡ್ ನಿರ್ಮಿಸಲಾಗುತ್ತಿದೆ. ದೇವಸ್ಥಾನಗಳ ಹೆಸರಿನಲ್ಲಿ ಇನ್ನೂ ಸಾಕಷ್ಟು ಆಸ್ತಿಗಳಿವೆ ಎನ್ನಲಾಗುತ್ತಿದ್ದು, ಅವುಗಳನ್ನು ಗುರುತಿಸಿ ನಿಯಮಾನುಸಾರ ಸುಪರ್ದಿಗೆ ಪಡೆಯುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುವುದು.



-ಎಂ.ಜೆ.ರೂಪಾ, ಕಾರ್ಯದರ್ಶಿ
ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ

ಚಾಮುಂಡೇಶ್ವರಿ ಕ್ಷೇತ್ರದ ಲೋಗೋ ಮಾಡಿ ಬಹುಮಾನ ಗೆಲ್ಲಿ

ಮೈಸೂರು, ಏ.29(ಬಿಎಲ್‌ಯು)– ಮೈಸೂರಿನ ಚಾಮುಂಡಿಬೆಟ್ಟದಲ್ಲಿ ನಾಡದೇವತೆ ತಾಯಿ ಚಾಮುಂಡೇಶ್ವರಿ ಕ್ಷೇತ್ರದ ಮಹತ್ವ ಸಾರುವ ಲೋಗೋ ಮಾಡಿ ಬಹುಮಾನ ಗೆಲ್ಲುವ ಅವಕಾಶವನ್ನು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ನೀಡಿದೆ.



ಕ್ರಿಯಾಶೀಲತೆಯ ಮೂಲಕ ಜಗನ್ಮಾತೆಯ ಸೇವೆ ಮಾಡುವ ಅಪೂರ್ವ ಅವಕಾಶವನ್ನು ನೀಡಿರುವ ಪ್ರಾಧಿಕಾರ, ಶ್ರೀ ಕ್ಷೇತ್ರದ ಮಹತ್ವ ಸಾರುವ ಲೋಗೋ ಮೂಲಕ ನಿಮ್ಮ ಪ್ರತಿಭೆ ಅನಾವರಣ ಮಾಡುವ ಅವಕಾಶ ಕಲ್ಪಿಸಿದೆ. ಒಂದು ಆಕರ್ಷಕ ಲೋಗೋ ಮತ್ತು ಒಂದು ಸಾಲುನುಡಿ ನೀಡುವ ಸ್ಪರ್ಧೆ ಹಾಗೂ ವಿಭಿನ್ನವಾದ ಸ್ಮರಣಿಕೆಯ ಸ್ಪರ್ಧೆ ಕೂಡ ನೀಡಲಾಗಿದೆ. ಪ್ರಥಮ ಬಹುಮಾನಕ್ಕೆ 20 ಸಾವಿರ, ದ್ವಿತೀಯ ಬಹುಮಾನಕ್ಕೆ 10 ಸಾವಿರ ಹಾಗೂ ತೃತೀಯ ಬಹುಮಾನಕ್ಕೆ 5 ಸಾವಿರ ಹಾಗೂ ಭಾಗವಹಿಸಿದ ಪ್ರತಿಯೊಬ್ಬ ಸ್ಪರ್ಧಿಗೆ ಪ್ರಮಾಣ ಪತ್ರ ನೀಡಲಾಗುವುದು.

ಅರ್ಜಿ ಸಲ್ಲಿಸಲು ಕ್ಯೂಆರ್ ಕೋಡ್ ಬಳಸಿ ಅಥವಾ https//forms.gie/xpdzl.42CaMC3ogq89 ಸಂಪರ್ಕಿಸಬಹುದು. ನಿಮ್ಮ ವಿನ್ಯಾಸ ಕಲ್ಪನೆಯ ಬಗ್ಗೆ 200 ವಾಕ್ಯಗಳಲ್ಲಿ ವಿವರಿಸಿ. ಹೆಚ್ಚಿನ ಮಾಹಿತಿಗೆ 7411564510 ಸಂಪರ್ಕಿಸಬಹುದು. ಅರ್ಜಿ ಸಲ್ಲಿಕೆಗೆ ಮೇ 28 ಕೊನೆಯ ದಿನವಾಗಿದೆ.

13 ದಿನದ ಹಿಂದೆ ನಾಪತ್ತೆಯಾಗಿದ್ದ ತಂದೆ, ಇಬ್ಬರು ಮಕ್ಕಳು ವಿಶ್ವೇಶ್ವರಯ್ಯ ನಾಲೆಯಲ್ಲಿ ಶವವಾಗಿ ಪತ್ತೆ

- ಸ್ಯಾಂಟ್ರೊ ಕಾರಿನಲ್ಲಿ ತಂದೆ, ಮಕ್ಕಳ ದೇಹ ಪತ್ತೆ
- ಬೆಂಗಳೂರು ಮಾದನಾಯಕನಹಳ್ಳಿ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಾಗಿತ್ತು
- ಇದು ಆತ್ಮಹತ್ಯೆಯೋ, ಅಪಘಾತವೋ ಎಂಬುದರ ಬಗ್ಗೆ ತನಿಖೆ



ವಿಶ್ವೇಶ್ವರಯ್ಯ ನಾಲೆಯಿಂದ ಕಾರನ್ನು ಮೇಲೆತ್ತುತ್ತಿರುವುದು.

ಮಂಡ್ಯ, ಏ.29(ಮೋಹನ್‌ರಾಜ್)– ಕಳೆದ 13 ದಿನಗಳ ಹಿಂದೆ ನಾಪತ್ತೆಯಾಗಿದ್ದ ತಂದೆ ಹಾಗೂ ಇಬ್ಬರು ಮಕ್ಕಳು ಮಂಗಳವಾರ ಜಿಲ್ಲೆಯ ಕೆಆರ್‌ಎಸ್ ಡ್ಯಾಂನ ನಾರ್ತ್ ಬ್ಯಾಂಕ್ ಬಳಿ ಇರುವ ವಿಶ್ವೇಶ್ವರಯ್ಯ ನಾಲೆಯಲ್ಲಿ ಶವವಾಗಿ ಪತ್ತೆಯಾಗಿದ್ದಾರೆ. ಈ ಮೂವರ ಶವಗಳು ಸ್ಯಾಂಟ್ರೊ ಕಾರಿನಲ್ಲಿ(ಕೆ.ಎ.02 ಎಂಬಿ 6120) ಪತ್ತೆಯಾಗಿದ್ದು, ಇದು ಆತ್ಮಹತ್ಯೆಯೋ ಅಥವಾ ಅಪಘಾತವೋ ಎಂಬುದು ಪೊಲೀಸರ ತನಿಖೆಯಿಂದ ತಿಳಿಯಬೇಕಾಗಿದೆ.

ಘಟನೆಯಲ್ಲಿ ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲೂಕಿನ ಹೆಬ್ಬಾಳ ಗ್ರಾಮದ ಕುಮಾರಸ್ವಾಮಿ (39), ಆತನ ಮಗ ಅದ್ವಿತ್ (7) ಹಾಗೂ ಪುತ್ರಿ ಅಕ್ಷರ (3) ಸಾವನ್ನಪ್ಪಿರುವವರಾಗಿದ್ದಾರೆ. ಇಂದು ವಿಶ್ವೇಶ್ವರಯ್ಯ ನಾಲೆಯಲ್ಲಿ ನೀರು ಕಡಿಮೆಯಾದಾಗ ಸ್ಯಾಂಟ್ರೊ ಕಾರೊಂದು ತೇಲುತ್ತಿದ್ದ ದೃಶ್ಯ ಕಂಡು ಬಂದಿದೆ ತಕ್ಷಣ ಸ್ಥಳೀಯರು ಪೊಲೀಸರಿಗೆ ಸುದ್ದಿ ಮುಟ್ಟಿಸಿದಾಗ ಕೆಆರ್‌ಎಸ್ ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಅಗ್ನಿಶಾಮಕ ಸಿಬ್ಬಂದಿ ಸಹಾಯದೊಂದಿಗೆ ಕಾರನ್ನು ಮೇಲೆತ್ತಿದಾಗ ಕಾರಿನಲ್ಲಿ ಮೂರು ಮಂದಿಯ ಶವ ಇರುವುದು ಪತ್ತೆಯಾಗಿದೆ. ಘಟನಾ ಸ್ಥಳಕ್ಕೆ ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಕೆಆರ್‌ಎಸ್ ಠಾಣೆಯ ಪಿಎಸ್‌ಐ ಮತ್ತು ಡಿವೈಎಸ್ಪಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಎಸ್ಪಿ ಮಲ್ಲಿಕಾರ್ಜುನ ■ 6ನೇ ಪುಟಕ್ಕೆ



ತನ್ನಿಬ್ಬರು ಮಕ್ಕಳೊಂದಿಗೆ ಕುಮಾರಸ್ವಾಮಿ.

ಕಲ್ಲಿಗೆ ಡಿಕ್ಕಿ ಹೊಡೆದು ಕಾರು ನಾಲೆಗೆ ಉರುಳಿದೆ

ಮೈಸೂರು, ಏ. 29(ಆರ್‌ಕೆ)– ಶಾರ್ಟ್‌ಕಟ್‌ನಲ್ಲಿ ಪ್ರಯಾಣಿಸಲೆಂದು ಹೋಗುತ್ತಿದ್ದ ಕುಮಾರಸ್ವಾಮಿ, ಕಲ್ಲಿಗೆ ಡಿಕ್ಕಿ ಹೊಡೆದ ಪರಿಣಾಮ ಕಾರು ಚಾಲಕನ ನಿಯಂತ್ರಣ ತಪ್ಪಿ ವಿಸಿ ನಾಲೆಗೆ ಹಾರಿ, ಉರುಳಿ ಬಿದ್ದಿದೆ ಎಂದು ಶ್ರೀರಂಗಪಟ್ಟಣ ಡಿವೈಎಸ್ಪಿ ಶಾಂತಮಲ್ಲಪ್ಪ ತಿಳಿಸಿದ್ದಾರೆ. ಪ್ರಕರಣ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು, ಇಬ್ಬರು ಮಕ್ಕಳೊಂದಿಗೆ ಕೆಆರ್‌ಎಸ್‌ಗೆ ಧಾವಿಸಿದ್ದ ಕುಮಾರಸ್ವಾಮಿ, ಬೃಂದಾವನ ತೋರಿಸಿಕೊಂಡು ಅಂದೇ ಕೆಆರ್ ನಗರದಲ್ಲಿರುವ ತಂದೆಯೊಂದಿಗೆ ಮಾತನಾಡಿ ಊರಿಗೆ ಬರುವುದಾಗಿ ತಿಳಿಸಿದ್ದಲ್ಲದೇ, ಮಕ್ಕಳಿಗೂ ಫೋನ್ ಕೊಟ್ಟು ಮಾತನಾಡಿಸಿದ್ದಾರೆ ಎಂದರು.

ಶಾರ್ಟ್‌ಕಟ್‌ನಲ್ಲಿ ಹೋಗಲೆಂದು ಕಾಲುವೆ ಪಕ್ಕದ ಮಣ್ಣಿನ ರಸ್ತೆಯಲ್ಲಿ ತೆರಳುತ್ತಿದ್ದಾಗ ಕಲ್ಲಿಗೆ ಗುದ್ದಿದ ಕಾರು ನಿಯಂತ್ರಣ ತಪ್ಪಿ ವಿಸಿ ನಾಲೆಗೆ ಉರುಳಿದೆ. ಕಿಟಕಿ ಗಾಜು ಬಂದ್ ಆಗಿದ್ದು, ಡೋರ್ ತೆರೆದುಕೊಳ್ಳದ ಕಾರಣ, ಕಾರಿನಲ್ಲಿದ್ದ ಮೂವರೂ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಇದು ಕಾರು ಅಪಘಾತವೇ ಹೊರತು, ಆತ್ಮಹತ್ಯೆಯಲ್ಲ ಎಂಬುದು ಸ್ಥಳದಲ್ಲಿ ದೊರೆತ ಸಾಕ್ಷ್ಯಾಧಾರಗಳಿಂದ ಕಂಡುಬಂದಿದೆ ಎಂದರು. ಕಲ್ಲಿಗೆ ಗುದ್ದಿರುವುದರಿಂದ ಕಾರಿನ ಮುಂಭಾಗ ಜಖಂಗೊಂಡಿದ್ದು, ನೀರಿನಲ್ಲಿ ಕಾರು ಮುಳುಗಿರುವುದರಿಂದ ಕುಮಾರಸ್ವಾಮಿ ಬಳಿ ಇದ್ದ ಮೊಬೈಲ್ ಫೋನ್ ಸ್ವಿಚ್‌ಆಫ್ ಆಗಿರಬಹುದೆಂದು ಶಂಕಿಸಲಾಗಿದೆ ಎಂದು ಶಾಂತಮಲ್ಲಪ್ಪ ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಡಿಜೆ : ಸರ್ ಎಷ್ಟು ಹೊತ್ತಿನ ತನಕ ಡ್ಯಾನ್ಸ್
ಮಾಲೀಕ : 6-7 ಪೆಗ್ ಹಾಕೋ ತನಕ ಮಾತ್ರ
ಡಿಜೆ : ಆಮೇಲೆ
ಮಾಲೀಕ : ಕುಡುಕ ನನ್ನ ಮಕ್ಳು, ಜನರೇಟರ್ ಸೌಂಡಿಗೆ ಕುಣಿತಾವೆ.

ಮೈಸೂರು ಮಿತ್ರ

ಬುಧವಾರ, 30 ಏಪ್ರಿಲ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಸೋತೆ ಎಂದು ನೀ ಮುಂದಿಟ್ಟ ಹೆಜ್ಜೆ ಹಿಂದಿಡಬೇಡ. ಏಕೆಂದರೆ, ಯಾರಿಗೆ ಗೊತ್ತು ಆ ಹೆಜ್ಜೆ ನಿನ್ನ ಇತಿಹಾಸವನ್ನೇ ಸೃಷ್ಟಿ ಮಾಡುವ ಹೆಜ್ಜೆಯಾಗಿರಬಹುದು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬೆಳ್ಳಗಿರೋದೆಲ್ಲ ಹಾಲಲ್ಲ, ಹೊಳೆಯೋದೆಲ್ಲ ಚಿನ್ನ ಅಲ್ಲ

ನಿಮ್ಮ ಪತ್ರಗಳು

ಬಸವ ಜಯಂತಿ ಆಚರಣೆ ಅರ್ಥಪೂರ್ಣವಾಗಿರಲಿ

ಮಾನ್ಯರೇ,

ಭಕ್ತಿ, ಜ್ಞಾನ, ಕಾಯಕ ಮತ್ತು ದಾಸೋಹದ ಮಹತ್ವವನ್ನು ಸಾರಿದ ಭಕ್ತಿ ಭಂಡಾರಿ ಬಸವಣ್ಣನವರ ಜಯಂತಿಯನ್ನು ನಾವು ಆಚರಿಸುತ್ತಿದ್ದೇವೆ. ಆದರೆ ಬಸವಣ್ಣನವರ ವಚನಗಳನ್ನು ಓದಿದರೆ ಅವರು ಎಂದಿಗೂ ಕಿರೀಟ ಧರಿಸಿರಲು ಸಾಧ್ಯವಿಲ್ಲ. ಉತ್ತರ ಕರ್ನಾಟಕದ ಜನರಂತೆ ಪೇಟ ಧರಿಸಿರಬಹುದು. ಆದ್ದರಿಂದ ನಾವು ವಚನಗಳ ತಾಳೆ ಗರಿಗಳನ್ನು ಹಿಡಿದಿರುವ ಬಸವಣ್ಣನವರ ಕಲ್ಪನಾ ಚಿತ್ರವನ್ನು ಜಯಂತಿಯ ದಿನದಂದು ಪ್ರದರ್ಶಿಸೋಣ. ಅದ್ದೂರಿ ಮೆರವಣಿಗೆ ಮತ್ತು ಕಾರ್ಯಕ್ರಮ ಮಾಡಿ ಭರ್ಜರಿಯಾಗಿತ್ತು ಎಂದು ಹೇಳುವುದರ ಬದಲಾಗಿ ಹಸಿದವರಿಗೆ ಅನ್ನ ನೀಡುವ ಕಾಯಕ ಮತ್ತು ಜ್ಞಾನದ ಹಸಿವಿರುವವರಿಗೆ ವಚನಗಳ ಸಾರ ತಿಳಿಸುವ ಪುಸ್ತಕಗಳನ್ನು ಹಂಚುವ ಕಾರ್ಯ ಮಾಡೋಣ. ಈ ದಿಸೆಯಲ್ಲಿ ಮೈಸೂರಿನ ವಿವಿಧ ಸಂಘಟನೆಗಳು ಬಸವ ಜಯಂತಿಯನ್ನು ಆಚರಿಸುವಾಗ ಈ ಅಂಶಗಳನ್ನು ಮರೆಯದಿರಿ. ಜೊತೆಗೆ ಎಲ್ಲ ವರ್ಗದವರನ್ನು ಸೇರಿಸಿಕೊಂಡು ಜಯಂತಿಯನ್ನು ಆಚರಿಸಬೇಕೆಂದು ಮನವಿ.

– ಜಗದೀಶ ಬಿ ಹೊಸೂರು, ಜೆಎಸ್ಎಸ್ ನಗರ, ಮೈಸೂರು.

ಅಪರಾಧ ಮತ್ತು ಶಿಕ್ಷೆ!



ಮಾನ್ಯರೆ,

ಸಮವಸ್ತ್ರ ಧರಿಸಿ ಕರ್ತವ್ಯ ನಿರ್ವಹಿಸುತ್ತಿದ್ದ ಪೊಲೀಸ್ ವರಿಷ್ಠಾಧಿಕಾರಿಯ ಮೇಲೆ ಸಾರ್ವಜನಿಕರ ಎದುರೇ ಮುಖ್ಯಮಂತ್ರಿಗಳು ಕೈ ಎತ್ತಿದ್ದಾರೆ. ಇದು ಅಪರಾಧಿಕ ಬಲಪ್ರಯೋಗ! ಇದು ಶಿಕ್ಷಾರ್ಹ ಅಪರಾಧವೂ ಹೌದು.

ಸಾರ್ವಜನಿಕ ಕರ್ತವ್ಯ ಪಾಲನೆಯಲ್ಲಿ ತೊಡಗಿರುವ ಸಾರ್ವಜನಿಕ ನೌಕರನ ಮೇಲೆ ಅಪರಾಧಿಕ ಬಲ ಪ್ರಯೋಗ ಮಾಡಲು ಪ್ರಯತ್ನಿಸುವುದು ಭಾರತೀಯ ನ್ಯಾಯ ಸಂಹಿತೆ, 2023ರ ಸೆಕ್ಷನ್ 132ರ ಅನ್ವಯ ಶಿಕ್ಷಾರ್ಹ ಅಪರಾಧ. ಇಂತಹ ಅಪರಾಧ ಎಸಗಿದ ಅಪರಾಧಿಗೆ ಎರಡು ವರ್ಷಗಳ ಸೆರೆವಾಸ ಹಾಗೂ ದಂಡ ವಿಧಿಸಬಹುದು.

ಮುಖ್ಯಮಂತ್ರಿಗಳ ಭಾಷಣದ ಸಮಯದಲ್ಲಿ ಕಪ್ಪು ಬಾವುಟ ಪ್ರದರ್ಶಿಸಿದ ಮಹಿಳೆಯರ ವಿರುದ್ಧ ಎಫ್ಐಆರ್ ದಾಖಲಿಸಿ ಪೌರುಷ ಪ್ರದರ್ಶಿಸಿದ ಪೊಲೀಸರಿಗೆ ತಮ್ಮ ಮೇಲಾಧಿಕಾರಿಯ ಮೇಲೆ ಕೈ ಎತ್ತಿದ ಮುಖ್ಯಮಂತ್ರಿಗಳ ವಿರುದ್ಧ ಎಫ್ ಐ ಆರ್ ದಾಖಲಿಸುವ ಧೈರ್ಯ ಇಲ್ಲವೇ? ಇಂತಹ ಪ್ರಕರಣಗಳಲ್ಲಿ ದೂರು ನೀಡುವ ತಾಕತ್ತು, ಧೈರ್ಯ, ಸಾಮರ್ಥ್ಯ ನೊಂದ ಅಧಿಕಾರಿಗೆ ಇರಬೇಕು ಅಷ್ಟೇ!

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ ಮೈಸೂರು

ಆಗ ಸಿಕ್ಸರ್ ಸಿದ್ದು ಈಗ ಸಿಕ್ಸರ್ ಸೂರ್ಯವಂಶಿ



ಮಾನ್ಯರೆ,

ಅಬ್ಬಾ! ಯಾರೂ ನಿರೀಕ್ಷೆಯೇ ಮಾಡದಂಥ ಆಟ ಅಡಿದ 14 ವರ್ಷದ ಪೋರ ವೈಭವ ಸೂರ್ಯವಂಶಿ ಕೇವಲ 35 ಎಸೆತಗಳಲ್ಲಿ 4 ಬೌಂಡರಿ, 11 ಸಿಕ್ಸರ್ ಸಿಡಿಸಿ, ಶತಕ ದಾಖಲಿಸಿ ಐಪಿಎಲ್‌ನಲ್ಲಿ ವೇಗದ ಶತಕ ಬಾರಿಸಿದ ಅತೀ ಕಿರಿಯ ಆಟಗಾರ ಎಂದು ಇತಿಹಾಸ ನಿರ್ಮಿಸಿ ಇಡೀ ಕ್ರಿಕೆಟ್ ಜಗತ್ತೇ ನಿಬ್ಬೆರಗಾಗುವಂತೆ ಮಾಡಿರುವುದು ತುಂಬಾ ಶ್ಲಾಘನೀಯ. ಯಾವುದೇ ತೆರನಾದ ಹಮ್ಮು ಬಿಮ್ಮು ಇಲ್ಲದ ಆಟ ಆಡಿ, ಶತಕ ಬಾರಿಸಿದಾಗಲು ಸ್ವಲ್ಪವೂ ಉದ್ವೇಗ, ಆವೇಶ, ಕುಣಿದು ಕುಪ್ಪಳಿಸದೇ ಸ್ಥಿತಪ್ರಜ್ಞ ವ್ಯಕ್ತಿತ್ವದಿಂದ ಪ್ರತಿಯೊಬ್ಬರ ಮನವನ್ನು ಸೆಳೆದಿದ್ದಾರೆ. ಐಪಿಎಲ್‌ಗೆ ಪದಾರ್ಪಣೆ ಮಾಡಿ ಆಡಿದ ಮೊದಲ ಬಾಲ್‌ಗೆ ಸಿಕ್ಸರ್ ಹೊಡೆದಿರುವುದು ಸಹ ಗಮನಾರ್ಹ. ರಾಜಸ್ಥಾನ ರಾಯಲ್ಸ್ ವೈಭವ ಸೂರ್ಯವಂಶಿ ಅವರ ಆಟವನ್ನು ಗುರುತಿಸಿ ಅವಕಾಶ ಮಾಡಿಕೊಟ್ಟಿರುವುದು ಎಲ್ಲರೂ ಮೆಚ್ಚುವಂತದ್ದು. ವೈಭವ್ ಸೂರ್ಯವಂಶಿ, ಸಚಿನ್ ತೆಂಡೂಲ್ಕರ್ ಅವರಂತೆ ಕ್ರಿಕೆಟ್ ಜಗತ್ತಿನ ಧ್ರುವತಾರೆಯಾಗಿ ಬೆಳಗುವ ಎಲ್ಲಾ ಲಕ್ಷಣಗಳು ಇರುವಂತಹ ಆಟಗಾರ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ನಗರ ಪಾಲಿಕೆ ಆಯುಕ್ತರ ಗಮನಕ್ಕೆ

ಮಾನ್ಯರೇ

ಮೈಸೂರಿನ ಕ್ಯಾತಮಾರನಹಳ್ಳಿ ದೊಡ್ಡ ಗರಡಿ ಮುಖ್ಯ ರಸ್ತೆ ಹಾಗೂ ಸಿದ್ದಪ್ಪಾಜಿ ದೇವಸ್ಥಾನದ ಹಿಂಭಾಗದ ರಸ್ತೆಯ ಕನ್ಸರ್ವೆನ್ಸಿ (ಗಲ್ಲಿ)ರಸ್ತೆಯನ್ನು ಕಾಂಕ್ರೀಟ್ ರಸ್ತೆಯಾಗಿ ಪರಿವರ್ತಿಸಲು ಅಗೆದು ತಿಂಗಳಾಗಿದೆ. ಆದರೂ ಯಾರು ಕಾಮಗಾರಿ ಪೂರ್ಣಗೊಳಿಸಲು ತಲೆಕೆಡಿಸಿಕೊಳ್ಳುತ್ತಿಲ್ಲ. ಈ ಅಗೆದ ರಸ್ತೆಯಲ್ಲೇ ವಯಸ್ಸಾದವರು, ಮಕ್ಕಳು ಮತ್ತು ಅನಾರೋಗ್ಯದವರು ನಡೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೂಡಲೇ ಸಂಬಂಧಪಟ್ಟವರು ರಸ್ತೆ ಸರಿಪಡಿಸಬೇಕೆಂದು ಈ ಮೂಲಕ ಮನವಿ.

–ಕ್ಯಾತಮಾರನಹಳ್ಳಿ ಗ್ರಾಮಸ್ಥರು, ಮೈಸೂರು


ಉಗ್ರರ ಪೈಶಾಚಿಕ ಕೃತ್ಯಕ್ಕೆ ಭಾರತ ತಕ್ಕ ಉತ್ತರ

ಮಾನ್ಯರೆ,

ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ಪೈಶಾಚಿಕ ಕೃತ್ಯಕ್ಕೆ ಭಾರತ ಯಾವ ರೀತಿ ಉತ್ತರಿಸಲು ಸಜ್ಜಾಗುತ್ತಿದೆ ಎಂಬುದು ಪ್ರಧಾನಿಯವರ ಉನ್ನತ ಮಟ್ಟದ ಸಭೆಗಳೇ ನಿದರ್ಶನ. ಮೋದಿ ಸಮರ ಸಿದ್ಧತೆಗೆ ವಿಶ್ವದ ಹಲವು ರಾಷ್ಟ್ರಗಳು ಅದರಲ್ಲೂ ವಿಶೇಷವಾಗಿ ಇಸ್ರೇಲ್ ಸೇರಿ ಹಲವು ಮುಸ್ಲಿಂ ರಾಷ್ಟ್ರಗಳೂ ಭಾರತದ ನಿಲುವನ್ನು ಬೆಂಬಲಿಸುತ್ತಿರುವುದು ಪ್ರಕರಣದ ತೀಕ್ಷ್ಣತೆಯ ಅರಿವು ಮೂಡಿಸುವಂತಿದೆ. ಅಮೇರಿಕಾ, ಇಂಗ್ಲೆಂಡ್, ಫ್ರಾನ್ಸ್, ರಷ್ಯಾ ದೇಶಗಳೂ ಬಹಿರಂಗವಾಗಿಯೇ ಬೆಂಬಲ ಘೋಷಿಸಿರುವುದು ಪಾಕಿಸ್ತಾನದ ಜಂಘಾಬಲವೇ ಹುದುಗಿಹೋದಂತಾಗಿದೆ. ಭಾರತ ಒಂದೊಮ್ಮೆ ಯುದ್ಧಕ್ಕೆ ಮುಂದಾದರೂ ತಮ್ಮ ಬೆಂಬಲವಿದೆ ಎಂಬುದು ಮೋದಿಯವರ ಮನೋಬಲ ದ್ವಿಗುಣಗೊಳಿಸಿದೆ.

ಇಷ್ಟೆಲ್ಲ ನಡೆಯುತ್ತಿದ್ದರೂ, ಪಾಕಿಸ್ತಾನ ಬಡಾಯಿ ಕೊಚ್ಚಿಕೊಳ್ಳುವುದನ್ನು ಮಾತ್ರ ಬಿಟ್ಟಿಲ್ಲ. ಈಗಾಗಲೇ ಪಾಕ್ ಸೇನಾ ಮುಖ್ಯಸ್ಥ ನಾಪತ್ತೆ ! 1450 ಪಾಕ್ ಸೇನಾಯೋಧರು ಹುದ್ದೆಗೆ ರಾಜೀನಾಮೆ! ಆದರೂ ನೀಚಬುದ್ಧಿ ಬಿಡದೆ, ಸತತ 4ನೇ ದಿನವೂ ಪಾಕ್ ಕದನ ವಿರಾಮ ಉಲ್ಲಂಘಿಸಿದೆ. ಇವೆಲ್ಲವೂ ಹೇಳುವುದೊಂದೇ, ಪಾಕಿಸ್ತಾನದ ಅವಸಾನ ಆರಂಭವಾಗಿದೆ. ಇನ್ನಾದರೂ ಕಾಲು ಕೆದಕಿ ಜಗಳಕ್ಕೆ ಮುಂದಾಗದೇ, ತನ್ನ ತಪ್ಪನ್ನು ಒಪ್ಪಿಕೊಂಡರೆ ಉಳಿದೀತು. ಇಲ್ಲವಾದರೆ ಅಳಿಗಾಲ ಶತಃಸಿದ್ಧ!

–ಶಂಕರನಾರಾಯಣ ಭಟ್, ಜಯಲಕ್ಷ್ಮಿಪುರಂ, ಮೈಸೂರು



ಡಾ. ಹೆಚ್.ವಿ. ನಾಗರಾಜ ರಾವ್
ಸಂಸ್ಕೃತ ವಿದ್ವಾಂಸರು, ಮೈಸೂರು.

ಸಂಸ್ಕೃತಿ ಚಿಂತನಾ

ವೈಶಾಖ ಮಾಸದಲ್ಲಿನ ವೈಶಿಷ್ಟ್ಯ


ಬಸವೇಶ್ವರರು


ಶಂಕರಾಚಾರ್ಯರು


ರಾಮಾನುಜಾಚಾರ್ಯರು


ಭಗವಾನ್ ಬುದ್ಧ

ವರ್ಷದ ಮಾಸಗಳಲ್ಲಿ ಎರಡನೆಯದಾದ ವೈಶಾಖ ಮಾಸವು ಧಾರ್ಮಿಕ ದೃಷ್ಟಿಯಿಂದ ಅನೇಕ ವೈಶಿಷ್ಟ್ಯಗಳನ್ನು ಹೊಂದಿದೆ. ಇದರಲ್ಲಿ ಹಲವರು ಮಹಾನುಭಾವರು ಹುಟ್ಟಿ ಲೋಕೋಪಕಾರವನ್ನು ಮಾಡಿದ್ದಾರೆ. ಈ ತಿಂಗಳ ಶುಕ್ಲ ಪಕ್ಷದ ತೃತೀಯಾ ಅಥವಾ ತದಿಗೆ ಬಸವಣ್ಣನವರ ಜಯಂತಿಯಾಗಿರುವುದಲ್ಲದೆ ಅಕ್ಷಯ ತೃತೀಯಾ ಎಂದೂ ಪ್ರಸಿದ್ಧ. ಬಸವಣ್ಣನವರು ಲಿಂಗಾಯತ ಮತದ ಅಧ್ವರ್ಯುಗಳಾಗಿ ಸಾಮಾಜಿಕ, ಧಾರ್ಮಿಕ, ಸಾಹಿತ್ಯಕ ಕ್ರಾಂತಿಗಳನ್ನೇ ಮಾಡಿದರು. ಸಾಮಾಜಿಕವಾಗಿ ಪುರುಷ–ಸ್ತ್ರೀ ಭೇದವನ್ನು ನಿರಾಕರಿಸಿ ಎಲ್ಲಾ ಕ್ಷೇತ್ರಗಳಲ್ಲಿ ಇಬ್ಬರ ಸಮಾನತೆಯನ್ನು ಎತ್ತಿ ಹಿಡಿದರು. ಲಿಂಗಧಾರಣೆ ಸ್ತ್ರೀಯರಿಗೂ, ಪುರುಷರಿಗೂ ಸಮಾನ; ಪುರುಷನಂತೆ ಸ್ತ್ರೀಯೂ ಭಗವಂತನ ಸೇವೆಯನ್ನು ಮಾಡಿ ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸಬಲ್ಲಳು ಎಂದು ತೋರಿಸಿಕೊಟ್ಟರು. ಮೊದಲನೆಯದಾಗಿ ಭಕ್ತ–ಭಗವಂತನ ಮಧ್ಯದಲ್ಲಿ ಪೂಜಾರಿಯದೋ ಅರ್ಚಕನದೋ ದಳ್ಳಾಳಿತನ ಬೇಕಾಗಿಲ್ಲ. ಭಕ್ತನೇ ಸಾಕ್ಷಾತ್ತಾಗಿ ಭಗವಂತನ ಪೂಜೆಯನ್ನು ಮಾಡುವ ವ್ಯವಸ್ಥೆಯನ್ನು ತಂದುದು ಬಸವಣ್ಣನವರು ಧಾರ್ಮಿಕ ಕ್ಷೇತ್ರದಲ್ಲಿ ತಂದ ಕ್ರಾಂತಿಕಾರಕ ಸುಧಾರಣೆ. ಸಾಮಾಜಿಕವಾಗಿ ಜಾತಿಯ ಕಟ್ಟನ್ನು ಕಡಿದು ಹಾಕಿ ಸರ್ವಸಮಾನತೆಯನ್ನು ಘೋಷಿಸಿದ ಧೀರರೆಂದರೆ ಬಸವಣ್ಣನವರೇ.

ಒಂದೇ ನೀರನ್ನು ಕುಡಿಯುವ, ಒಂದೇ ಅನ್ನವನ್ನು ಉಣ್ಣುವ, ಒಂದೇ ಮಣ್ಣಲ್ಲಿ ಸೇರಿ ಹೋಗುವ ಮನುಜರಲ್ಲಿ ಹುಟ್ಟಿನಿಂದ ಉಚ್ಚ ನೀಚಭಾವ ಏಕೆ, ಹೇಗೆ ಎಂದು ಅವರು ಪ್ರಶ್ನಿಸಿದರು. ಸಾಮಾಜಿಕ ಕ್ಷೇತ್ರದಲ್ಲಿ ಕಾಯಕದ ಮಹಿಮೆಯನ್ನು ಎತ್ತಿ ಹಿಡಿದವರೂ ಬಸವಣ್ಣನವರೇ. ಯಾವುದೇ ವೃತ್ತಿ ಹೀನವಲ್ಲ, ಉಪಾಧ್ಯಾಯನ ಅಧ್ಯಾಪನ ವೃತ್ತಿ ಎಷ್ಟು ಪವಿತ್ರವೋ ಮೆಟ್ಟನು? ಹಾವುಗೆಯನ್ನು ಹೊಲಿಯುವ– ಅಣಿಗೊಳಿಸುವ ಮೋಚಿಯ ಕೆಲಸವೂ ಅಷ್ಟೇ ಮುಖ್ಯ, ಅಷ್ಟೇ ಮುಖ್ಯ ಎಂದು ಅವರು ಪ್ರತಿಪಾದಿಸಿದರು. Dignity of Labour ಎಂಬ ಆಧುನಿಕ ತತ್ತ್ವವನ್ನು ಹನ್ನೆರಡನೆಯ ಶತಮಾನದಲ್ಲೇ ಸಾರಿದ ಮಹಾವ್ಯಕ್ತಿ ಬಸವಣ್ಣನವರು.

ಇನ್ನು ಸಾಹಿತ್ಯ ವಿಷಯದಲ್ಲಿ ಅವರು ಮಾಡಿದ ಪರಿವರ್ತನೆಯೂ ಕ್ರಾಂತಿಕಾರಕವಾಗಿತ್ತು. ಪಂಪ, ರನ್ನ ಮುಂತಾದ ಮಹಾಕವಿಗಳು ಸಂಸ್ಕೃತಭೂಯಿಷ್ಠವಾದ, ಕೇವಲ ಪಂಡಿತ ಪ್ರಿಯವಾದ ಭಾಷೆಯನ್ನು ಬಳಸುತ್ತಿದ್ದರು. ಅವರ ಸಾಹಿತ್ಯ ರಾಜಾಸ್ಥಾನಗಳಿಗೆ, ಪಂಡಿತ ಗೋಷ್ಠಿಗಳಿಗೆ ಸೀಮಿತವಾಗಿತ್ತು. ಆದರೆ ಬಸವಣ್ಣನವರು ಸರಳತನವಾದ ಭಾಷೆಯಲ್ಲಿ ಪಂಡಿತಪಾಮರಾದಿ ಸಕಲ ಜನರಿಗೂ ವೇದ್ಯವಾಗುವ ವಚನ ಸಾಹಿತ್ಯಕ್ಕೆ ಬಾಗಿಲನ್ನು ತೆರೆದು ಅಧ್ಯಾತ್ಮದ ಗಹನ ತತ್ತ್ವಗಳೂ ಸಾಮಾನ್ಯರಿಗೆ ಮುಟ್ಟುವಂತೆ ಮಾಡಿ ಕನ್ನಡ ಸಾಹಿತ್ಯ ವಿಶ್ವ ಮನ್ನಣೆಯನ್ನು ಗಳಿಸುವಂತೆ ಮಾಡಿ ಅದರ ಎತ್ತರಕ್ಕೆ ಕಾರಣರಾದರು. ವೈಶಾಖ ಮಾಸದಲ್ಲಿ ಮೊದಲು ನಾವು ತಲೆಬಾಗಿ ವಂದಿಸಬೇಕಾದವರು ಬಸವಣ್ಣನವರು.

ವೈಶಾಖ ಮಾಸದಲ್ಲೇ ಬರುವ ಇನ್ನೆರಡು ಜಯಂತಿಗಳೆಂದರೆ ಶಂಕರ ಜಯಂತಿ ಮತ್ತು ರಾಮಾನುಜ ಜಯಂತಿ. ಶಂಕರಾಚಾರ್ಯರೆಂದರೆ ದಾರ್ಶನಿಕ ಸಾರ್ವಭೌಮರು. ಪ್ರಾಯಶಃ ಎಂಟನೆಯ ಶತಮಾನದಲ್ಲೇ ಹುಟ್ಟಿ ಕೇವಲ ಮೂವತ್ತೆರಡು ವರ್ಷಗಳಲ್ಲಿ ಅವರು ಸಾಧಿಸಿದುದು ಎಷ್ಟೊಂದು. ಕಾಲಡಿ ಎಂಬ ಹಳ್ಳಿಯಲ್ಲಿ ಹುಟ್ಟಿ ವಿಶ್ವವೇ ಬೆರಗಿನಿಂದ ಇಂದಿಗೂ ನೋಡುತ್ತಿರುವ ಅದ್ವೈತ ದರ್ಶನವನ್ನು ಜಗತ್ತಿಗೆ ಅವರು ಕೊಟ್ಟರು. ಉಪನಿಷತ್ತುಗಳನ್ನೂ ಭಗವದ್ಗೀತೆಯನ್ನೂ ಬ್ರಹ್ಮಸೂತ್ರಗಳನ್ನು ಭಾಷ್ಯಗಳಿಂದ ಅಲಂಕರಿಸಿ ಜಗನ್ಮಾನ್ಯವಾಗಿಸಿದವರು ಶಂಕರಾಚಾರ್ಯರೆ. ಅನಂತರ ಇತರರು ಆ ಮಾರ್ಗದಲ್ಲಿ ಹಿಂಬಾಲಿಸಿ ತಮ್ಮ ದೃಷ್ಟಿಕೋಣವನ್ನು ಅರ್ಪಿಸಿದರಷ್ಟೆ. ಶಾಶ್ವತವಾದ ಆತ್ಮವೇ ಇಲ್ಲವೆಂಬ ಬೌದ್ಧಮತವನ್ನೂ, ಶಾಶ್ವತ ಆತ್ಮನಿದ್ದಾನೆ, ಆದರೆ ಜಗತ್ತನ್ನು ಸೃಷ್ಟಿಸುವ ಪರಮಾತ್ಮನಿಲ್ಲ ಎಂಬ ಜೈನ ಮತವನ್ನು ನಿರಾಕರಿಸಿ ಜೀವಾತ್ಮನೂ ಉಂಟು, ಪರಮಾತ್ಮನೂ ಉಂಟು, ಅವರಿಬ್ಬರ ಐಕ್ಯವೂ ಶ್ರುತಿಸಿದ್ಧ ಎಂಬ ಲೋಕೋತ್ತರವಾದ ಸಿದ್ಧಾಂತವನ್ನು ನಿರೂಪಿಸಿದ ಮಹಾಮೇಧಾವಿ ಶ್ರೀ ಆಚಾರ್ಯ ಶಂಕರರು. ಸಂಸ್ಕೃತ ಭಾಷೆಯ ಮೇಲೆ ಅವರ ಪ್ರಭುತ್ವ ವಿಸ್ಮಯಕಾರಿ. ಅವರ ಒಂದೊಂದು ಗ್ರಂಥದಲ್ಲೂ ಪುಂಖಾನುಪುಂಖವಾಗಿ ಶ್ರುತಿ–ಸ್ಮೃತಿ–ಪುರಾಣ–ಇತಿಹಾಸಗಳ ಉದ್ಧರಣಗಳು ದೊರಕುತ್ತವೆ. ಒಬ್ಬ ವ್ಯಕ್ತಿ ಇಷ್ಟೊಂದು ತಿಳಿದಿರುವುದು, ತಿಳಿದದ್ದನ್ನು ನೆನಪಿಸಿಕೊಂಡು ಆಯಾ ಸಂದರ್ಭಗಳಲ್ಲಿ ಉಚಿತವಾಗಿ ಉದ್ಧರಿಸುವುದು ಅವರ ಅಸಾಮಾನ್ಯ ಪ್ರತಿಭೆಯನ್ನು ಸೂಚಿಸುತ್ತವೆ. ಇನ್ನು ಅವರು ರಚಿಸಿರುವ ಸ್ತೋತ್ರಗಳಂತೂ ಸರಸ್ವತೀ ನೂಪುರಝುಂಕಾರ. ಯಾವ ಭೇದವಿಲ್ಲದೆ ಶಿವ–ವಿಷ್ಣು–ಗಣೇಶ–ಸ್ಕಂದ–ಅಯ್ಯಪ್ಪ–ಲಕ್ಷ್ಮೀ–ಸರಸ್ವತೀ–ಪಾರ್ವತೀ ಇತ್ಯಾದಿ ಎಲ್ಲಾ ದೇವತೆಗಳ ಸ್ತುತಿಗಳೂ ಅವರ ಮುಖಾರವಿಂದದಿಂದ ಹರಿದಿವೆ. ಮಂತ್ರಶಾಸ್ತ್ರದ ಉತ್ತುಂಗ ಸಾಧನೆಯನ್ನು ತೋರಿಸುವ ಸೌಂದರ್ಯ ಲಹರೀ, ಭಕ್ತಿ ಪಾರಮ್ಯವನ್ನು ಎತ್ತಿ ಹಿಡಿಯುವ ಶಿವಾನಂದ ಲಹರೀ, ಪಾಂಡಿತ್ಯದ ಪರಾಕಾಷ್ಠೆಯನ್ನು ಸರ್ವಾನುಭವಕ್ಕೆ ತರುವ ವಿಷ್ಣು ಕೇಶಾದಿಪಾಂತ ಸ್ತೋತ್ರ–ಒಂದೇ ಎರಡೇ? ಶ್ರೀ ಶಂಕರ ಭಗವತ್ಪಾದರ ವ್ಯಕ್ತಿತ್ವ ಹಿಮಾಲಯೋಪಮ, ಸಮುದ್ರ ಸಮಾನ. ಅದನ್ನು ಪೂರ್ಣವಾಗಿ ನೋಡುವುದು ಮಾನವರಿಗೆ ಅಸಾಧ್ಯವೆನಿಸುತ್ತದೆ. ಅವರ ಕೃತಿಗಳ ಮೇಲೆ ರಚಿತವಾದ ವ್ಯಾಖ್ಯಾನಗಳು, ಉಪವ್ಯಾಖ್ಯಾನಗಳು ಅಪರಿಮಿತೆ ಸತಾಂ ಪ್ರಜ್ಞೋನ್ಮೇಷಃ ಪುನರಯಸೀಮಾ ವಿಜಯತೇ– ಎಂಬ ಮಾತು ಇವರನ್ನು ನೋಡಿದವರೇ ಹೇಳಿರಬೇಕು.

ಶಂಕರ ಜಯಂತಿಯ ಜೊತೆಗೆ ಬರುವುದು ರಾಮಾನುಜ ಜಯಂತಿ. ಶ್ರೀರಾಮಾನುಜಾಚಾರ್ಯರು ಹುಟ್ಟಿದ್ದು ತಮಿಳುನಾಡಿನ ಕಾಂಚೀಪುರಂನ ಬಳಿಯಿರುವ ಸಿರಿಪೆರುಂಬುದೂರಿನಲ್ಲಿ. ಕ್ರಿ.ಶ. ಹನ್ನೊಂದನೆಯ ಶತಮಾನದಲ್ಲಿ ಹುಟ್ಟಿದ ಇವರು ನೂರಿಪ್ಪತ್ತು ವರ್ಷ ಬದುಕಿದ ದೀರ್ಘಾಯುಷಿಗಳು. ಅತ್ಯಂತ ದಯಾಮಯ ಹೃದಯದವರು. ತಮಿಳುನಾಡಿನಿಂದ ಕರ್ನಾಟಕಕ್ಕೆ ವಲಸೆ ಬಂದು ರಾಜ ಬಿಟ್ಟಿದೇವನನ್ನು ವೈಷ್ಣವ ಮತಕ್ಕೆ ಪರಿವರ್ತಿಸಿ ವಿಷ್ಣುವರ್ಧನನ್ನಾಗಿ ಮಾಡಿದರು. ಮೇಲುಕೋಟೆ, ತೊಣ್ಣೂರು ಇತ್ಯಾದಿ ಪ್ರದೇಶಗಳು ಆಚಾರ್ಯ ರಾಮಾನುಜರಿಂದ ವೈಷ್ಣವ ಕ್ಷೇತ್ರಗಳಾದುವು. ಅವರು ಅನೇಕ ದೇವಾಲಯಗಳನ್ನು ಕಟ್ಟಿಸಿದ್ದು ಮಾತ್ರವಲ್ಲ, ಪ್ರಜೆಗಳ ಹಿತಕ್ಕಾಗಿ ಕೆರೆ–ಕಟ್ಟೆ ಬಾವಿಗಳನ್ನು ನಿರ್ಮಿಸಿದರು. ವಿಷ್ಣು ಪಾರಮ್ಯವನ್ನು ಪ್ರತಿಪಾದಿಸಲು ಅವರು ಭಗವದ್ಗೀತಾ ಭಾಷ್ಯವನ್ನೂ ಬ್ರಹ್ಮಸೂತ್ರ ಭಾಷ್ಯವನ್ನೂ ರಚಿಸಿದರು. ಅವರು ಪ್ರತಿಷ್ಠಾಪಿಸಿದ ಸಿದ್ಧಾಂತವನ್ನೂ ವಿಶಿಷ್ಟಾದ್ವೈತ ಸಿದ್ಧಾಂತವೆನ್ನುತ್ತಾರೆ. ಭಗವಾನ್ ನಾರಾಯಣನೇ ಪರಬ್ರಹ್ಮ. ಅವನೇ ಜಗದೀಶ್ವರ. ಎಲ್ಲ ಚೇತನಗಳು ಚಿತ್, ಅಚೇತನಗಳು ಅಚಿತ್. ಈಶ್ವರ, ಚಿತ್, ಅಚಿತ್ ಎಂಬ ಮೂರು ತತ್ತ್ವಗಳು. ಚಿತ್ ತತ್ತ್ವವನ್ನೇ ಜೀವಾತ್ಮ ಎನ್ನುವುದು. ಜಗತ್‌ಸೃಷ್ಟಿ, ಪಾಲನೆ, ಧ್ವಂಸ ಎಂಬ ಮೂರೂ ಭಗವಂತನ ಲೀಲಾವಿಲಾಸ. ಜೀವಾತ್ಮನು ಭಗವಂತನಿಗೆ ಶರಣಾಗತನಾಗುವುದೇ ಪ್ರಪತ್ತಿ. ಪ್ರಪತ್ತಿಯಿಂದ ಮುಕ್ತಿ ಎಂದು ರಾಮಾನುಜ ಸಿದ್ಧಾಂತ. ಸಾಕ್ಷಾದ್ ಭಗವಂತನೇ–

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ॥

(ಎಲ್ಲ ಧರ್ಮಫಲಾಕಾಂಕ್ಷೆಯನ್ನು ಬಿಟ್ಟು ನನಗೇ ಶರಣಾಗತನಾಗು. ಎಲ್ಲ ಪಾಪಗಳಿಂದ ನಿನ್ನನ್ನು ಮುಕ್ತಗೊಳಿಸುವೆನು) ಎಂದು ಭಗವದ್ಗೀತೆಯಲ್ಲಿ ಹೇಳಿದ್ದಾನೆ. ಪರಮಾತ್ಮ ಶ್ರೀಮನ್ನಾರಾಯಣನು ಸಕಲಕಲ್ಯಾಣ ಗುಣಪರಿಪೂರ್ಣನು. ಹಾಗಾದರೆ ಅವನನ್ನು ಕೆಲವು ಶ್ರುತಿಗಳು ನಿರ್ಗುಣ ಎಂದು ಕರೆದಿರುವುದೇಕೆ? ನಿರ್ಗುಣ ಶಬ್ದಕ್ಕೆ ಅವನು ಹೇಯ ಗುಣ ರಹಿತನೆಂದು ಅರ್ಥ. ನಿತ್ಯವಾದ ವೇದಗಳನ್ನು ಭಗವಂತನೇ ಸೃಷ್ಟಿಯ ಆದಿಯಲ್ಲಿ ಬ್ರಹ್ಮನಿಗೆ ಉಪದೇಶಿಸುತ್ತಾನೆ. ಅವನಿಂದ ಋಷಿಗಳೂ ಅವರಿಂದ ಶಿಷ್ಯರೂ ಪಡೆದುಕೊಳ್ಳುತ್ತಾರೆ. ವೇದಗಳು ಪ್ರಮಾಣ. ಹಾಗೆಯೇ ಋಷಿಪ್ರೋಕ್ತವಾದ ಆಗಮಗಳೂ ಪ್ರಮಾಣ. ಊರ್ಧ್ವ ಪುಂಡ್ರಧಾರಣ ಭಕ್ತನ ಕರ್ತವ್ಯ. ಜಾತಿ, ಮತ, ಲಿಂಗ ಮುಂತಾದ ಭೇದವಿಲ್ಲದೆ ಎಲ್ಲರೂ ಭಗವಂತನ ಸೇವೆಯನ್ನು ಮಾಡಲು ಅರ್ಹರು ಎಂದು ಆಚಾರ್ಯ ರಾಮಾನುಜರು ಉಪದೇಶಿಸಿ ಭಕ್ತಿಪಂಥವನ್ನು ಎತ್ತಿ ಹಿಡಿದರು.

ವೈಶಾಖಮಾಸದಲ್ಲಿ ಬರುವ ಇನ್ನೊಂದು ಮುಖ್ಯ ಜಯಂತಿ ಬುದ್ಧ ಜಯಂತಿ. ಕ್ರಿ.ಪೂ. ಆರನೆಯ ಶತಮಾನದಲ್ಲಿ ಶಾಕ್ಯವಂಶದ ಶುದ್ಧೋದನನೆಂಬ ರಾಜನ ಮಗ ಸಿದ್ಧಾರ್ಥನು ಬೋಧಿಯನ್ನು ಪಡೆದು ಬುದ್ಧನಾದುದು ದೊಡ್ಡ ಪವಾಡ. ಪ್ರಾಯಶಃ ಭಾರತದಲ್ಲಿ ಹುಟ್ಟಿದ ಯಾವ ಜ್ಞಾನಿಯೂ ದೇಶ ವಿದೇಶಗಳಲ್ಲಿ ಬುದ್ಧನಷ್ಟು ಪ್ರಖ್ಯಾತನಾಗಿಲ್ಲ. ಭಾರತದಲ್ಲಿ ಅವನನ್ನು ಭಗವಾನ್ ವಿಷ್ಣುವಿನ ಒಂದು ಅವತಾರವೆಂದು ಹೇಳುವವರೂ ಇದ್ದಾರೆ. ಬುದ್ಧನು ಬೋಧಿಸಿದ ಧರ್ಮ, ಬೌದ್ಧ ಧರ್ಮ ಭಾರತದ ಗಡಿಯನ್ನು ದಾಟಿ ಟಿಬೆಟ್, ಚೀನಾ, ಶ್ರೀಲಂಕಾ, ಥಾಯ್‌ಲೆಂಡ್ ಮುಂತಾದ ದೇಶಗಳಲ್ಲೂ ಹರಡಿ ಇಂದೂ ಜೀವಂತವಾಗಿದೆ. ಬುದ್ಧನು ಮುಖ್ಯವಾಗಿ ಓಡಾಡಿ ಧರ್ಮವನ್ನು ಬೋಧಿಸಿದ್ದು ಇಂದು ಬಿಹಾರ ಎಂದು ಪ್ರಸಿದ್ಧವಾಗಿರುವ, ಅಂದು ಮಗಧವೆಂದು ಕರೆಯಲ್ಪಡುತ್ತಿದ್ದ ಪ್ರದೇಶದಲ್ಲಿ. ಅವನು ಬೋಧನೆಗೆ ಬಳಸಿದುದು ಆ ಕಾಲದ ಸಾಮಾನ್ಯ ಜನರ ಭಾಷೆಯನ್ನು. ಅದನ್ನು ಈಗ ಪಾಲೀ ಎಂದು ಕರೆಯುತ್ತಾರೆ. ಬುದ್ಧನು ಮಾಡಿದ ಎಲ್ಲಾ ಬೋಧನೆಗಳ ಗ್ರಂಥ ತ್ರಿಪಿಟಕ. ಸುತ್ತ ಪಿಟಕ, ವಿನಯಪಿಟಕ ಮತ್ತು ಅಭಿಧಮ್ಮಪಿಟಕ ಎಂದು ಮೂರು ಪಿಟಕಗಳು. ಹಿಂದೂ ಧರ್ಮಕ್ಕೆ ವೇದಗಳಿದ್ದಂತೆ ಬೌದ್ಧ ಧರ್ಮಕ್ಕೆ ತ್ರಿಪಿಟಕಗಳು. ಧರ್ಮಪದ ಎಂಬ ಪುಟ್ಟ ಗ್ರಂಥವು ಸುತ್ತ ಪಿಟಕದ ಭಾಗವಾಗಿರುವ ಖುದ್ದಕನಿಕಾಯದಲ್ಲಿದೆ. ಇದನ್ನು ಭಗವದ್ಗೀತೆಗೆ ಹೋಲಿಸಬಹುದು. ಆದರೆ ಇದು ಪ್ರಶ್ನೋತ್ತರರೂಪದಲ್ಲಿ ಅಥವಾ ಸಂವಾದದ ರೂಪದಲ್ಲಿ ಇಲ್ಲ.

ಬೌದ್ಧ ಧರ್ಮವು ವೇದಪ್ರಾಮಾಣ್ಯವನ್ನು ನಿರಾಕರಿಸಿತು. ಯಜ್ಞಯಾಗಗಳಿಂದ ಮನುಷ್ಯರು ಸ್ವರ್ಗಕ್ಕೆ ಹೋಗಿ ಸುಖದಿಂದ ಇರುವರು ಎಂಬ ಸಿದ್ಧಾಂತವನ್ನು ಅದು ನಂಬಲಿಲ್ಲ. ನಾಲ್ಕು ಆರ್ಯ ಸತ್ಯಗಳನ್ನು ಅರಿಯಬೇಕು. ಅಷ್ಟಾಂಗ ಮಾರ್ಗದಿಂದ ದುಃಖರಹಿತ ಸ್ಥಿತಿಯಾದ ನಿರ್ವಾಣ ದೊರಕುತ್ತದೆ ಎಂಬುದು ಬುದ್ಧನ ಉಪದೇಶ. ಬೌದ್ಧ ಧರ್ಮವೇ ಅತ್ಯಂತ ವೈಜ್ಞಾನಿಕವೆಂದು ಕೆಲವರ ಅಭಿಪ್ರಾಯ.

ಭಗವಾನ್ ಬುದ್ಧನು ಎಂಬತ್ತು ವರ್ಷ ಬದುಕಿದ್ದನಂತೆ. ಅನಂತರದ ಕಾಲದಲ್ಲಿ ಅನೇಕರು ಬೌದ್ಧ ಮತವನ್ನು ತಬ್ಬಿಕೊಂಡರು. ಜಗತ್ತಿನ ಮುಖ್ಯ ಧರ್ಮಗಳಲ್ಲಿ ಬೌದ್ಧ ಮತ ಒಂದಾಗಿದೆ. ಎಲ್ಲಾ ಮತಗಳ ಸಾರವನ್ನು ತಿಳಿದುಕೊಳ್ಳೋಣ. ಎಲ್ಲದರಲ್ಲೂ ಇರುವ ಒಳ್ಳೆಯ ಅಂಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳೋಣ.

ಮೈವಿವಿ ಪ್ರಸಾರಾಂಗದಲ್ಲಿ ಅಂಬೇಡ್ಕರ್ ಜಯಂತಿ


ಮೈಸೂರು ವಿವಿಯ ಪ್ರಸಾರಾಂಗದಲ್ಲಿ ನಡೆದ ಡಾ.ಅಂಬೇಡ್ಕರ್ ಜಯಂತಿಯನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಉದ್ಘಾಟಿಸಿದರು. ಅಂಕಣಕಾರ ನಾ.ದಿವಾಕರ, ಪ್ರಸಾರಾಂಗ ನಿರ್ದೇಶಕ ಪ್ರೊ.ಎಂ.ನಂಜಯ್ಯ ಹೊಂಗನೂರು, ಡಾ.ಮಂಜು ಇದ್ದರು.

ಪ್ರಗತಿಪರ ಚಿಂತಕ ನಾ.ದಿವಾಕರ ಅವರಿಂದ ಉಪನ್ಯಾಸ

ಮೈಸೂರು, ಏ. 29– ನೊಂದವರ, ದಮನಿತರ ಕೇರಿಗಳಲ್ಲಿ ರಥಬೀದಿಗಳನ್ನು ಕಟ್ಟುವ ಬದಲು ಅರಿವು– ಪ್ರಜ್ಞೆ ಮೂಡಿಸುವ ಗ್ರಂಥಗಳ ಕಣಜಗಳನ್ನಾಗಿ ಪರಿವರ್ತಿಸುವ ಸಂಕಲ್ಪ ಮಾಡಿ ಎಂದು ಅಂಕಣಕಾರ, ಪ್ರಗತಿಪರ ಚಿಂತಕ ನಾ. ದಿವಾಕರ ಕರೆ ನೀಡಿದರು.

ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗವು ಏರ್ಪಡಿಸಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ 134ನೇ ಜಯಂತಿಯಲ್ಲಿ 'ಡಾ.ಬಿ.ಆರ್. ಅಂಬೇಡ್ಕರ್ ಮತ್ತು ವರ್ತಮಾನದ ಭಾರತ' ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು, ರಥಾರೂಢ ಅಂಬೇಡ್ಕರ್‌ಗಿಂತ ನಮಗೆ ಗ್ರಂಥಾಲಯದೊಳಗಿನ ಅಂಬೇಡ್ಕರ್, ತಳಸಮುದಾಯದ ನೊಂದ ಜನರ ನಡುವಿನ ಅಮೂರ್ತ ನೆಲೆಯಲ್ಲಿ ನಿಂತ ಅಂಬೇಡ್ಕರ್, ಶೋಷಣೆಯ ಮೂಲ ಅಡಿಪಾಯವನ್ನೇ ಕಿತ್ತೊಗೆಯುವ ಅಂಬೇಡ್ಕರ್ ಬೇಕು. ಅಂಬೇಡ್ಕರರನ್ನು ಗಾಂಧಿ, ಮಾರ್ಕ್ಸ್, ಲೋಹಿಯಾ, ಪೆರಿಯಾರ್, ಠಾಗೋರ್, ಫುಲೆ ದಂಪತಿಗಳೊಂದಿಗೆ ಒಟ್ಟಿಗೆ ಕರೆದೊಯ್ಯುವ ಸಂಕಲ್ಪ ಮಾಡಬೇಕಿದೆ. ಆಗ ಮಾತ್ರ ನಾವು ಆಚರಿಸುವ ಅಂಬೇಡ್ಕರ್ ಜಯಂತಿ ಸಾರ್ಥಕವಾಗುತ್ತದೆ ಎಂದರು.

ಅಂಬೇಡ್ಕರ್ ಅವರ ಚಿಂತನೆಯಲ್ಲಿ ನಮಗೆ ಪ್ರಮುಖವಾಗಿ ಪ್ರಜಾಪ್ರಭುತ್ವ, ಸಾರ್ವತ್ರಿಕ ಸಮಾನತೆ, ಸಾಂವಿಧಾನಿಕ ನೈತಿಕತೆ ಮತ್ತು ಜಾತಿ ವಿನಾಶದ ನೆಲೆಗಳು ಪ್ರಮುಖವಾಗಿ ಕಾಣುತ್ತವೆ. ಇದರಲ್ಲಿ ನಾವು ವಿಫಲರಾಗುತ್ತಿರುವುದು ನಮ್ಮನ್ನು ಕಾಡಬೇಕು. ಹೀಗಾಗಿ ಅಂಬೇಡ್ಕರ್ ಚಿಂತನೆಗಳೊಂದಿಗೆ ಮಾರ್ಕ್ಸ್ ವರ್ಗ ಪರಿಕಲ್ಪನೆಯನ್ನು ಮುಖಾಮುಖಿಯಾಗಿಸಬೇಕು ಎಂದರು.

ಮತ ದ್ವೇಷ, ಜಾತಿ ದ್ವೇಷಕ್ಕೆ ಮೂಲ ಕಾರಣವಾದ ಶ್ರೇಷ್ಠತೆಯ ಪರಿಕಲ್ಪನೆಯನ್ನು ಹೋಗಲಾಡಿಸದಿದ್ದರೆ ನಮಗೆ ಅಂಬೇಡ್ಕರ್ ಅರ್ಥವಾಗಿಲ್ಲ ಅಥವಾ ನಾವು ಬೌದ್ಧಿಕವಾಗಿ ಅಂಬೇಡ್ಕರ್ ಅವರನ್ನು ಅಂತರ್ಗತ ಮಾಡಿಕೊಂಡಿಲ್ಲ ಎಂದೇ ಅರ್ಥ. ಇದಕ್ಕಾಗಿ ವರ್ತಮಾನ ಭಾರತದ ಯುವ ತಲೆಮಾರು ಅಂಬೇಡ್ಕರರನ್ನು ಓದಬೇಕು. ಅವರ ಚಿಂತನೆಗಳನ್ನು ಒಳಗಿಳಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮಾತನಾಡಿ, ಬಹಳಷ್ಟು ಮಂದಿಗೆ ಅಂಬೇಡ್ಕರ್ ಅವರು ದೇಶದ ಸರ್ವಾಂಗೀಣ ಅಭಿವೃದ್ಧಿಗೆ ನೀಡಿರುವ ಕೊಡುಗೆಗಳ ಬಗ್ಗೆ ಸರಿಯಾದ ಅರಿವಿಲ್ಲ. ಸಂವಿಧಾನ ರಚನೆ ಬಿಟ್ಟು ಬೇರೆ ವಿಷಯಗಳ ಬಗ್ಗೆ ತಿಳಿದಿಲ್ಲ. ಈಗಲಾದರೂ ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕು ಎಂದರು.

ಪ್ರಸಾರಾಂಗ ನಿರ್ದೇಶಕ ಪ್ರೊ.ನಂಜಯ್ಯ ಹೊಂಗನೂರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಿಭಾಗದ ಉಪನ್ಯಾಸಕ ಡಾ.ಎಚ್.ಪಿ.ಮಂಜು, ಪ್ರಸಾರಾಂಗ ಸಹಾಯಕ ನಿರ್ದೇಶಕ ಡಾ.ಅನಿಲ ಕುಮಾರ, ಅಧೀಕ್ಷಕ ಚನ್ನಬಸಪ್ಪ, ಮುದ್ರಾಲಯ ನಿರ್ದೇಶಕ ಸತೀಶ್ ಇದ್ದರು.

ದಿ ರೈಲ್ವೆ ಕೋ–ಆಪರೇಟಿವ್ ಬ್ಯಾಂಕಲ್ಲಿ ಚಿನ್ನದ ಸಾಲಕ್ಕೆ ಚಾಲನೆ



ದಿ ರೈಲ್ವೆ ಕೋ ಆಪರೇಟಿವ್ ಬ್ಯಾಂಕ್ ವತಿಯಿಂದ ಚಿನ್ನಾಭರಣದ ಮೇಲೆ ಸಾಲ ನೀಡುವ ಕಾರ್ಯಕ್ಕೆ ಬ್ಯಾಂಕ್ ಅಧ್ಯಕ್ಷ ಎಂ.ಬಿ.ಮಂಚೇಗೌಡ ಚಾಲನೆ ನೀಡಿದರು.

ಮೈಸೂರು,ಏ.29–ದಿ ರೈಲ್ವೆ ಕೋ–ಆಪರೇಟಿವ್ ಬ್ಯಾಂಕ್ ವತಿಯಿಂದ ಬ್ಯಾಂಕಿನ ಸದಸ್ಯರು ಮತ್ತು ಗ್ರಾಹಕರಿಗೆ ಅನುಕೂಲವಾಗುವಂತೆ ಚಿನ್ನಾಭರಣದ ಮೇಲೆ ಸಾಲವನ್ನು ಆಕರ್ಷಕ ಬಡ್ಡಿ ದರ ಶೇ. 9.50ರಂತೆ ಗರಿಷ್ಠ 25 ಲಕ್ಷದವರೆಗೆ ಸಾಲ ನೀಡುವ ಕಾರ್ಯಕ್ಕೆ ಬ್ಯಾಂಕ್ ಅಧ್ಯಕ್ಷ ಎಂ.ಬಿ.ಮಂಚೇಗೌಡ ಚಾಲನೆ ನೀಡಿದರು.

ಈ ಅವಕಾಶವನ್ನು ಬ್ಯಾಂಕಿನ ಸದಸ್ಯರು, ಗ್ರಾಹಕರು ಸದುಪಯೋಗಪಡಿಸಿಕೊಳ್ಳಬೇಕು ಎಂದರು. ಈ ವೇಳೆ ಬ್ಯಾಂಕಿನ ಉಪಾಧ್ಯಕ್ಷ ಎಸ್.ಆನಂದ್, ನಿರ್ದೇಶಕರಾದ ಹನುಮಂತ, ಎಂ.ಬಿ.ಯೋಗಾನಂದ, ಮುತ್ತುಕುಮಾರ್, ಆರ್.ಚಂದ್ರಶೇಖರ್, ಯತಿರಾಜು, ರಾಮನಾಥನ್, ಶಿವಶಂಕರ್, ಉತ್ತೇಜ್, ಶ್ವೇತಾ, ಸಿ.ನಿರ್ಮಲಾ, ಪಿ.ಚಂದ್ರಶೇಖರ್, ನಂದಕುಮಾರ್, ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಪ್ರಧಾನ ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಯೋಗ ಶಿಕ್ಷಕರ ತರಬೇತಿ ಕೋರ್ಸ್

ಮೈಸೂರು,ಏ.29–ಮೈಸೂರಿನ ಚೈತನ್ಯ ಯೋಗ ಎಜುಕೇಷನ್ ಅಂಡ್ ರಿಸರ್ಚ್ ಫೌಂಡೇಷನ್ ವತಿಯಿಂದ ಯೋಗ ಶಿಕ್ಷಕರ ತರಬೇತಿ ಕೋರ್ಸ್ ಹಮ್ಮಿಕೊಳ್ಳಲಾಗಿದೆ. ಕೋರ್ಸ್‌ಗಳು ಮೇ ತಿಂಗಳಲ್ಲಿ ಆರಂಭವಾಗಲಿದೆ. ಕೋರ್ಸ್, ಯೋಗ ಫಿಲೋಷಫಿ, ಅನಾಟಮಿ, ಯೋಗಾಸನಗಳ ಅಭ್ಯಾಸ ಒಳಗೊಂಡಿದೆ. ವಿವರಗಳಿಗೆ ಯೋಗಾಚಾರ್ಯ ಡಾ.ಬಿ.ಪಿ.ಮೂರ್ತಿ, ಮೊ. 9449886387, 9060395639 ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com


ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾ ಮಂಡಳ ನಿ., ಬೆಂಗಳೂರು
ಅಧ್ಯಕ್ಷರಾದ ಶ್ರೀ ಎಸ್. ಚಂದ್ರಶೇಖರ್‌ರವರಿಗೆ ಹುಟ್ಟುಹಬ್ಬದ ಶುಭಾಶಯಗಳು


ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾ ಮಂಡಳ ನಿ., ಬೆಂಗಳೂರು
ಅಧ್ಯಕ್ಷರಾದ ಶ್ರೀ ಎಸ್. ಚಂದ್ರಶೇಖರ್‌ರವರಿಗೆ ಹುಟ್ಟುಹಬ್ಬದ ಶುಭಾಶಯಗಳು

ಮೈಸೂರು ಮಿತ್ರ

ವಾಜಮಂಗಲದಲ್ಲಿ ಅಂಬೇಡ್ಕರ್‌ಗೆ ಅಪಮಾನಿಸಿದ ಕಿಡಿಗೇಡಿಗಳ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನಾ ಮೆರವಣಿಗೆ

ಮೈಸೂರು, ಏ.29(ಎಂಟಿವೈ)– ಮೈಸೂರು ತಾಲೂಕು ವಾಜಮಂಗಲ ಗ್ರಾಮದಲ್ಲಿ ಡಾ.ಅಂಬೇಡ್ಕರ್ ಭಾವಚಿತ್ರ ವಿರೂಪಗೊಳಿಸಿದ ಕಿಡಿಗೇಡಿಗಳನ್ನು ಬಂಧಿಸುವಂತೆ ಆಗ್ರಹಿಸಿ, ಡಾ.ಬಿ.ಆರ್. ಅಂಬೇಡ್ಕರ್ ಹೋರಾಟ ಸಮಿತಿಯ ಕಾರ್ಯಕರ್ತರು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.

ವಾಜಮಂಗಲ ಗ್ರಾಮದಿಂದ ಮೈಸೂರಿನ ಸಿದ್ಧಾರ್ಥನಗರದ ಡಿಎಫ್‌ಆರ್‌ಎಲ್ ಮುಂಭಾಗದ ವೃತ್ತದವರೆಗೂ ಬೃಹತ್ ಮೆರವಣಿಗೆಯಲ್ಲಿ ಬಂದು ಧರಣಿ ನಡೆಸಿದರು. ಮೆರವಣಿಗೆಯಲ್ಲಿ ವಿವಿಧ ದಲಿತ ಪರ ಸಂಘಟನೆಗಳ ಕಾರ್ಯಕರ್ತರು ಪಾಲ್ಗೊಂಡು, ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಮಾಡಿದ ಕಿಡಿಗೇಡಿಗಳನ್ನು ಶೀಘ್ರವೇ ಬಂಧಿಸಬೇಕು ಎಂದು ಒಕ್ಕೊರಲಿನಿಂದ ಆಗ್ರಹಿಸಿ, ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ವಾಜಮಂಗಲ ಗ್ರಾಮದಲ್ಲಿ ಏ.14 ರಂದು ಅಂಬೇಡ್ಕರ್ ಜಯಂತಿಯನ್ನು ಅದ್ಧೂರಿಯಾಗಿ ಆಚರಣೆ ಮಾಡಲಾಗಿತ್ತು. ಏ.18ರ ರಾತ್ರಿ ಕಿಡಿಗೇಡಿಗಳು ಅಂಬೇಡ್ಕರ್ ಭಾವಚಿತ್ರವಿರುವ ನಾಮಫಲಕ ಮತ್ತು ಭಾವಚಿತ್ರಕ್ಕೆ ಅಪಮಾನಿಸಿದ್ದಾರೆ. ಈ ಘಟನೆ ನಡೆದು 12 ದಿನ ಕಳೆದರೂ ಕಿಡಿಗೇಡಿಗಳನ್ನು ಪೊಲೀಸರು ಬಂಧಿಸಿಲ್ಲ. ಇದು ಆಡಳಿತ ವೈಫಲ್ಯಕ್ಕೆ ಸಾಕ್ಷಿ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಮೈಸೂರು ತಾಲೂಕಿನ ಸಿಂಧುವಳ್ಳಿ ಗ್ರಾಮದಲ್ಲೂ ಜನವರಿ ತಿಂಗಳಿನಲ್ಲಿ ಅಂಬೇಡ್ಕರ್ ನಾಮಫಲಕವನ್ನು ವಿರೂಪಗೊಳಿಸಿ ಅಪಮಾನಿಸಲಾಗಿದೆ. ಈ ಘಟನೆ ನಡೆದು ಮೂರು ತಿಂಗಳು ಕಳೆದರೂ ಪೊಲೀಸರು ಆರೋಪಿಗಳನ್ನು ಪತ್ತೆ ಹಚ್ಚುವಲ್ಲಿ ವಿಫಲರಾಗಿದ್ದಾರೆ. ಇದರ ಹಿಂದೆ ಯಾವ ಬಲಾಢ್ಯ ಶಕ್ತಿಗಳು ಕೆಲಸ ಮಾಡುತ್ತಿವೆ ಎಂಬುದನ್ನು ಬಹಿರಂಗಗೊಳಿಸಬೇಕು ಎಂದು ಆಗ್ರಹಿಸಿದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ವಾಜಮಂಗಲದ ಘಟನೆಯಲ್ಲಿ ಆರೋಪಿಗಳನ್ನು ಪತ್ತೆ ಹಚ್ಚುವಲ್ಲಿ ಪೊಲೀಸರು ವಿಫಲರಾಗಿದ್ದಾರೆ. ಬೇರೆ ವಿಚಾರಗಳಲ್ಲಿ ಮೂರು ದಿನಗಳಲ್ಲೇ ಆರೋಪಿಗಳನ್ನು ಪತ್ತೆ ಹಚ್ಚುತ್ತಾರೆ. ಆದರೆ ಈ ಘಟನೆಯನ್ನು ನಿರ್ಲಕ್ಷಿಸುತ್ತಿರುವುದರ ಹಿಂದೆ ದೊಡ್ಡ ಷಡ್ಯಂತರವೇ ಇದೆ ಎಂಬ ಅನುಮಾನ ಮೂಡುತ್ತಿದೆ ಆರ್‌ಎಸ್‌ಎಸ್, ಬಿಜೆಪಿಯವರು ಒಂದು ಕಡೆ ಅಂಬೇಡ್ಕರ್ ಎನ್ನುತ್ತಾರೆ ಮತ್ತೊಂದು ಕಡೆ ಸಂವಿಧಾನ ಬದಲಾಯಿಸುತ್ತೇವೆ ಎನ್ನುತ್ತಾರೆ. ನಿಮ್ಮ ಕುತಂತ್ರಕ್ಕೆ ನಾವು ಬಗ್ಗುವುದಿಲ್ಲ ಎಂದು ಎಚ್ಚರಿಸಿದರು.

ದಸಂಸ ಸಂಚಾಲಕ ಬೆಟ್ಟಯ್ಯ ಕೋಟೆ ಮಾತನಾಡಿ, ಸಮಾಜದಲ್ಲಿ ವಿಷ ಬೀಜ ಬಿತ್ತಲು ಜಾತಿವಾದಿ ಮನಸ್ಸುಗಳು, ಕೋಮುವಾದಿ ಶಕ್ತಿಗಳು ಕೆಲಸ ಮಾಡುತ್ತಿವೆ. ಎಲ್ಲಾ ಜಾತಿಯವರು ಸಾಮರಸ್ಯದಿಂದ ಬದುಕುತ್ತಿದ್ದ ವಾಜಮಂಗಲ ಗ್ರಾಮದಲ್ಲಿ ವಿಷ ಬೀಜ ಬಿತ್ತುವ ಕೆಲಸಗಳನ್ನು ಮಾಡುತ್ತಿದ್ದಾರೆ. ಅವರನ್ನು ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿದರು.


ಪ್ರತಿಭಟನಾನಿರತರ ಸ್ಥಳಕ್ಕೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಆಗಮಿಸಿ, ಮನವಿ ಸ್ವೀಕರಿಸಿ, ಮಾತನಾಡಿ, ಈ ಘಟನೆ ಬಗ್ಗೆ ಜಿಲ್ಲಾಡಳಿತ ಗಂಭೀರವಾಗಿ ತೆಗೆದುಕೊಂಡಿದ್ದು ಇನ್ನು ಒಂದು ವಾರದೊಳಗೆ ಆರೋಪಿಗಳನ್ನು ಪತ್ತೆ ಹಚ್ಚಲಾಗುವುದು ಎಂದು ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ನಾಗವಾಲ ಗ್ರಾಮ ಪಂಚಾಯಿತಿ ಅಧ್ಯಕ್ಷ ಸಿ.ನರೇಂದ್ರ, ದಸಂಸ ಹೋರಾಟಗಾರರಾದ ಶಂಭುಲಿಂಗ ಸ್ವಾಮಿ, ಆಲಗೂಡು ಶಿವಕುಮಾರ್, ಮಣಿಯಯ್ಯ, ದಸಂಸ ತಾಲೂಕು ಸಂಚಾಲಕ ಕಲ್ಲಹಳ್ಳಿ ಕುಮಾರ್, ತಾ.ಪಂ. ಮಾಜಿ ಸದಸ್ಯ ಹಾರೋಹಳ್ಳಿ ಸುರೇಶ್, ಮೆಲ್ಲಹಳ್ಳಿ ನಾರಾಯಣ, ಬನ್ನಳ್ಳಿ ಸೋಮಣ್ಣ ಲೇಖಕ ಸಿದ್ದಸ್ವಾಮಿ, ಜನಸಂಗ್ರಾಮ ಪರಿಷತ್ ರಾಜ್ಯಾಧ್ಯಕ್ಷ ನಗರ್ಲೆ ವಿಜಯಕುಮಾರ್, ಬಿಎಸ್ಪಿ ರಾಜ್ಯಾಧ್ಯಕ್ಷ ಕೃಷ್ಣಮೂರ್ತಿ, ಚೆನ್ನಯ್ಯ, ಭೀಮರಾಜ್, ಶಿವು, ರಾಜಣ್ಣ, ದೂರ ನಂದೀಶ್, ಪುಟ್ಟಸ್ವಾಮಿ, ಕುಬೇರ ಮಂಜು, ವಾಜಮಂಗಲ ಗ್ರಾಮ ಪಂಚಾಯಿತಿ ಸದಸ್ಯ ಕೆ.ಶಿವು, ವಾಜಮಂಗಲ ಗ್ರಾಮದ ಮುಖಂಡರಾದ ಚಿನ್ನಸ್ವಾಮಿ, ಸುರೇಶ್, ಮಂಜು, ಸಿದ್ದಪ್ಪ ಸಣ್ಣಪ್ಪ ಮಹದೇವಸ್ವಾಮಿ ಸೇರಿದಂತೆ ಹಲವರು ಭಾಗವಹಿಸಿದ್ದರು.



ಮೈಸೂರು ತಾಲೂಕು ವಾಜಮಂಗಲ ಗ್ರಾಮದಲ್ಲಿ ಡಾ.ಅಂಬೇಡ್ಕರ್ ಭಾವಚಿತ್ರ ವಿರೂಪಗೊಳಿಸಿದ ಕಿಡಿಗೇಡಿಗಳನ್ನು ಬಂಧಿಸುವಂತೆ ಆಗ್ರಹಿಸಿ ಡಾ.ಬಿ.ಆರ್.ಅಂಬೇಡ್ಕರ್ ಹೋರಾಟ ಸಮಿತಿಯ ಕಾರ್ಯಕರ್ತರು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಮೈಸೂರು ಗಾಲ್ಫ್ ಕ್ಲಬ್‌ನಲ್ಲಿ ಅನಧಿಕೃತ ನಿರ್ಮಾಣದ ವಿರುದ್ಧ ಕ್ರಮ ಕೈಗೊಳ್ಳಲು ಪಾಲಿಕೆಗೆ ಹೈಕೋರ್ಟ್ ಆದೇಶ



ಮೈಸೂರು ಗಾಲ್ಫ್ ಕ್ಲಬ್‌ನಲ್ಲಿ ಅಕ್ರಮವಾಗಿ ನಿರ್ಮಾಣವಾಗಿರುವ ಕಟ್ಟಡ.

ಮೈಸೂರು, ಏ.29– ಮೈಸೂರಿನ ಜಯ ಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್‌ನಲ್ಲಿ ಕಾನೂನು ಉಲ್ಲಂಘಿಸಿ ಕಟ್ಟಡ ನಿರ್ಮಾಣವಾಗಿದ್ದಲ್ಲಿ ಅದರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮೈಸೂರು ಮಹಾನಗರ ಪಾಲಿಕೆಗೆ ಹೈಕೋರ್ಟ್ ಆದೇಶಿಸಿದೆ.

ಮೈಸೂರು ರೇಸ್ ಕ್ಲಬ್ ವ್ಯಾಪ್ತಿಯಲ್ಲಿರುವ ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್‌ನಲ್ಲಿ ಇತ್ತೀಚೆಗೆ ಕಟ್ಟಡ ನವೀಕರಣ ಮತ್ತು ನಿರ್ಮಾಣ ಕೈಗೆತ್ತಿಕೊಳ್ಳಲಾಗಿತ್ತು. ಲೋಕೋಪಯೋಗಿ ಇಲಾಖೆ ಇದಕ್ಕೆ ಅನುಮತಿ ನೀಡಿತ್ತು ಇದರ ಬಗ್ಗೆ ಮೈಸೂರು ರೇಸ್ ಕ್ಲಬ್ ಆಕ್ಷೇಪಿಸಿ, ಮೈಸೂರು ಮಹಾನಗರ ಪಾಲಿಕೆಗೆ ದೂರು ನೀಡಿತ್ತು.

ಹಾಗಾಗಿ ಮೈಸೂರು ಮಹಾನಗರ ಪಾಲಿಕೆಯ ವಲಯ ಕಚೇರಿ–1, ಅನುಮತಿ ಪಡೆಯದೇ ಕಟ್ಟಡ ನವೀಕರಣ ಮತ್ತು ನಿರ್ಮಾಣ ಮಾಡುತ್ತಿರುವ ಸಂಬಂಧ ಸದರಿ ಜಾಗದ ಗುತ್ತಿಗೆದಾರ, ಮೈಸೂರು ರೇಸ್ ಕ್ಲಬ್ ಆಡಳಿತಾಧಿಕಾರಿಗೆ ನೋಟಿಸ್ ನೀಡಿತ್ತು.

ಯಾವುದೇ ಅನುಮತಿ ಪಡೆಯದೇ, ನಕ್ಷೆ ಅನುಮೋದನೆಯಾಗದೇ ಹಳೇ ಕಟ್ಟಡವನ್ನು ನವೀಕರಿಸಿಕೊಂಡು, ಹೊಸದಾಗಿ ಕೆಲವು ಭಾಗಗಳನ್ನು ನಿರ್ಮಿಸುತ್ತಿರುವುದರ ಬಗ್ಗೆ ಆಕ್ಷೇಪಿಸಿ, ತಕ್ಷಣ ನಿರ್ಮಾಣ ಕಾಮಗಾರಿಯನ್ನು ಸ್ಥಗಿತಗೊಳಿಸುವಂತೆ ಪಾಲಿಕೆ ಸೂಚಿಸಿತ್ತು.

ಅಲ್ಲದೇ ನಗರಪಾಲಿಕೆಯಿಂದ ನಕ್ಷೆ ಮಂಜೂರು ಮಾಡಿಸಿಕೊಂಡು ಕಾಮಗಾರಿಯನ್ನು ಮುಂದುವರೆಸುವಂತೆಯೂ, ತಪ್ಪಿದ್ದಲ್ಲಿ ಪಾಲಿಕೆ ವತಿಯಿಂದ ಕಟ್ಟಡ ತೆರವುಗೊಳಿಸಿ ಅದಕ್ಕೆ ತಗಲುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲು ಮಾಡಲಾಗುವುದು. ಅಲ್ಲದೆ 1976ರ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ ಸೆಕ್ಷನ್ 321ರ ಪ್ರಕಾರ ಕಾನೂನು ರೀತಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಗಿತ್ತು.

ಆದರೆ ಮೈಸೂರು ರೇಸ್ ಕ್ಲಬ್, ತಮಗೂ ಈ ನಿರ್ಮಾಣಕ್ಕೂ ಸಂಬಂಧವಿಲ್ಲ. ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ ಈ ನಿರ್ಮಾಣ ಕೈಗೆತ್ತಿಕೊಂಡಿದ್ದು, ಈ ವಿಷಯವಾಗಿ ತಾವು ನೀಡಿದ ಸೂಚನೆಯನ್ನು ಧಿಕ್ಕರಿಸಲಾಗಿದೆ. ಹಾಗಾಗಿ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ನಗರ ಪಾಲಿಕೆಗೆ ಪತ್ರ ಬರೆದು ಮನವಿ ಮಾಡಿತ್ತು.

ತಿಂಗಳುಗಳೇ ಕಳೆದರೂ ನಗರ ಪಾಲಿಕೆ ಇದರ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ಇದ್ದಾಗ ಮೈಸೂರು ರೇಸ್ ಕ್ಲಬ್ ಹೈಕೋರ್ಟ್ ಮೊರೆ ಹೋಗಿತ್ತು. ಹೈಕೋರ್ಟ್ ಮೈಸೂರು ಮಹಾನಗರ ಪಾಲಿಕೆ, ಲೋಕೋಪಯೋಗಿ ಇಲಾಖೆಯನ್ನು ಪ್ರತಿವಾದಿಯನ್ನಾಗಿ ಪರಿಗಣಿಸಿ ಜೊತೆಗೆ ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ ಅನ್ನು ಪ್ರಕರಣದಲ್ಲಿ ಹೆಚ್ಚುವರಿ ಪ್ರತಿವಾದಿಯನ್ನಾಗಿ ಪರಿಗಣಿಸಲಾಗಿತ್ತು.

ಈ ವಿಚಾರಣೆ ಬಳಿಕ ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ನೇತೃತ್ವದ ಏಕ ಸದಸ್ಯ ಪೀಠ, ಜಾಗದ ಗುತ್ತಿಗೆದಾರ ಮೈಸೂರು ರೇಸ್ ಕ್ಲಬ್ ವ್ಯಾಪ್ತಿಯಲ್ಲಿ ಸಂಬಂಧಪಟ್ಟ ಇಲಾಖೆಯ ಅನುಮತಿ ಇಲ್ಲದೇ ಕೈಗೆತ್ತಿಕೊಂಡಿರುವ ನಿರ್ಮಾಣದ ವಿರುದ್ಧ ಕ್ರಮ ಕೈಗೊಳ್ಳುವಂತೆ ಆದೇಶಿಸಿದೆ. ಅಲ್ಲದೇ ಮುಂದಿನ ವಿಚಾರಣೆಯನ್ನು ಜೂನ್ 9ಕ್ಕೆ ನಿಗದಿಪಡಿಸಲಾಗಿದೆ.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಸೇವಾವಧಿ ವಿಸ್ತರಣೆ



ಬೆಂಗಳೂರು: ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರ ಸೇವಾವಧಿಯನ್ನು ವಿಸ್ತರಿಸಿ ರಾಜ್ಯ ಸರ್ಕಾರ ಮಂಗಳವಾರ ಆದೇಶ ಹೊರಡಿಸಿದೆ.

ಏಪ್ರಿಲ್ 30 ರಂದು ನಿವೃತ್ತಿ ಹೊಂದಬೇಕಿದ್ದ ಅಲೋಕ್ ಮೋಹನ್ ಅವರ ಸೇವಾವಧಿಯನ್ನು ಮೇ 21ರವರೆಗೆ ವಿಸ್ತರಣೆ ಮಾಡಲಾಗಿದೆ. ಈ ಮೂಲಕ ಪೊಲೀಸ್ ಇಲಾಖೆಗೆ ನೂತನ ಸಾರಥಿಯ ಆಯ್ಕೆಗೆ ಕೊಂಚ ಬ್ರೇಕ್ ಬಿದ್ದಿದೆ.

ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಸಭೆಯಲ್ಲಿ ಗೃಹ ಸಚಿವ ಡಾ. ಜಿ ಪರಮೇಶ್ವರ ಹಾಗೂ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಭಾಗವಹಿಸಿದ್ದರು.

ಇನ್ನು ರಾಜ್ಯ ಸರ್ಕಾರ ಹೊಸ ಡಿಜಿಪಿ ನೇಮಕ ಪ್ರಕ್ರಿಯೆಯನ್ನೂ ಆರಂಭಿಸಿದ್ದು, ನಿಯಮದಂತೆ ನಾಲ್ಕು ಹಿರಿಯ ಐಪಿಎಸ್ ಅಧಿಕಾರಿಗಳ ಹೆಸರುಗಳನ್ನು ಕೇಂದ್ರಕ್ಕೆ ಶಿಫಾರಸು ಮಾಡಿದೆ. ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಡಿಜಿಯಾಗಿರುವ ಪ್ರಶಾಂತ್ ಕುಮಾರ್ ಠಾಕೂರ್, ಸಿಐಡಿ ಡಿಜಿಯಾಗಿರುವ ಡಾ.ಎಂ.ಎ.ಸಲೀಂ, ಪೊಲೀಸ್ ಗೃಹ ನಿರ್ಮಾಣ ವಿಭಾಗದ ಡಿಜಿಯಾಗಿರುವ ರಾಮಚಂದ್ರ ರಾವ್, ಸಿಐಡಿ ಸೈಬರ್ ವಿಭಾಗದ ಡಿಜಿಪಿ ಪ್ರಣಬ್ ಮೊಹಂತಿ ಅವರ ಹೆಸರುಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಆಯ್ಕೆ ಸಮಿತಿ ಕೇಂದ್ರಕ್ಕೆ ಶಿಫಾರಸು ಮಾಡಿದೆ.

ಗರ್ಭಿಣಿ ಪತ್ನಿ ಕತ್ತು ಕೊಯ್ದು ಕೊಂದು; ಗರ್ಭದಲ್ಲಿದ್ದ ಮಗುವಿನ ಸಾವಿಗೂ ಕಾರಣನಾದ ವ್ಯಕ್ತಿಗೆ ಜೀವಾವಧಿ ಶಿಕ್ಷೆ

ಮೈಸೂರು, ಏ.29(ಎಸ್‌ಬಿಡಿ)– ಗರ್ಭಿಣಿ ಪತ್ನಿಯ ಕತ್ತು ಕೊಯ್ದು ಹತ್ಯೆ ಮಾಡಿ, ಗರ್ಭದಲ್ಲಿದ್ದ ಮಗುವಿನ ಸಾವಿಗೂ ಕಾರಣನಾದ ವ್ಯಕ್ತಿಗೆ ಜೀವಾವಧಿ ಶಿಕ್ಷೆ ವಿಧಿಸಿ, ಮೈಸೂರಿನ ಐದನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತೀರ್ಪಿತ್ತಿದೆ.

ನಂಜನಗೂಡಿನ ಮಂಜುಗೆ ಜೀವಾವಧಿ ಶಿಕ್ಷೆ ವಿಧಿಸಿದ್ದು, ಈತ ಪ್ರೀತಿಸಿ ಮದುವೆಯಾದ ಪತ್ನಿಯನ್ನೇ ಅಮಾನುಷವಾಗಿ ಹತ್ಯೆ ಮಾಡಿದ ಆರೋಪ ಸಾಬೀತಾಗಿದೆ.

ನಂಜನಗೂಡು ಪಟ್ಟಣ ಪೊಲೀಸ್ ಠಾಣೆ ವ್ಯಾಪ್ತಿಯ ಚಾಮಲಾಪುರಹುಂಡಿಯ ಮಂಜು ಹಾಗೂ ಶೋಭಾ ಪ್ರೀತಿಸಿ ವಿವಾಹವಾಗಿದ್ದರು. ದಂಪತಿಗೆ ಐದು ವರ್ಷದ ಮುದ್ದಾದ ಮಗುವಿತ್ತು. ಪತ್ನಿಯೊಂದಿಗೆ ಅನ್ಯೋನ್ಯವಾಗಿಯೇ ಇದ್ದ ಮಂಜು, ನಂತರದ ದಿನಗಳಲ್ಲಿ ಕುಡಿದು ಪತ್ನಿಯೊಂದಿಗೆ ಜಗಳ ಮಾಡಿ, ಹೊಡೆಯಲು ಶುರು ಮಾಡಿದ್ದ. ಆಕೆಗೆ ಊಟ–ತಿಂಡಿ ನೀಡದೆ, ಯೋಗಕ್ಷೇಮ ನೋಡಿಕೊಳ್ಳದೆ ಹಿಂಸಿಸುತ್ತಿದ್ದ. ಶೋಭಾ ಪುನಃ 8 ತಿಂಗಳ ಗರ್ಭಿಣಿಯಿದ್ದಾಗ ಆಕೆಯ ತಂದೆ ಅಪಘಾತದಲ್ಲಿ ಮೃತಪಟ್ಟರು. ಅವರ ತಾಯಿಗೆ ಅಪಘಾತ ವಿಮೆಯ ಹಣ ಬಂದಿತ್ತು.

ಈ ವಿಷಯ ತಿಳಿದಿದ್ದ ಮಂಜು, ಪತ್ನಿ ಶೋಭಾಳಿಗೆ ಒತ್ತಾಯ ಮಾಡಿ ತವರಿನಿಂದ 3 ಲಕ್ಷ ರೂ. ಹಣ ತರಿಸಿದ್ದ. ಆ ಹಣವನ್ನೆಲ್ಲಾ ಖರ್ಚು ಮಾಡಿದ ಮೇಲೆ ಮತ್ತಷ್ಟು ಹಣ ತರುವಂತೆ ಪತ್ನಿಯನ್ನು ಪೀಡಿಸುತ್ತಿದ್ದ ಹಿಂಸೆ ಸಹಿಸಿಕೊಂಡಿದ್ದ ಶೋಭಾ, 2023ರ ಸೆಪ್ಟೆಂಬರ್ 14ರಂದು ಹೆರಿಗೆಗೆಂದು ಚಾಮಲಾಪುರಹುಂಡಿಯ ತನ್ನ ತಾಯಿ ಮನೆಗೆ ಹೋಗಿದ್ದಳು. ಅಲ್ಲಿಗೂ ಹೋದ ಮಂಜು, ಪತ್ನಿಯೊಂದಿಗೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈಯ್ದು ಜೇಬಿನಲ್ಲಿಟ್ಟುಕೊಂಡಿದ್ದ ಬ್ಲೇಡ್‌ನಿಂದ ಆಕೆಯ ಕತ್ತು ಕುಯ್ದ. ಕೂಡಲೇ ಆಕೆಯನ್ನು ನಂಜನಗೂಡು ಆಸ್ಪತ್ರೆಗೆ ಕರೆದೊಯ್ದು, ನಂತರ ಹೆಚ್ಚಿನ ಚಿಕಿತ್ಸೆಗೆಂದು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಆಕೆ ಜೊತೆಗೆ ಆಕೆಯ ಗರ್ಭದಲ್ಲಿದ್ದ ಗಂಡು ಮಗುವೂ ಸಾವನ್ನಪ್ಪಿತು.

ಈ ಸಂಬಂಧ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು ಅಂದಿನ ವೃತ್ತ ನಿರೀಕ್ಷಕ ಬಸವರಾಜು ತನಿಖೆ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ ಐದನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಗುರುರಾಜ್ ಸೋಮಕ್ಕಳವರ್ ಅವರು ಮಂಜುಗೆ ಜೀವಾವಧಿ ಶಿಕ್ಷೆ ಹಾಗೂ 10 ಸಾವಿರ ರೂ. ದಂಡ ವಿಧಿಸಿ, ತೀರ್ಪು ಪ್ರಕಟಿಸಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಬಿ.ಈ. ಯೋಗೇಶ್ವರ ವಾದ ಮಂಡಿಸಿದ್ದರು.

ಮೂರನೇ ಪುಟದಿಂದ

ಅಮ್ಮನ 14 ಎಕರೆ ಭೂಮಿ ರಕ್ಷಣೆ



ಅತಿಕ್ರಮಿತ ಜಾಗದ ನಕ್ಷೆ.

ಹಾಗೂ ಉತ್ತನಹಳ್ಳಿ ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ದೇವಾಲಯಗಳ ಹೆಸರಲ್ಲಿರುವ ಆಸ್ತಿ ಸಂರಕ್ಷಣೆಗೆ ಮುಂದಾದೆವು. ನಿರಂತರವಾಗಿ ಕಂದಾಯ ಇಲಾಖೆ ಮೂಲಕ ಈ ದೇವಾಲಯಗಳ ಹೆಸರಿನಲ್ಲಿರುವ ಭೂಮಿ ಪರಿಶೀಲನೆ ನಡೆಸಿ, ಸದ್ಯಕ್ಕೆ ಉತ್ತನಹಳ್ಳಿ ವ್ಯಾಪ್ತಿಯ ಮೂರು ಸರ್ವೆ ನಂಬರ್ ಹಾಗೂ ಹಡಜನ ಚಿಕ್ಕೇಗೌಡನಹಳ್ಳಿಯ ಎರಡು ಸರ್ವೆ ನಂಬರ್‌ಗಳಲ್ಲಿ ಸುಪರ್ದಿಗೆ ಪಡೆಯಲಾಗಿದೆ ಎಂದು ತಿಳಿಸಿದರು.

ಶ್ರೀ ತ್ರಿಪುರ ಸುಂದರಿ ಅಮ್ಮನ ದೇವಸ್ಥಾನದ ಆಸ್ತಿ: ಉತ್ತನಹಳ್ಳಿ ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ದೇವಾಲಯದ ಹೆಸರಲ್ಲಿರುವ ಉತ್ತನಹಳ್ಳಿ ಸರ್ವೆ ನಂಬರ್ 163ರ 4.34 ಎಕರೆ ಹಾಗೂ ಸರ್ವೆ ನಂಬರ್ 197/1ರ 2 ಎಕರೆ ಭೂಮಿ ಅತಿಕ್ರಮಣವಾಗಿತ್ತು. ದೇವಾಲಯದಲ್ಲಿ ಪೂಜೆ ಮಾಡುವುದಕ್ಕೆ 2 ಎಕರೆ ಇನಾಮು ನೀಡಿರುವುದಾಗಿ ವಾದಿಸಿದ್ದರು. ಆದರೆ ಆ ಪ್ರಕರಣ ಡಿಸಿ ಕೋರ್ಟ್‌ನಲ್ಲಿ ವಜಾ ಆಗಿತ್ತು. ಹಾಗಾಗಿ ನಾವು ಆ ಭೂಮಿಯನ್ನು ಸುಪರ್ದಿಗೆ ಪಡೆದು ಕಾಂಪೌಂಡ್ ಹಾಕಿಸಿದೆವು. ಈ ನಡುವೆ ಅವರು ನ್ಯಾಯಾಲಯಕ್ಕೆ ಹೋಗಿದ್ದರಾದರೂ ಅಲ್ಲಿಯೂ ನಮ್ಮ ಪರವಾಗಿ ಆದೇಶವಾಗಿದೆ. ಸರ್ವೆ ನಂಬರ್ 163ರ 4.34 ಎಕರೆ ಸಂಬಂಧ ಯಾವುದೇ ಪ್ರಕರಣವಿಲ್ಲ. ಆ ಭೂಮಿಯನ್ನೂ ಬಂದೋಬಸ್ತ್ ಮಾಡಲಾಗಿದೆ ಎಂದರು.

ಫೆನ್ಸಿಂಗ್ ದುರಸ್ತಿ: ಉತ್ತನಹಳ್ಳಿ ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನದ ಸುತ್ತಮುತ್ತಲಿನ ಸರ್ವೆ ನಂಬರ್ 1ರಲ್ಲಿ 17.24 ಎಕರೆ ಭೂಮಿ ದೇವಸ್ಥಾನದ ಸುಪರ್ದಿಯಲ್ಲಿದ್ದು, ಸುತ್ತಲೂ ಅಳವಡಿಸಿರುವ ಫೆನ್ಸಿಂಗ್ ಅಲ್ಲಲ್ಲಿ ಹಾಳಾಗಿದೆ. ಅದನ್ನು ಸರಿಪಡಿಸುವ ಕಾರ್ಯವೂ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಆಸ್ತಿ: ಹಡಜನ ಚಿಕ್ಕೇಗೌಡನಹುಂಡಿಯ ಎರಡು ಸರ್ವೆ ನಂಬರ್‌ಗಳಲ್ಲಿ ಶ್ರೀ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಸೇರಿದ ಆಸ್ತಿಯನ್ನು ಸುಪರ್ದಿಗೆ ಪಡೆಯಲಾಗಿದೆ. ಅಲ್ಲಿನ ಸರ್ವೆ ನಂಬರ್ 81/4 ಮತ್ತು 81/5 ನಲ್ಲಿ ಒಟ್ಟು 6.16 ಎಕರೆ ಭೂಮಿಯನ್ನು ಬಹುತೇಕ ಅತಿಕ್ರಮಿಸಿಕೊಳ್ಳಲಾಗಿತ್ತು. ಕೆಲವು ಶೆಡ್ ಮಾದರಿಯ ಮನೆಗಳನ್ನೂ ನಿರ್ಮಿಸಲಾಗಿತ್ತು. ಈ ಭೂಮಿಯನ್ನು ದೇವಸ್ಥಾನದ ಸುಪರ್ದಿಗೆ ಪಡೆದು, ಸುತ್ತಲೂ ಕಾಂಪೌಂಡ್ ಹಾಕಿಸಲಾಗುತ್ತಿದೆ. ಇದೇ ಗ್ರಾಮದ ಸರ್ವೆ ನಂಬರ್ 78/1ರಲ್ಲಿ 1.16 ಎಕರೆ ಭೂಮಿ ಚಾಮುಂಡೇಶ್ವರಿ ದೇವಸ್ಥಾನದ ಹೆಸರಲ್ಲಿದೆ ಎಂಬ ಮಾಹಿತಿ ಲಭ್ಯವಾಗಿದ್ದು, ಸರ್ವೆ ಮಾಡಲು ಸೂಚಿಸಲಾಗಿದೆ ಎಂದು ವಿವರಿಸಿದರು. ಚಾಮುಂಡಿಬೆಟ್ಟದಲ್ಲಿ ದೇವಸ್ಥಾನದ ಬಳಿ 1.24 ಎಕರೆ ಜಾಗವನ್ನು ದೇವಸ್ಥಾನದ ಹೆಸರಿಗೆ ಬಹಳ ವರ್ಷಗಳ ಹಿಂದೆಯೇ ಜಿಲ್ಲಾಧಿಕಾರಿಗಳು ಮಂಜೂರು ಮಾಡಿದ್ದಾರೆ. ಆ ಜಾಗವನ್ನೂ ಒತ್ತುವರಿ ಮಾಡಿಕೊಳ್ಳಲಾಗಿದ್ದು, ಸರ್ವೆ ಕಾರ್ಯದ ನಂತರ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಮುಂದಿನ ಕ್ರಮ ವಹಿಸಲಾಗುವುದು ಎಂದರು.

ಮಾತ್ ಕೇಳಿದ್ರೆ ಸಿಎಂ ಆಗ್ತಿರ್ಲಿಲ್ಲ!

ಶಾನುಭೋಗರು ಮಾಡುತ್ತಿದ್ದರು, ಅವರೆಂದರೆ, ರೈತರಿಗೆ ಗುರುಗಳಿದ್ದಂತೆ. ಶಾನುಭೋಗರು ಹೇಳಿದ್ದೇ ಅಂತಿಮ ಎಂಬಂತಿತ್ತು, ಕೆಲವರು ಉತ್ತಮ ಕೆಲಸ ಮಾಡುತ್ತಿದ್ದರೆ, ಮತ್ತೆ ಕೆಲವರು ಕಿತಾಪತಿ ಮಾಡುತ್ತಿದ್ದರು. ಅವರೇ ದಾಖಲೆಗಳನ್ನು ಬರೆಯುವವರು, ಅವರು ಏನು ಬರೆದಿದ್ದಾರೆ ಎಂಬುದನ್ನೂ ಓದಿ ಹೇಳುತ್ತಿರಲಿಲ್ಲ. 1978ರಲ್ಲಿ ತಾಲೂಕು ಮಂಡಳಿ ಚುನಾವಣೆಗೆ ನಿಂತಾಗ ನಮ್ಮ ಶಾನುಭೋಗರು ನಮ್ಮ ತಂದೆ ತಲೆ ಕೆಡಿಸಿದ್ದರು ಎಂದು ಬದುಕಿನ ಗತಕಾಲದ ಬೆಳವಣಿಗೆಗಳ ಮೆಲುಕು ಹಾಕಿದರು.

ಗ್ರಾಮ ಆಡಳಿತಾಧಿಕಾರಿಗಳ ನೇಮಕ

ವಿಜ್ಞಾನ ಬೆಳೆದಿದೆ, ಈಗ ಪ್ರತಿಯೊಂದೂ ಡಿಜಿಟಲೀಕರಣವಾಗಿದೆ. ಆನ್‌ಲೈನ್‌ನಲ್ಲಿ ದಾಖಲಾತಿ ಪಡೆಯುವ ವ್ಯವಸ್ಥೆ ಬಂದ ನಂತರ ಯಾವುದೇ ಕಾರಣಕ್ಕೂ ತಪ್ಪುಗಳಿಗೆ ಅವಕಾಶ ನೀಡಬಾರದು, ರೈತರಿಗೂ ಗ್ರಾಮ ಆಡಳಿತಾಧಿಕಾರಿಗಳಿಗೂ ಹತ್ತಿರದ ಸಂಬಂಧವಿರುತ್ತದೆ, ಪ್ರತಿಯೊಬ್ಬ ರೈತರ ಪರಿಚಯ ಅವರಿಗಿರುತ್ತದೆ, ಭೂಮಿ ಕುರಿತು ಮಾಹಿತಿ ಇರುತ್ತದೆ, ಅಗತ್ಯ ದಾಖಲಾತಿ ಒದಗಿಸುವುದು ನಿಮ್ಮ ಕೆಲಸ ಎಂದರು. ಗ್ರಾಮ ಆಡಳಿತಾಧಿಕಾರಿಗಳು ಉತ್ತಮ ನಡತೆ, ಸಂಪರ್ಕ ಹೊಂದಿದ್ದರೆ ರೈತರು ನಿಮ್ಮ ಮಾತನ್ನು ಕೇಳುತ್ತಾರೆ. ಗ್ರಾಮ ಆಡಳಿತಾಧಿಕಾರಿಗಳು ಒಳ್ಳೆ ಕೆಲಸ ಮಾಡಿಕೊಟ್ಟರೆ ಗೌರವ ಬರುತ್ತದೆ. ಜನರ ಕೆಲಸ ದೇವರ ಕೆಲಸ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ನಾವಿರುವುದೇ ಜನರ ಸೇವೆಗಾಗಿ, ರಾಜ್ಯದಲ್ಲಿನ ಆರು ಲಕ್ಷ ಸರ್ಕಾರಿ ನೌಕರರು ಜನರ ಸೇವೆಗಾಗಿಯೇ ಇರುವುದು, ರಾಜಕಾರಣಿಗಳು, ಜನರಿಂದ ಆಯ್ಕೆಯಾದರೆ, ಸರ್ಕಾರದಿಂದ ಆಯ್ಕೆಯಾದ ಸರ್ಕಾರಿ ನೌಕರರು ಜನಸೇವೆಯನ್ನೇ ಧ್ಯೇಯವಾಗಿಸಿಕೊಳ್ಳಬೇಕು.

ಕಂದಾಯ ಇಲಾಖೆಯದ್ದು ಅತ್ಯಂತ ಜವಾಬ್ದಾರಿಯುತ ಕೆಲಸ, ಸಚಿವ ಕೃಷ್ಣಬೈರೇಗೌಡ ಇಲಾಖೆಯಲ್ಲಿ ಅನೇಕ ಸುಧಾರಣೆಗಳನ್ನು ತಂದಿದ್ದಾರೆ. ಯಾವುದೇ ಕಾರಣಕ್ಕೆ ರೈತರಿಗೆ ತೊಂದರೆ ಕೊಡುವುದಾಗಲೀ, ಭ್ರಷ್ಟಾಚಾರಕ್ಕಾಗಲೀ ಅವಕಾಶ ಕೊಡಬಾರದು. ಸಣ್ಣ ಹಿಡುವಳಿದಾರರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಅವರಿಗೆ ಅನುಕೂಲ ಕಲ್ಪಿಸುವುದು ಗ್ರಾಮ ಆಡಳಿತಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ.

ಕೃಷಿ, ಲಾಭದಾಯಕ ವೃತ್ತಿಯಾಗಿ ಉಳಿದುಕೊಂಡಿಲ್ಲ, ಅನ್ನದಾತರ ಹಾಗೂ ನಾಡಿನ ಒಳಿತಿಗೆ ಕೆಲಸ ಮಾಡುತ್ತಿರುವ ಅರಿವಿರಬೇಕು. ರೈತರಿಗೆ ಭೂಮಿ ಬೀಟ್ ಕಾರ್ಯಕ್ರಮ ಸರ್ಕಾರ ಜಾರಿಗೆ ತಂದಿದೆ. ಜಮೀನು ಅತಿಕ್ರಮಣ ಸಮಸ್ಯೆಗಳನ್ನು ನಿವಾರಿಸಲು ಭೂಮಿ ಬೀಟ್ ಕಾರ್ಯಕ್ರಮ ಅನುಕೂಲ ಕಲ್ಪಿಸಿದೆ.

ಜಮೀನಿನ ದಾಖಲಾತಿ ಹಾಗೂ ಸರ್ವೆಗಳು ಸಮರ್ಪಕವಾಗಿ ನಡೆದರೆ ಗ್ರಾಮಗಳಲ್ಲಿ ಭೂಮಿ ಕಲಹವಿಲ್ಲದೇ ಬಹುಮಟ್ಟಿಗೆ ನೆಮ್ಮದಿ ನೆಲೆಸಲು ಸಾಧ್ಯವಿದೆ. ಈಗ ನೇಮಕಗೊಂಡಿರುವ ಗ್ರಾಮ ಆಡಳಿತಾಧಿಕಾರಿಗಳು ಉದಾಸೀನತೆಯ ಭಾವನೆ ತಳೆಯದೇ ಪ್ರಾಮಾಣಿಕವಾಗಿ ದುಡಿಯಬೇಕು ಎಂದು ಶುಭ ಹಾರೈಸಿದರು.

ಕರ್ನಾಟಕದ ಇತಿಹಾಸದಲ್ಲಿ ಲಂಚವಿಲ್ಲದ ನೇಮಕ ಅಂದರೆ ಇದೆ...!

ಬೆಂಗಳೂರು, ಏ.29(ಕೆಎಂಶಿ)– ಲಂಚಕ್ಕೆ ಆಸ್ಪದ ಇಲ್ಲದಂತೆ ಪಾರದರ್ಶಕವಾಗಿ ಒಂದೇ ಹಂತದಲ್ಲಿ 1,000 ಗ್ರಾಮ ಆಡಳಿತ ಅಧಿಕಾರಿಗಳ ನೇಮಕ ಮಾಡಿರುವುದು ಕರ್ನಾಟಕದ ಇತಿಹಾಸದಲ್ಲಿ ಇದೇ ಮೊದಲು ಎಂದು ಸಚಿವ ಕೃಷ್ಣಬೈರೇಗೌಡ ಇಂದಿಲ್ಲಿ ತಿಳಿಸಿದ್ದಾರೆ.

ಈ ಹಿಂದೆ ಪಿಯುಸಿ ಅಂಕ ಗಳಿಕೆ ಆಧಾರದ ಮೇಲೆ ಆಯಾ ಜಿಲ್ಲೆಯಲ್ಲಿ ಸೀಮಿತ ಸ್ಥಾನಗಳಿಗೆ ನೇಮಕಾತಿ ಆಗುತ್ತಿತ್ತು. ನೇಮಕಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಇಲ್ಲ ಎಂಬ ದೂರು ಇತ್ತು ಆದ್ದರಿಂದ ಒಂದೇ ಬಾರಿ ಪಾರದರ್ಶಕ ನೇಮಕ ಹಾಗೂ ಎಲ್ಲ ಜಿಲ್ಲೆಯವರಿಗೂ ಸಮಾನ ಅವಕಾಶ ಸಿಗಬೇಕು ಎಂಬ ದೃಷ್ಟಿಯಲ್ಲಿ ಕ್ರಮವಹಿಸಲಾಗಿದೆ ಎಂದರು.

ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ 1,000 ಗ್ರಾಮ ಆಡಳಿತ ಅಧಿಕಾರಿಗಳಿಗೆ ನೇಮಕಾತಿ ಆದೇಶ, 4,000 ಲ್ಯಾಪ್‌ಟಾಪ್ ವಿತರಣೆ ಹಾಗೂ ಕಂದಾಯ ಇಲಾಖೆಯ ಎರಡು ವರ್ಷದ 'ಸಾಧನೆಯ ಹಾದಿ' ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಒಂದೇ ಬಾರಿ ಅರ್ಜಿ ಕರೆದು, ಪರೀಕ್ಷೆ ನಡೆಸಿ ಮಧ್ಯವರ್ತಿಗಳಿಲ್ಲದೆ ನೇಮಕಾತಿ ಮಾಡಿದ್ದೇವೆ. ಒಟ್ಟು 6,33,916 ಅರ್ಜಿ ಸಲ್ಲಿಸಿದ್ದರು, ಅರ್ಜಿ ಸಲ್ಲಿಸಿದವರ ಪೈಕಿ ಶೇ. 0.0016 ಜನ ಆಯ್ಕೆಯಾಗಿದ್ದಾರೆ.

ಗ್ರಾಮ ಆಡಳಿತ ಅಧಿಕಾರಿ ಕೆಲಸಕ್ಕೆ ಶಿಫಾರಸು ಮಾಡುವಂತೆ ನನ್ನ ಬಳಿಯೂ ಬಂದಿದ್ದರು, ಶಿಫಾರಸಿಗೆ ಅವಕಾಶ ಇಲ್ಲದಂತೆ ಪಾರದರ್ಶಕ ಪರೀಕ್ಷೆ ನಡೆಸಲಾಗಿದೆ, ಉತ್ತರ ಪತ್ರಿಕೆ ತಿದ್ದುವುದು ಸೇರಿದಂತೆ ಯಾವುದೇ ಅಕ್ರಮ ಚಟುವಟಿಕೆಗಳಿಗೂ ಆಸ್ಪದ ಇಲ್ಲದಂತೆ ಎಚ್ಚರ ವಹಿಸಲಾಗಿದೆ. ಹುದ್ದೆಗಾಗಿ ಯಾರೂ ಸಹಾ ಒಂದು ಪೈಸೆಯೂ ಲಂಚ ಕೊಟ್ಟಿಲ್ಲ, ಈ ಬಗ್ಗೆ ಒಂದೂ ತಕರಾರು ಬಂದಿಲ್ಲ, ಲಂಚ ಇಲ್ಲದೆ ಹುದ್ದೆ ನೀಡಿದ್ದೇವೆ ಎಂದು ಹೇಳಲು ಸಂತೋಷವಾಗುತ್ತದೆ. ಮುಖ್ಯಮಂತ್ರಿಗಳ ಕೈಯಿಂದಲೇ ಎಲ್ಲಾ ಅಧಿಕಾರಿಗಳಿಗೂ ವಿಧಾನಸೌಧದಲ್ಲೇ ಆದೇಶ ಪ್ರತಿ ನೀಡಲು ಸಿದ್ದರಾಮಯ್ಯ ಅವರನ್ನು ಒಪ್ಪಿಸಿದೆ, ಮೊದಲ ಬಾರಿಗೆ ಸಾವಿರ ಜನ ಸರ್ಕಾರಿ ಸೇವೆಗೆ ಕಾಲಿಡುತ್ತಿದ್ದಾರೆ, ವಿಧಾನಸೌಧ ಕಟ್ಟಿದ ಆಶಯ ಅರ್ಥವಾಗುತ್ತೆ, ಜನಪರ ಕೆಲಸ ಮಾಡುತ್ತಾರೆ ಎಂಬ ಉದ್ದೇಶದಿಂದ ಇಲ್ಲಿಯೇ ಕಾರ್ಯ ಕ್ರಮ ಆಯೋಜಿಸಲಾಯಿತು. ನೇಮಕಾತಿ ಆದೇಶ ಪಡೆದವರಲ್ಲಿ ಬಹುತೇಕರು ಸರ್ಕಾರಿ ಕೆಲಸ ಗಿಟ್ಟಿಸಿದ ಕುಟುಂಬದ ಮೊದಲಿಗರಾಗಿದ್ದಾರೆ, ಹುದ್ದೆಗೆ ನೀವು ಋಣ ತೀರಿಸಬೇಕು ಎಂತಿದ್ದರೆ ಜನರ ಪ್ರಾಮಾಣಿಕ ಸೇವೆ ಮಾಡಿ ಋಣ ತೀರಿಸಿ ಎಂದರು.

ಕೆಲಸ ಬಿಟ್ಟು ಓಡಾಡೋದರಲ್ಲೇ ಸಮಯ ವ್ಯರ್ಥವಾಗುವುದನ್ನು ತಪ್ಪಿಸಲು ಹಾಗೂ ಜನರು ಕಚೇರಿಗೆ ಅಲೆಯುವುದನ್ನು ಕಡಿಮೆ ಮಾಡುವ ಉದ್ದೇಶದಿಂದ ಗ್ರಾಮ ಆಡಳಿತ ಅಧಿಕಾರಿಗಳಿಗೆ ಲ್ಯಾಪ್‌ಟಾಪ್ ನೀಡಲಾಗುತ್ತಿದೆ. ಎಲ್ಲ ಕೆಲಸ ಸಂಪೂರ್ಣ ಡಿಜಿಟಲೀಕರಣ ಆಗಬೇಕು, ಸಚಿವರವರೆಗೆ ಡಿಜಿಟಲ್ ರೂಪದಲ್ಲೇ ಕಡತಗಳ ಕೆಲಸ ಆಗಬೇಕು. 2025–26ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಗ್ರಾಮ ಆಡಳಿತಾಧಿಕಾರಿಗಳಿಗೆ ಲ್ಯಾಪ್‌ಟಾಪ್ ನೀಡಲಾಗುವುದು, ಎಲ್ಲಾ ಕಡತ ಆನ್‌ಲೈನ್‌ಗೆ ತಂದು ಪಾರದರ್ಶಕವಾಗಿ ಕೆಲಸ ಆಗುವಂತೆ, ದಾಖಲೆಗಳು ಕಳೆದುಹೋಗದಂತೆ ನೋಡಿಕೊಳ್ಳುವುದು ಡಿಜಿಟಲೀಕರಣದ ಉದ್ದೇಶ ಎಂದರು.

ವಿಶ್ವೇಶ್ವರಯ್ಯ ನಾಲೆಯಲ್ಲಿ ಶವವಾಗಿ ಪತ್ತೆ



ಬಾಲದಂಡಿ, ಮಂಗಳವಾರ ಬೆಳಿಗ್ಗೆ ನಾರ್ತ್ ಬ್ಯಾಂಕ್ ಸರ್ಕಲ್ ಬಳಿ ಕಾರೊಂದು ನಾಲೆಗೆ ಬಿದ್ದಿರುವ ಬಗ್ಗೆ ಕೆಆರ್‌ಎಸ್ ಠಾಣೆ ಪೊಲೀಸರಿಗೆ ಮಾಹಿತಿ ಬಂದಿದೆ. ಇದಕ್ಕೂ ಮುನ್ನ ಬೆಂಗಳೂರಿನ ಮಾದನಾಯಕನಹಳ್ಳಿ ಠಾಣೆಯಲ್ಲಿ ತಂದೆ ಹಾಗೂ ಇಬ್ಬರು ಮಕ್ಕಳು ನಾಪತ್ತೆಯಾಗಿರುವ ಪ್ರಕರಣ ಕಳೆದ ಹತ್ತು ದಿನಗಳ ಹಿಂದೆ ದಾಖಲಾಗಿತ್ತು. ನಾಪತ್ತೆಯಾದ ಬಗ್ಗೆ ಮಾದನಾಯಕನಹಳ್ಳಿ ಠಾಣೆ ಪೊಲೀಸರು ತನಿಖೆ ನಡೆಸುವಾಗ ನಾಪತ್ತೆಯಾದ ಕುಮಾರಸ್ವಾಮಿ ಫೋನ್ ಲೊಕೇಷನ್ ಕೆಆರ್‌ಎಸ್ ಠಾಣಾ ವ್ಯಾಪ್ತಿಯಲ್ಲಿ ಗೋಚರಿಸಿದೆ. ಅದನ್ನು ಆಧರಿಸಿ, ಅಲ್ಲಿನ ಪೊಲೀಸರು ಇಲ್ಲಿಗೆ ಆಗಮಿಸಿ, ಪರಿಶೀಲಿಸಿದಾಗ ನಾಪತ್ತೆಯಾದವರ ಸುಳಿವು ಸಿಕ್ಕಿರಲಿಲ್ಲ ಎಂದು ಸ್ಪಷ್ಟಪಡಿಸಿದರು.

ನಾಲೆಯಲ್ಲಿ ಸಾಕಷ್ಟು ನೀರಿದ್ದ ಪರಿಣಾಮ ಸುಳಿವು ಸಿಗುವುದು ಬಹಳ ವಿಳಂಬವಾಯಿತು. ಇಂದು ನಾಲೆಯಲ್ಲಿ ಪತ್ತೆಯಾದ ಕಾರಿನಲ್ಲಿ ಕುಮಾರಸ್ವಾಮಿ ಮತ್ತು ಆತನ ಇಬ್ಬರು ಮಕ್ಕಳ ಶವಗಳು ದೊರೆತಿವೆ. ಘಟನೆಗೆ ಸಂಬಂಧಿಸಿದಂತೆ ಆತನ ಪೋಷಕರ ವಿಚಾರಣೆ ನಡೆಯುತ್ತಿದೆ. ಇದು ಆತ್ಮಹತ್ಯೆಯೋ ಅಥವಾ ಆಕಸ್ಮಿಕ ಘಟನೆಯೋ ಎಂಬ ಬಗ್ಗೆ ಸಮಗ್ರ ಮಾಹಿತಿ ಕಲೆ ಹಾಕಿ ತನಿಖೆ ನಡೆಸುತ್ತಿದ್ದು, ಕಾರಿಗೆ ಸ್ವಲ್ಪ ಡ್ಯಾಮೇಜ್ ಸಹ ಆಗಿದೆ. ಈ ನಿಟ್ಟಿನಲ್ಲಿ ಎಲ್ಲಾ ಆಯಾಮದಲ್ಲಿ ತನಿಖೆ ಮಾಡುತ್ತೇವೆ. ಮಾದನಾಯಕನಹಳ್ಳಿ ಠಾಣೆಯಲ್ಲಿ ನಾಪತ್ತೆ ದೂರು ದಾಖಲಾಗಿದ್ದರಿಂದ ಈವರೆಗೆ ಕೆಆರ್‌ಎಸ್ ಠಾಣೆಯಲ್ಲಿ ದೂರು ದಾಖಲಿಸಿಕೊಂಡಿರಲಿಲ್ಲ. ಇದೀಗ ಕೆಆರ್‌ಎಸ್ ಠಾಣೆಯಲ್ಲಿ ಮೂವರ ಸಾವಿನ ಬಗ್ಗೆ ದೂರು ದಾಖಲಿಸಲಾಗುವುದು ಎಂದು ತಿಳಿಸಿದರು.

ವಿವರ: ಕೆ.ಆರ್.ನಗರ ಮೂಲದ ಕುಮಾರಸ್ವಾಮಿ ಅವರು ಪತ್ನಿ ಮತ್ತು ಮಕ್ಕಳೊಂದಿಗೆ ಹಲವು ವರ್ಷಗಳಿಂದ ಬೆಂಗಳೂರಿನ ಮಾದನಾಯಕನಹಳ್ಳಿ ಗ್ರಾಮದಲ್ಲಿ ವಾಸವಿದ್ದು, ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಇವರು ಇತ್ತೀಚೆಗೆ ಕೆಲಸ ಬಿಟ್ಟಿದ್ದರು ಎನ್ನಲಾಗಿದೆ. ಕಳೆದ ಏಪ್ರಿಲ್ 17ರಂದು ಕೆ.ಆರ್.ನಗರಕ್ಕೆ ಹೋಗಿ ಬರುವುದಾಗಿ ಪತ್ನಿಗೆ ಹೇಳಿ ಬೆಂಗಳೂರಿನಿಂದ ಇಬ್ಬರು ಮಕ್ಕಳೊಂದಿಗೆ ಹೊರಟಿದ್ದಾರೆ. ಅಂದು ಸಂಜೆ ಕುಮಾರಸ್ವಾಮಿ ಪತ್ನಿ ಕೆ.ಆರ್.ನಗರದಲ್ಲಿರುವ ತಮ್ಮ ಮಾವನಿಗೆ ಕರೆ ಮಾಡಿ ಪತಿ ಬಂದಿದ್ದಾರೆಯೇ ಎಂದು ಕೇಳಿದಾಗ ಇನ್ನು ಮನೆಗೆ ಹೋಗದಿರುವುದು ಗೊತ್ತಾಗಿದೆ. ತಕ್ಷಣ ಕುಟುಂಬಸ್ಥರು ಕುಮಾರಸ್ವಾಮಿಗೆ ಕರೆ ಮಾಡಿದಾಗ ಬರುವ ಮಾರ್ಗದಲ್ಲಿ ಮಕ್ಕಳಿಗೆ ಕೆಆರ್‌ಎಸ್ ಡ್ಯಾಂ ತೋರಿಸಿಕೊಂಡು ಊರಿಗೆ ಬರುವುದಾಗಿ ಹೇಳಿದ್ದಾರೆ. ನಂತರ ಅದೇ ದಿನ ರಾತ್ರಿ 8 ಗಂಟೆ ನಂತರ ಕುಮಾರಸ್ವಾಮಿ ಫೋನ್ ಸ್ವಿಚ್ ಆಫ್ ಆಗಿದೆ.

ಈ ಹಿನ್ನೆಲೆಯಲ್ಲಿ 19ರಂದು ಬೆಂಗಳೂರಿನ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ನಾಪತ್ತೆ ಪ್ರಕರಣವನ್ನು ಕುಟುಂಬಸ್ಥರು ದಾಖಲಿಸಿದ್ದಾರೆ. ಇದಾದ ಹತ್ತು ದಿನದ ಬಳಿಕ ಕುಮಾರಸ್ವಾಮಿ ಮತ್ತು ಆತನ ಮಕ್ಕಳು ಹೆಣವಾಗಿ ವಿ.ಸಿ.ನಾಲೆಯಲ್ಲಿ ಪತ್ತೆಯಾಗಿದ್ದಾರೆ.

ಸುಮಾರು ಎಂಟು ವರ್ಷಗಳ ಹಿಂದೆ ಕುಮಾರಸ್ವಾಮಿ ಪ್ರೀತಿಸಿ ಮದುವೆಯಾಗಿದ್ದು, ಬೆಂಗಳೂರಿನಿಂದ ಆಗಾಗ್ಗೆ ಕೆ.ಆರ್. ನಗರದ ತಂದೆ ಮನೆಗೆ ಬಂದು ಹೋಗುತ್ತಿದ್ದರು. ಕಳೆದ ಎರಡು ವರ್ಷಗಳಿಂದ ಪತ್ನಿ ಬಾರದೆ ಕುಮಾರಸ್ವಾಮಿ ತನ್ನ ಇಬ್ಬರು ಮಕ್ಕಳೊಂದಿಗೆ ಬಂದು ಹೋಗುತ್ತಿದ್ದು, ಸಾವಿನ ಬಗ್ಗೆ ಅನುಮಾನವಿದೆ ಎಂದು ಮೃತನ ಸಹೋದರ ನವೀನ್ ಹೇಳಿದ್ದಾರೆ.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇಗೆ ಚನ್ನಪಟ್ಟಣದಲ್ಲಿ ಹೊಸ ಎಂಟ್ರಿ, ಎಕ್ಸಿಟ್

ರಾಮನಗರ, ಏ.29– ಪ್ರವಾಸಿಗರು ಹಾಗೂ ವಾಹನ ಸವಾರರ ಅನುಕೂಲಕ್ಕಾಗಿ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇಗೆ ಹೊಸ ಪ್ರವೇಶ ಮತ್ತು ನಿರ್ಗಮನಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅನುಮತಿ ನೀಡಿದೆ ಎಂದು ಸಂಸದ ಡಾ. ಮಂಜುನಾಥ್ ತಿಳಿಸಿದ್ದಾರೆ.

ರಾಮನಗರ ಜಿಲ್ಲೆಯ ಚನ್ನಪಟ್ಟಣದ ಕಣ್ವ ಜಂಕ್ಷನ್ ಬಳಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಚನ್ನಪಟ್ಟಣದ ರಾಂಪುರದ ಬಳಿ ಪ್ರವೇಶ ಮತ್ತು ನಿರ್ಗಮನಕ್ಕೆ ಜಾಗ ಗುರುತಿಸಲಾಗಿತ್ತು ಆದರೆ ಅಲ್ಲಿ ಸೂಕ್ತ ಜಾಗ ಇಲ್ಲದಿದ್ದಕ್ಕೆ ಕಣ್ವ ಜಂಕ್ಷನ್ ಬಳಿ ಜಾಗ ಗುರುತು ಮಾಡಲಾಗಿದೆ ಎಂದು ಹೇಳಿದರು. ಹೀಗಾಗಿ ಸ್ಥಳೀಯ ಶಾಸಕರು ಹಾಗೂ ಎನ್‌ಹೆಚ್‌ಎಐ ಅಧಿಕಾರಿಗಳ ಜೊತೆ ಸ್ಥಳ ಪರಿಶೀಲನೆ ಮಾಡಲಾಗಿದೆ. ಕಣ್ವ ಜಂಕ್ಷನ್‌ನಲ್ಲಿ ಪ್ರವೇಶ ಮತ್ತು ನಿರ್ಗಮನ ನಿರ್ಮಾಣವಾದರೆ ಪ್ರವಾಸೋದ್ಯಮಕ್ಕೂ ಅನುಕೂಲವಾಗುತ್ತದೆ. ಕಣ್ವ ಡ್ಯಾಂ, ಕೆಂಗಲ್ ಆಂಜನೇಯನ ದೇವಾಲಯ ಹಾಗೂ ಬೆಂಗಳೂರು–ಮೈಸೂರು ಹಳೇ ಹೆದ್ದಾರಿಗೆ ನೇರ ಸಂಪರ್ಕ ಕಲ್ಪಿಸುತ್ತೆ ಎಂದರು.

ಅಲ್ಲದೇ ಶೀಘ್ರದಲ್ಲೇ ಮೂರು ಕಡೆಗಳಲ್ಲಿ ಸ್ಕೈವಾಕ್ ಕಾಮಗಾರಿ ಮುಗಿಯಲಿದೆ. ಚನ್ನಪಟ್ಟಣದ ಬಳಿ ಟಾಯ್ಸ್ ಪಾರ್ಕ್ ಕೂಡ ನಿರ್ಮಾಣವಾಗಲಿದೆ. ಅದಕ್ಕೂ ಈಗಾಗಲೇ ಜಾಗ ಗುರುತು ಮಾಡಲಾಗಿದೆ. ಹೆದ್ದಾರಿಯ ಎಲ್ಲಾ ಸಮಸ್ಯೆಗಳನ್ನು ಹಂತ ಹಂತವಾಗಿ ಬಗೆಹರಿಸಲಾಗುವುದು ಎಂದು ಭರವಸೆ ನೀಡಿದರು. ಪಹಲ್ಗಾಮ್ ದಾಳಿಗೆ ಕೇಂದ್ರ ಭದ್ರತಾ ವೈಫಲ್ಯ ಕಾರಣ ಎಂಬ ವಿಪಕ್ಷಗಳ ಆರೋಪ ವಿಚಾರವಾಗಿ ಮಾತನಾಡಿದ ಅವರು, ಈ ಸಂದರ್ಭದಲ್ಲಿ ಘಟನೆಗೆ ಯಾವ ರೀತಿ ಪ್ರತಿಕ್ರಿಯಿಸಬೇಕು ಎಂಬುವುದು ಮುಖ್ಯವಾಗುತ್ತದೆ. ಈ ಕ್ಷಣಕ್ಕೆ ಭಯೋತ್ಪಾದನೆ ಹಾಗೂ ಭಯೋತ್ಪಾದಕರಿಗೆ ತಕ್ಕಪಾಠ ಕಲಿಸುವ ಬಗ್ಗೆ ಯೋಚನೆ ಮಾಡಬೇಕು. ಮಿಕ್ಕಿದ್ದೆಲ್ಲ ಆಮೇಲೆ ಮಾತನಾಡಬಹುದು. ಯುದ್ಧ ಎಂಬುದು ಸೂಕ್ಷ್ಮವಾದ ವಿಚಾರ, ಅದರ ಬಗ್ಗೆ ಎಲ್ಲೆಂದರಲ್ಲಿ ಚರ್ಚೆ ಮಾಡುವುದು ಸೂಕ್ತವಲ್ಲ ಎಂದು ಹೇಳಿದರು. ಹೆದ್ದಾರಿಯಲ್ಲಿ ಹೊಸ ಎಂಟ್ರಿ ಮತ್ತು ಎಕ್ಸಿಟ್ ನಿರ್ಮಾಣಕ್ಕೆ ಎನ್‌ಹೆಚ್‌ಎಐ ಅನುಮತಿ ನೀಡಿದ ಹಿನ್ನೆಲೆಯಲ್ಲಿ ಮಂಗಳವಾರ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ಜೊತೆ ಸೇರಿಕೊಂಡು ಸಂಸದ ಡಾ.ಮಂಜುನಾಥ್ ಹಾಗೂ ಶಾಸಕ ಸಿ.ಪಿ.ಯೋಗೇಶ್ವರ್ ಸ್ಥಳ ಪರಿಶೀಲನೆ ನಡೆಸಿದರು.

ರಾಷ್ಟ್ರೀಯ ಮಹಿಳಾ ಆಯೋಗದಲ್ಲಿ 40 ಸಾವಿರ ಪ್ರಕರಣ ಬಾಕಿ

ಶೀಘ್ರ ಇತ್ಯರ್ಥ; ಆಯೋಗದ ಸದಸ್ಯೆ ಡಾ.ಅರ್ಚನಾ ಮಜುಮ್ದಾರ್ ಭರವಸೆ




ಮೈಸೂರು ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಮಂಗಳವಾರ ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ಅರ್ಚನಾ ಮಜುಮ್ದಾರ್ ಅವರು ನೊಂದ ಮಹಿಳೆಯರ ಅಹವಾಲು ಸ್ವೀಕರಿಸಿದರು (ಎಡಚಿತ್ರ). ಸಭೆಯಲ್ಲಿ ಪಾಲ್ಗೊಂಡಿದ್ದ ಪೊಲೀಸ್ ಸೇರಿದಂತೆ ಇತರೆ ಇಲಾಖೆ ಅಧಿಕಾರಿಗಳನ್ನು (ಬಲಚಿತ್ರ) ಕಾಣಬಹುದು.

ಮೈಸೂರು, ಏ.29(ಬಿಎಲ್‌ಯು)– ರಾಷ್ಟ್ರೀಯ ಮಹಿಳಾ ಆಯೋಗದಲ್ಲಿ 40 ಸಾವಿರ ಪ್ರಕರಣ ಬಾಕಿ ಇದ್ದು, ಇವುಗಳನ್ನು ಶೀಘ್ರವೇ ಇತ್ಯರ್ಥ ಮಾಡಲಾಗುವುದು ಎಂದು ಆಯೋಗದ ಸದಸ್ಯೆ ಡಾ.ಅರ್ಚನಾ ಮಜುಮ್ದಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಮಂಗಳವಾರ ರಾಷ್ಟ್ರೀಯ ಮಹಿಳಾ ಆಯೋಗ ನಿಮ್ಮ ಮನೆ ಬಾಗಿಲಿಗೆ ಘೋಷವಾಕ್ಯದಲ್ಲಿ ಆಯೋಜಿಸಿದ್ದ ಮಹಿಳೆಯರ ಅಹವಾಲು ಆಲಿಸುವ ಸಾರ್ವಜನಿಕ ಅರ್ಜಿ ವಿಚಾರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಹಿಳಾ ಆಯೋಗ ಮಹಿಳೆಯರ ಪರವಾದ ಧ್ವನಿಯಾಗಿ ನಿಲ್ಲುತ್ತದೆ ಎಂದು ಭರವಸೆ ನೀಡಿದರು.

ಬಾಕಿ ಇರುವ ಪ್ರಕರಣಗಳಲ್ಲಿ ಅತೀ ಹೆಚ್ಚು ಪ್ರಕರಣಗಳು ಕೌಟುಂಬಿಕ ದೌರ್ಜನ್ಯಗಳಾಗಿವೆ. ಇದರೊಂದಿಗೆ ವರದಕ್ಷಿಣೆ ಕಿರುಕುಳ ಹಾಗೂ ಆತ್ಮಹತ್ಯೆ ಪ್ರಕರಣಗಳು ಕೂಡ ಇವೆ ಎಂದು ಹೇಳಿದರು.

ಆಯೋಗಕ್ಕೆ ಅಧ್ಯಕ್ಷರು ಹಾಗೂ ಸದಸ್ಯರನ್ನು ನೇಮಕ ಮಾಡಿ ಆರು ತಿಂಗಳಾಗಿದ್ದು, ಈ ಅವಧಿಯಲ್ಲಿ ತ್ವರಿತವಾಗಿ ಪ್ರಕರಣ ಇತ್ಯರ್ಥ ಮಾಡಲಾಗಿದೆ ಎಂದು ಡಾ.ಅರ್ಚನಾ ಮಜುಮ್ದಾರ್ ತಿಳಿಸಿದರು.

ಕರ್ನಾಟಕದಲ್ಲಿ ಅತೀ ಹೆಚ್ಚು ಬೆಂಗಳೂರಿನಲ್ಲಿ 256, ಮೈಸೂರಿನಲ್ಲಿ 66 ಪ್ರಕರಣ ದಾಖಲಾಗಿವೆ. ಆದಷ್ಟು ಬೇಗ ಇವುಗಳನ್ನು ಇತ್ಯರ್ಥ ಮಾಡುತ್ತೇವೆ ಎಂದರು.

ಅನ್ಯಾಯಕ್ಕೊಳಗಾದ ಮಹಿಳೆಯರಿಗೆ ನ್ಯಾಯ ಕೊಡಿಸುವುದು ಆಯೋಗದ ಆದ್ಯ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ನಿಮ್ಮ ಮನೆ ಬಾಗಿಲಿಗೆ ಬಂದು ನಿಮ್ಮ ಸಮಸ್ಯೆ ಆಲಿಸಿ ಅದನ್ನು ಪರಿಹಾರ ಮಾಡುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿದ್ದೇವೆ ಎಂದು ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆ ಡಾ.ಅರ್ಚನಾ ಮಜುಮ್ದಾರ್ ತಿಳಿಸಿದರು.

ಆಯೋಗದ ಮುಂದೆ ಪ್ರತ್ಯೇಕವಾಗಿ ಬಂದ ಮಹಿಳೆಯರು ತಮಗೆ ಆಗುತ್ತಿರುವ ಅನ್ಯಾಯ ವಿವರಿಸಿದರು. ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸಿದ ಆಯೋಗದ ಸದಸ್ಯೆ ಡಾ.ಅರ್ಚನಾ ಮಜುಮ್ದಾರ್ ಅವರು, ಪೊಲೀಸ್ ಸೇರಿದಂತೆ ಇತರೆ ಇಲಾಖೆಯ ಅಧಿಕಾರಿಗಳನ್ನು ಸ್ಥಳದಲ್ಲೆ ಕರೆಯಿಸಿ ಇಷ್ಟೆ ದಿನದಲ್ಲಿ ಸಮಸ್ಯೆ ಪರಿಹಾರ ಮಾಡಿ ನನಗೆ ವರದಿ ನೀಡಬೇಕೆಂದು ತಾಕೀತು ಮಾಡಿದರು. ಸಂತ್ರಸ್ತರು ಹಾಗೂ ಅನ್ಯಾಯಕ್ಕೊಳಗಾದವರ ಹೆಸರು, ವಿಳಾಸವನ್ನು ಬಹಿರಂಗ ಮಾಡುವಂತಿಲ್ಲ ಎಂಬ ಸುಪ್ರೀಂಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಆಯೋಗಕ್ಕೆ ದೂರು ಸಲ್ಲಿಸಿದ ಮಹಿಳೆಯರ ಸಮಸ್ಯೆ ಮಾತ್ರ ವಿವರಿಸಲಾಗಿದೆ.

ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್.ಯುಕೇಶ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವಕೀಲರಾದ ಹೆಚ್.ಜೆ.ಗೀತಾ, ಎನ್.ಶೀಲಾ, ಗಾಯತ್ರಿ, ರೂಪಾಲಿ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ನಮ್ಮ ಪೊಲೀಸರಿಂದಲೇ ನ್ಯಾಯ ಸಿಕ್ಕಿಲ್ಲ!

ಭಾವನಿಂದ ಲೈಂಗಿಕ ಕಿರುಕುಳ, ಮಗಳ ಸಾವಿನ ಕಾರಣ ತಿಳಿಸಿ!!

ನನ್ನ ಮಗಳದ್ದು ಕೊಲೆ: ಮಂಡ್ಯದ ವ್ಯಕ್ತಿಯೊಬ್ಬರು ತಮ್ಮ ದೂರಿಗೆ ಸ್ಪಂದಿಸದ ಪೊಲೀಸ್ ಇಲಾಖೆ ವಿರುದ್ಧವೇ ಆಯೋಗಕ್ಕೆ ದೂರು ನೀಡಿದರು. ನನ್ನ ಮಗಳು ಶಿಕ್ಷಣ ಮುಗಿಸಿದ ನಂತರ ಉದ್ಯೋಗಕ್ಕಾಗಿ ಬೆಂಗಳೂರಿನಲ್ಲಿ ವಾಸವಿದ್ದಳು. ಮಗಳು ಓದಿ ಕೆಲಸಕ್ಕೆ ಸೇರಿದ್ದಾಳಲ್ಲ ಎಂದು ನಾವು ಕೂಡ ಸಂತೋಷದಲ್ಲಿದ್ದೆವು. ಆದರೆ ಒಂದು ದಿನ ಅಪಾರ್ಟ್‌ಮೆಂಟ್‌ನ 5ನೇ ಅಂತಸ್ತಿನಿಂದ ಬಿದ್ದು ಸಾವನ್ನಪ್ಪಿದಳು. ನಿಮ್ಮ ಮಗಳು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಪೊಲೀಸರು ಷರಾ ಬರೆದರು. ಆದರೆ ನನ್ನ ಮಗಳು ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಮಾನಸಿಕ ದೌರ್ಬಲ್ಯದವಳಲ್ಲ. ಆದ ಕಾರಣ ನನ್ನ ಮಗಳನ್ನು ಯಾರೋ ಕೊಲೆ ಮಾಡಿದ್ದಾರೆ ಎಂದು ದೂರಿದರು.

ನನ್ನ ಮಗಳ ಸಾವಿಗೆ ನಿಖರ ಕಾರಣ ತಿಳಿಸುವಂತೆ ಪೊಲೀಸ್ ಠಾಣೆಗೆ ಮನವಿ ಮಾಡುತ್ತಿದ್ದೇನೆ. ಪೊಲೀಸ್ ಠಾಣೆಗೆ ಚಪ್ಪಲಿ ಸವೆಯುವಂತೆ ತಿರುಗಿದ್ದೇನೆ. ಆದರೆ ನನ್ನನ್ನು ಪೊಲೀಸರು ಅಲೆದಾಡಿಸುತ್ತಿದ್ದಾರೆಯೇ ಹೊರತು ನನಗೆ ನ್ಯಾಯ ದೊರಕಿಸಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಇನ್ನು 15 ದಿನದಲ್ಲಿ ಈ ಬಗ್ಗೆ ತನಿಖೆ ಮಾಡಿ ವರದಿ ನೀಡಬೇಕು ಎಂದು ಸಂಬಂಧಿಸಿದ ಪೊಲೀಸ್ ಠಾಣೆಗೆ ಸೂಚನೆ ನೀಡುವಂತೆ ಮೈಸೂರು ಎಸ್ಪಿ ವಿಷ್ಣುವರ್ಧನ್ ಅವರಿಗೆ ಡಾ.ಅರ್ಚನಾ ಮಜುಮ್ದಾರ್ ಆದೇಶಿಸಿದರು.

ನಮ್ಮ ಪೊಲೀಸರಿಂದಲೇ ನ್ಯಾಯ ಸಿಕ್ತಿಲ್ಲ: ನಾನು ಪೊಲೀಸ್ ಇಲಾಖೆಯಲ್ಲಿ ಪೇದೆಯಾಗಿ ಕೆಲಸ ಮಾಡುತ್ತಿದ್ದೇನೆ. ಗುತ್ತಿಗೆದಾರನಾಗಿರುವ ನನ್ನ ಪತಿ ನನಗೆ ಕಿರುಕುಳ ನೀಡುತ್ತಿದ್ದಾನೆ. ಈ ಸಂಬಂಧ ಕುಶಾಲನಗರ ಪೊಲೀಸರಿಗೆ ದೂರು ನೀಡಿದ್ದೇನೆ. ಆದರೆ ಪೊಲೀಸ್ ಇಲಾಖೆಯಲ್ಲಿರುವ ನನಗೆ ನಮ್ಮ ಇಲಾಖೆಯಿಂದ ನ್ಯಾಯ ಸಿಕ್ಕಿಲ್ಲ ಎಂದು ಮಹಿಳಾ ಪೊಲೀಸ್ ಪೇದೆಯೊಬ್ಬರು ಅಲವತ್ತುಕೊಂಡರು. ಈ ಬಗ್ಗೆ ಕೂಡ ತನಿಖೆ ಮಾಡಿ ಇವರ ಸಮಸ್ಯೆ ಪರಿಹಾರ ಮಾಡಿ ಎಂದು ಪೊಲೀಸ್ ಅಧಿಕಾರಿಗಳಿಗೆ ಡಾ.ಅರ್ಚನಾ ಮಜುಮ್ದಾರ್ ಸೂಚಿಸಿದರು.

ಭಾವನ ಕಿರುಕುಳ: ನಾನು ಸೇರಿದಂತೆ ನಾಲ್ವರು ಅಕ್ಕ ತಂಗಿಯರಿದ್ದೇವೆ. ನನ್ನ ಭಾವ ನನಗೆ ಲೈಂಗಿಕ ಕಿರುಕುಳ ನೀಡುತ್ತಿದ್ದಾನೆ. ಆತ ಬೇರೆ ಮಹಿಳೆಯ ಜೊತೆ ಅಕ್ರಮ ಸಂಬಂಧ ಹೊಂದಿರುವ ಬಗ್ಗೆ ವಿಡಿಯೋವನ್ನು ನಾನು ನನ್ನ ಅಕ್ಕನಿಗೆ ತಿಳಿಸಿ ಅವನ ನಿಜ ಮುಖವಾಡ ಕಳಚಿದೆ. ಆದರೆ ನನ್ನ ಅಕ್ಕನಿಗೆ ತಪ್ಪು ಕಲ್ಪನೆ ಬರುವಂತೆ ನನ್ನ ವಿರುದ್ಧವೇ ಎತ್ತಿ ಕಟ್ಟಿರುವ ನನ್ನ ಭಾವ ಸೈಬರ್ ಪೊಲೀಸ್ ಸ್ಟೇಷನ್‌ನಲ್ಲಿ ನನ್ನ ವಿರುದ್ಧವೇ ದೂರು ನೀಡಿದ್ದಾನೆ. ನಮಗೆ ಬರಬೇಕಿರುವ ಆಸ್ತಿ ಲಪಟಾಯಿಸಲು ಹೀಗೆಲ್ಲಾ ಮಾಡುತ್ತಿದ್ದಾನೆ ಎಂದು ಮಹಿಳೆಯೊಬ್ಬರು ದೂರಿದರು.

ನಿಮಗೆ ಲೈಂಗಿಕ ಕಿರುಕುಳ ನೀಡಿರುವ ಬಗ್ಗೆ ಪೊಲೀಸರು ಕ್ರಮ ಕೈಗೊಳ್ಳುತ್ತಾರೆ. ಆದರೆ ಆಸ್ತಿ ವಿವಾದವನ್ನು ನೀವು ನ್ಯಾಯಾಲಯದಲ್ಲೇ ಪರಿಹಾರ ಮಾಡಿಕೊಳ್ಳಿ ಎಂದು ಡಾ.ಅರ್ಚನಾ ಮಜುಮ್ದಾರ್ ಸಲಹೆ ನೀಡಿದರು.

ನನ್ನ ಜೀವನ ಕಷ್ಟವಾಗಿದೆ: ನಾನು 2021 ರಲ್ಲಿ ಮದುವೆ ಆಗಿದ್ದೇನೆ. ನನಗೂ ನನ್ನ ಗಂಡನಿಗೂ ಹೊಂದಾಣಿಕೆ ಇಲ್ಲ. ಇದು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ. ನನ್ನ ಪತಿ ಜೀವನ ನಿರ್ವಹಣೆಗೆ ಹಣ ನೀಡುತ್ತಿಲ್ಲ. ಇದರಿಂದ ಆರ್ಥಿಕ ಸಂಕಷ್ಟದಲ್ಲಿರುವ ನಾನು ವಕೀಲರಿಗೂ ಹಣ ನೀಡದ ಪರಿಸ್ಥಿತಿ ಎದುರಿಸುತ್ತಿದ್ದೇನೆ. ನನಗೆ ನ್ಯಾಯ ಕೊಡಿಸಿ ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಡಾ.ಅರ್ಚನಾ ಮಜುಮ್ದಾರ್ ಅವರು, ನಿಮ್ಮ ಪರವಾಗಿ ವಾದ ಮಾಡಲು ಆಯೋಗದ ವತಿಯಿಂದ ವಕೀಲರನ್ನು ನೇಮಕ ಮಾಡಲಾಗುವುದು. ಉಚಿತವಾಗಿ ಅವರು ಕಾನೂನು ಸೇವೆ ನೀಡುವರು ಎಂದು ಆಶ್ವಾಸನೆ ನೀಡಿದರು.

ನನಗೆ ಬಡ್ತಿ ಕೊಡುತ್ತಿಲ್ಲ: ನಾನು ಅಂಗನವಾಡಿ ಮಹಿಳಾ ಸಹಾಯಕಿಯಾಗಿ ಮೈಸೂರಿನ ಅಶೋಕಪುರಂನಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಎಸ್‌ಎಸ್‌ಎಲ್‌ಸಿ ಓದಿದ್ದು, ಅಂಗನವಾಡಿ ಕಾರ್ಯಕರ್ತೆಯಾಗಿ ಬಡ್ತಿ ನೀಡದೆ ಸತಾಯಿಸುತ್ತಿದ್ದಾರೆ ಎಂದು ಆರೋಪಿಸಿದರು. ಇದಕ್ಕೆ ಸಂಬಂಧಿಸಿದ ಕಡತವನ್ನು ನನ್ನ ಬಳಿ ತನ್ನಿ, ಪರಿಶೀಲಿಸಿ ನಿಮಗೆ ಅಂಗನವಾಡಿ ಕಾರ್ಯಕರ್ತೆಯ ಹುದ್ದೆಗೆ ಅರ್ಹತೆ ಇದ್ದರೆ ಕೊಡಿಸುತ್ತೇನೆ ಎಂದು ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ ಭರವಸೆ ನೀಡಿದರು.

ರೈಲ್ವೆ ನಿಲ್ದಾಣದ ಎಸ್ಕಲೇಟರ್ ತಾಂತ್ರಿಕ ದೋಷ; ರೈಲ್ವೆ ಇಲಾಖೆ ಸ್ಪಷ್ಟನೆ

ಮೈಸೂರು, ಏ.29(ಬಿಎಲ್‌ಯು)– ಮೈಸೂರು ರೈಲ್ವೆ ನಿಲ್ದಾಣದ ಎಸ್ಕಲೇಟರ್‌ನ ತಾಂತ್ರಿಕ ದೋಷದ ಬಗ್ಗೆ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಪ್ರಕಟವಾದ ವರದಿಗೆ ಸಂಬಂಧಿಸಿದಂತೆ ನೈರುತ್ಯ ರೈಲ್ವೆಯ ಮೈಸೂರು ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಗಿರೀಶ್ ಧರ್ಮರಾಜ್ ಕಲಗೊಂಡ ಸ್ಪಷ್ಟನೆ ನೀಡಿದ್ದಾರೆ.



ಪ್ರಯಾಣಿಕರು ಭಯ ಅಥವಾ ಗಾಬರಿಯಿಂದ ತುರ್ತು ನಿಲುಗಡೆ ಗುಂಡಿಯನ್ನು ಒತ್ತುವುದರಿಂದ ಎಸ್ಕಲೇಟರ್ ಸೇವೆಗೆ ಆಗಾಗ ಅಡಚಣೆಯಾಗುತ್ತದೆ ಎಂದು ಹೇಳಿದ್ದಾರೆ. ಎಸ್ಕಲೇಟರ್‌ಗಳಲ್ಲಿ ಯಾವುದೇ ಮೀಸಲಾದ ಸಿಬ್ಬಂದಿ ಇಲ್ಲದಿರುವ ಹಿನ್ನೆಲೆಯಲ್ಲಿ ಮರು ಚಾಲನೆಗೊಳಿಸಲು ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ ಎಂದಿದ್ದಾರೆ. ಎಸ್ಕಲೇಟರ್ ಮರು ಚಾಲನೆಗೊಳಿಸಲು ಪ್ರವೇಶದ್ವಾರದಲ್ಲಿರುವ ಆರ್‌ಪಿಎಫ್ ಸಿಬ್ಬಂದಿಗೆ ಕೀ ಸೆಟ್‌ಗಳನ್ನು ನೀಡಲಾಗಿದೆ. ಜೊತೆಗೆ ಎಸ್ಕಲೇಟರ್ ಮರು ಚಾಲನೆಗೊಳಿಸಲು ಹಾಗೂ ತ್ವರಿತ ನಿರ್ವಹಣೆಗೆ ತರಬೇತಿ ಕೂಡ ನೀಡಲಾಗಿದೆ ಎಂದು ಸ್ಪಷ್ಟನೆ ನೀಡಿದ್ದಾರೆ.

ಏಕಲವ್ಯ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷರ ಆಯ್ಕೆ



ಏಕಲವ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ಆಡಳಿತ ಮಂಡಳಿ ನೂತನ ಅಧ್ಯಕ್ಷ ದ್ಯಾವಪ್ಪನಾಯಕ, ಉಪಾಧ್ಯಕ್ಷ ಪ್ರಭಾಕರ ಹುಣಸೂರು, ನಿರ್ದೇಶಕರಾದ ರಾಜು ಮಾರ್ಕೆಟ್, ಸತ್ಯನಾರಾಯಣ, ಸುರೇಶ್ ಎಂ. ಅವರನ್ನು ಮೈಸೂರು ವಿಶ್ವವಿದ್ಯಾನಿಲಯದ ಎಸ್.ಪ್ರಸಾದ್, ನಾಗೇಂದ್ರ ಮತ್ತಿತರರು ಅಭಿನಂದಿಸಿದರು.

ಭಾರತದ ಸೈಬರ್ ಸಾರ್ವಭೌಮತ್ವದ ಮೇಲೆ ಪಾಕಿಸ್ತಾನದಿಂದ ವಿಫಲ ಯತ್ನ



ನವದೆಹಲಿ: ಪಾಕಿಸ್ತಾನ, ಭಾರತೀಯ ಸೈಬರ್ ಸಾರ್ವಭೌಮತ್ವವನ್ನು ಉಲ್ಲಂಘಿಸುವ ಪ್ರಯತ್ನಗಳಲ್ಲಿ ಮತ್ತೊಮ್ಮೆ ವಿಫಲ ಯತ್ನ ನಡೆಸಿದೆ. ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ಅವರ ಗುರುತುಗಳು ಸ್ಪಷ್ಟವಾಗಿರುವುದರೊಂದಿಗೆ, ಪಾಕಿಸ್ತಾನಿ ಪಡೆಗಳು ಪ್ರತಿದಿನ ಎಲ್‌ಒಸಿಯಲ್ಲಿ ಕದನ ವಿರಾಮವನ್ನು ಉಲ್ಲಂಘಿಸುತ್ತಿವೆ.

ಈಗ, ಮಿಷನ್–ನಿರ್ಣಾಯಕ ರಾಷ್ಟ್ರೀಯ ನೆಟ್‌ವರ್ಕ್‌ಗಳನ್ನು ಅಭೇದ್ಯವೆಂದು ಕಂಡುಕೊಂಡ ನಂತರ, ಪಾಕಿಸ್ತಾನ ಸಾರ್ವಜನಿಕವಾಗಿ ಪ್ರವೇಶಿಸಬಹುದಾದ ಕ್ಷೇಮ ಮತ್ತು ಶೈಕ್ಷಣಿಕ ವೆಬ್‌ಸೈಟ್‌ಗಳ ಕಡೆಗೆ ತನ್ನ ಪ್ರಯತ್ನಗಳನ್ನು ಮುಂದುವರೆಸಿದೆ. ಐಒಕೆ ಹ್ಯಾಕರ್–ಖಿಲಾಫತ್‌ನ ಇಂಟರ್ನೆಟ್ ಎಂಬ ಹೆಸರಿನಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪಾಕ್‌ನ ಈ ಗುಂಪು ಪುಟಗಳನ್ನು ವಿರೂಪಗೊಳಿಸಲು, ಆನ್‌ಲೈನ್ ಸೇವೆಗಳನ್ನು ಅಡ್ಡಿಪಡಿಸಲು ಮತ್ತು ವೈಯಕ್ತಿಕ ಮಾಹಿತಿಯನ್ನು ಸಂಗ್ರಹಿಸಲು ಪ್ರಯತ್ನಿಸಿದೆ.

ಭಾರತದ ಲೇಯರ್ಡ್ ಸೈಬರ್ ಸೆಕ್ಯುರಿಟಿ ಆರ್ಕಿಟೆಕ್ಚರ್ ನೈಜ ಸಮಯದಲ್ಲಿ ಒಳನುಗ್ಗುವಿಕೆಗಳನ್ನು ಪತ್ತೆಹಚ್ಚಿದೆ ಮತ್ತು ಅವುಗಳ ಮೂಲ ಪಾಕಿಸ್ತಾನ ಎಂಬುದನ್ನು ತ್ವರಿತವಾಗಿ ಪತ್ತೆಹಚ್ಚಿದೆ. ಗುಪ್ತಚರ ಮೌಲ್ಯಮಾಪನಗಳು ನಾಲ್ಕು ಸಂಬಂಧಿತ ಘಟನೆಗಳನ್ನು ದೃಢಪಡಿಸುತ್ತವೆ ಎಂದು ಮೂಲಗಳು ಹೇಳುತ್ತವೆ.

ಮಕ್ಕಳ ಫೇವರೆಟ್ ಡೋನಟ್‌ಗಳಲ್ಲಿ ಅತಿಯಾದ ಕೃತಕ ಬಣ್ಣಗಳ ಬಳಕೆ

ಬೆಂಗಳೂರು,ಏ.29–ಮಕ್ಕಳು ಹೆಚ್ಚಾಗಿ ಇಷ್ಟಪಡುವ ಜನಪ್ರಿಯ ತಿಂಡಿ ಡೋನಟ್‌ಗಳನ್ನು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ (FDA) 'ಸೇವನೆಗೆ ಅಸುರಕ್ಷಿತ' ಎಂದು ಘೋಷಿಸಿದೆ.

ಡೋನಟ್‌ಗಳಲ್ಲಿ ಅತಿಯಾದ ಕೃತಕ ಬಣ್ಣಗಳನ್ನು ಬಳಕೆ ಮಾಡಲಾಗುತ್ತಿದ್ದು, ಇದು ಅನುಮೋದಿತ ಸುರಕ್ಷತಾ ಮಿತಿಗಳನ್ನು ಮೀರಿದೆ. ಇದರಿಂದ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ತಿಳಿಸಲಾಗಿದೆ. ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಐಪಿಎಲ್ ಪಂದ್ಯಗಳ ವೇಳೆ ಆಹಾರ ಮಾದರಿಗಳನ್ನು ಸಂಗ್ರಹಿಸಲಾಗಿದ್ದು, ಪರಿಶೀಲನೆ ವೇಳೆ ಡೋನಟ್‌ಗಳಲ್ಲಿ ಅತಿಯಾದ ಕೃತಕ ಬಣ್ಣ ಬಳಕೆ ಮಾಡಿರುವುದು ಪತ್ತೆಯಾಗಿದೆ.

ಚಿನ್ನಸ್ವಾಮಿ ಕ್ರೀಡಾಂಗಣದೊಳಗೆ ಕಾರ್ಯನಿರ್ವಹಿಸುತ್ತಿರುವ ಒಟ್ಟು 12 ಆಹಾರ ಮಳಿಗೆಗಳ ಆಹಾರ ಮಾದರಿಗಳನ್ನು ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ, ತಪಾಸಣೆಯ ವೇಳೆ ಎರಡು ಪ್ರಮುಖ ಮಳಿಗೆಗಳಿಗೆ ನೋಟಿಸ್ ನೀಡಲಾಗಿದೆ.

ಸೇವನೆಗೆ ಅಸುರಕ್ಷಿತ ಎಂದ ಎಫ್‌ಡಿಎ



ಪ್ಯಾಕೇಜ್ಡ್ ಕುಡಿಯುವ ನೀರಿನ ಕಂಪನಿ ಮತ್ತು ತುಪ್ಪ, ಸಿಹಿತಿಂಡಿಗಳು, ಫಾಸ್ಟ್ ಫುಡ್ ಮತ್ತು ಮಸಾಲೆ ಪುಡಿಗಳಿಗೆ ಹೆಸರುವಾಸಿಯಾದ ಪ್ರಸಿದ್ಧ ಆಹಾರ ಬ್ರ್ಯಾಂಡ್ ಕಂಪನಿಗೆ ನೋಟಿಸ್ ನೀಡಲಾಗಿದೆ ಎಂದು ತಿಳಿದುಬಂದಿದೆ.

ಇತರ ಕೆಲವು ಆಹಾರ ಮಾದರಿಗಳ ಫಲಿತಾಂಶಗಳು ಇನ್ನೂ ಬಾಕಿಯಿದ್ದು, ವರದಿಗಳಿಗಾಗಿ ಕಾಯಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಡೋನಟ್‌ಗಳು ಆಕರ್ಷಕವಾಗಿ ಕಾಣುವಂತೆ ಮಾಡಲು ರೆಡ್ 40 ಅಥವಾ ಅಲ್ಲೂರಾ ರೆಡ್, ಎಲ್ಲೋ 5 ಅಥವಾ ಟಾರ್ಟ್ರಾಜಿನ್‌ನಂತಹ ಬಣ್ಣಗಳನ್ನು ಬಳಕೆ ಮಾಡಲಾಗುತ್ತಿದೆ. ಇವು ಆರೋಗ್ಯಕ್ಕೆ ಹಾನಿಕಾರ ಎಂದು ಎಫ್‌ಡಿಎ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಈ ಬಣ್ಣಗಳನ್ನು ಸಾಮಾನ್ಯವಾಗಿ ನಿಯಂತ್ರಿತ ಪ್ರಮಾಣದಲ್ಲಿ ಸುರಕ್ಷಿತವೆಂದು ಪರಿಗಣಿಸಲಾಗುತ್ತದೆ. ಆದರೆ ಅವುಗಳನ್ನು ಅತಿಯಾಗಿ ಸೇವಿಸುವುದರಿಂದ ಆರೋಗ್ಯದ ಅಪಾಯಗಳನ್ನು ಉಂಟುಮಾಡಬಹುದು, ವಿಶೇಷವಾಗಿ ದೊಡ್ಡ ಪ್ರಮಾಣದಲ್ಲಿ ಸೇವಿಸಿದಾಗ ಚರ್ಮದ ದದ್ದುಗಳು ಮತ್ತು ಊತ ಸೇರಿದಂತೆ ಅಲರ್ಜಿಗಳು ಎದುರಾಗುತ್ತವೆ. ಮಕ್ಕಳಲ್ಲಿ ಹೈಪರ್‌ಆಕ್ಟಿವಿಟಿ ಅಥವಾ ನಡವಳಿಕೆಯ ಸಮಸ್ಯೆಗಳನ್ನು ಉಂಟುಮಾಡುತ್ತವೆ. ದೀರ್ಘಾವಧಿಯಲ್ಲಿ, ಕೆಲವು ಕೃತಕ ಬಣ್ಣಗಳಿಗೆ ಅತಿಯಾಗಿ ಒಡ್ಡಿಕೊಳ್ಳುವುದರಿಂದ ಕ್ಯಾನ್ಸರ್ ಮತ್ತು ಇತರೆ ಆರೋಗ್ಯ ಸಮಸ್ಯೆಗಳು ಎದುರಾಗುತ್ತವೆ ಎಂದು ತಿಳಿಸಿದ್ದಾರೆ.

ಇದಲ್ಲದೆ, ಹೆಚ್ಚಿನ ಸಕ್ಕರೆ ಹೊಂದಿರುವ ಆಹಾರಗಳು ಮನುಷ್ಯನ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತವೆ. ಹೆಚ್ಚಿನ ಸಕ್ಕರೆ ಅಂಶ ಮತ್ತು ಆಹಾರ ಬಣ್ಣಗಳ ಸಂಯೋಜನೆಯು ಪರಿಣಾಮಗಳನ್ನು ಮತ್ತಷ್ಟು ಹೆಚ್ಚಾಗುವಂತೆ ಮಾಡುತ್ತದೆ ಎಂದು ಹೇಳಿದ್ದಾರೆ.

ಸ್ಪೈವೇರ್ ಬಳಸಿದರೆ ತಪ್ಪಿಲ್ಲ! ಯಾರ ವಿರುದ್ಧ ಬಳಸಲಾಗುತ್ತಿದೆ ಎಂಬುದು ಮುಖ್ಯ

ನವದೆಹಲಿ, ಏ.29– ಭಯೋತ್ಪಾದಕರ ವಿರುದ್ಧ ಸ್ಪೈವೇರ್ ಬಳಸುವುದರಲ್ಲಿ ತಪ್ಪೇನಿದೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಆಶ್ಚರ್ಯ ವ್ಯಕ್ತಪಡಿಸಿದ್ದು, ದೇಶದ ಭದ್ರತೆ ಮತ್ತು ಏಕತೆಗೆ ಧಕ್ಕೆ ತರುವಂತಹ ಯಾವುದೇ ಘಟನೆಗಳನ್ನು ಬಹಿರಂಗ ಮಾಡಬಾರದು ಎಂದು ಹೇಳಿದೆ.

ಗೌಪ್ಯತೆ ಉಲ್ಲಂಘನೆಯ ವೈಯಕ್ತಿಕ ಆತಂಕಗಳನ್ನು ಪರಿಹರಿಸಬಹುದು. ಆದರೆ ತಾಂತ್ರಿಕ ಸಮಿತಿ ವರದಿಯು ಬೀದಿಯಲ್ಲಿ ಚರ್ಚಿಸುವಂತಹ ಯಾವುದೇ ದಾಖಲೆ ಅಲ್ಲ ಎಂದು ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಎನ್. ಕೋಟೀಶ್ವರ್ ಸಿಂಗ್ ಅವರನ್ನೊಳಗೊಂಡ ನ್ಯಾಯಪೀಠ ಹೇಳಿತು.

ಅರ್ಜಿದಾರರೊಬ್ಬರ ಪರ ವಾದ ಮಂಡಿಸಿದ ವಕೀಲ ದಿನೇಶ್ ದ್ವಿವೇದಿ, ಕೇಂದ್ರ ಸರ್ಕಾರ ಸ್ಪೈವೇರ್‌ನ್ನು ಬಳಸುತ್ತಿದೆ ಎಂಬ ಪ್ರಶ್ನೆ ಎದುರಾಗಿದೆ. ಒಂದು ವೇಳೆ ಹೊಂದಿದ್ದರೆ, ಇಂದಿಗೂ ಅದನ್ನು ನಿರಂತರವಾಗಿ ಬಳಕೆಯಿಂದ ತಡೆಯಲು ಏನೂ ಇಲ್ಲ ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ದಯವಿಟ್ಟು ವ್ಯಕ್ತಿಗಳಿಗೆ ಸಂಬಂಧಿಸಿದ ಮಾಹಿತಿಗೆ ಸಂಬಂಧಿಸಿದಂತೆ ವಾದಿಸಿ, ಇಂದಿನ ದಿನಗಳಲ್ಲಿ ಇಂತಹ ಸನ್ನಿವೇಶವನ್ನು ನಾವು ಎದುರಿಸುತ್ತಿದ್ದೇವೆ. ನಾವು ಸ್ವಲ್ಪ ಜವಾಬ್ದಾರರಾಗಿರೋಣ... ವರದಿಯನ್ನು ಹೇಗೆ ಹಂಚಿಕೊಳ್ಳಬಹುದು ಎಂಬುದನ್ನು ನಾವು ನೋಡುತ್ತೇವೆ ಎಂದು ಹೇಳಿತು.



ದೇಶವು ಭಯೋತ್ಪಾದಕರ ವಿರುದ್ಧ ಸ್ಪೈವೇರ್ ಬಳಸುತ್ತಿದ್ದರೆ ತಪ್ಪೇನು? ಸ್ಪೈವೇರ್ ಹೊಂದಿರುವುದು ತಪ್ಪಲ್ಲ, ನೀವು ಯಾರ ವಿರುದ್ಧ ಬಳಸುತ್ತೀರಿ ಎಂಬುದು ಪ್ರಶ್ನೆ. ನೀವು ರಾಷ್ಟ್ರದ ಭದ್ರತೆಯೊಂದಿಗೆ ರಾಜಿ ಮಾಡಿಕೊಳ್ಳಲು ಸಾಧ್ಯವಿಲ್ಲ. ಗೌಪ್ಯತೆ ಹಕ್ಕನ್ನು ಹೊಂದಿರುವ ಖಾಸಗಿ ನಾಗರಿಕರಿಗೆ ಸಂವಿಧಾನದ ಅಡಿಯಲ್ಲಿ ರಕ್ಷಣೆ ನೀಡಲಾಗುತ್ತದೆ ಎಂದು ಪೀಠ ಹೇಳಿತು.

ಪತ್ರಕರ್ತ ಪರಂಜೋಯ್ ಗುಹಾ ಠಾಕುರ್ತಾ ಪರ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್ ಅವರು, ಯುಎಸ್ ಜಿಲ್ಲಾ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸಿದರು. WhatsApp ಸ್ವತಃ ಇಲ್ಲಿ ಬಹಿರಂಗಪಡಿಸಿದೆ. ಮೂರನೇ ವ್ಯಕ್ತಿ ಅಲ್ಲ. WhatsApp ಸ್ವತಃ ಹ್ಯಾಕ್ ಆಗಿದೆ ಎಂದು ಬಹಿರಂಗಪಡಿಸಿದೆ. ಹ್ಯಾಕಿಂಗ್ ಆಗಿದೆ ಎಂದು ಯಾರೂ ಹೇಳಿಲ್ಲ. ತಜ್ಞರು ಕೂಡ ಹಾಗೆ ಹೇಳಲಿಲ್ಲ ಎಂದರು. ಈಗ ನಿಮ್ಮ ಬಳಿ ಸಾಕ್ಷ್ಯವಿದೆ. WhatsApp ಮೂಲಕ ಸಾಕ್ಷ್ಯವಿದೆ. ನಾವು ತೀರ್ಪನ್ನು ಪ್ರಸಾರ ಮಾಡುತ್ತೇವೆ. ತಿದ್ದುಪಡಿ ಮಾಡಿದ ಭಾಗವನ್ನು ಸಂಬಂಧಪಟ್ಟವರಿಗೆ ನೀಡಬೇಕು ಎಂದು ಸಿಬಲ್ ಹೇಳಿದರು.

ಭಯೋತ್ಪಾದಕರ ವಿರುದ್ಧ ಸ್ಪೈವೇರ್ ಬಳಸುವುದರಲ್ಲಿ ಯಾವುದೇ ತಪ್ಪಿಲ್ಲ ಮತ್ತು ಅವರು ಖಾಸಗಿತನದ ಹಕ್ಕನ್ನು ಹೊಂದಿರುವುದಿಲ್ಲ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು. ಅರ್ಜಿದಾರರೊಬ್ಬರ ವಾದ ಮಂಡಿಸಿದ ಪರ ಹಿರಿಯ ವಕೀಲ ಶ್ಯಾಮ್ ದಿವಾನ್ ಅವರು, ತಾಂತ್ರಿಕ ಸಮಿತಿ ವರದಿಯನ್ನು ಯಾವುದೇ ತಿದ್ದುಪಡಿ ಮಾಡದೆ ಬಹಿರಂಗಪಡಿಸಬೇಕು ಎಂದು ಒತ್ತಾಯಿಸಿದರು. ನಂತರ ಸುಪ್ರೀಂಕೋರ್ಟ್ ವಿಚಾರಣೆಯನ್ನು ಜುಲೈ 30ಕ್ಕೆ ಮುಂದೂಡಿತು.

ಉಗ್ರರ ಸ್ಲೀಪರ್ ಸೆಲ್ ಮತ್ತೆ ಆಕ್ಟಿವ್; ಮತ್ತಷ್ಟು ದಾಳಿ ಸಾಧ್ಯತೆ

ಕಾಶ್ಮೀರದ 48 ಪ್ರವಾಸಿತಾಣಗಳು ಬಂದ್!

ಶ್ರೀನಗರ: ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಉಗ್ರರ ದಾಳಿ ಬೆನ್ನಲ್ಲೇ ಉಗ್ರರಿಗಾಗಿ ಭಾರತೀಯ ಸೇನಾಪಡೆ ತೀವ್ರ ಶೋಧ ನಡೆಸುತ್ತಿದ್ದು, ಇದರ ಬೆನ್ನಲ್ಲೇ ಮತ್ತಷ್ಟು ಭಯೋತ್ಪಾದಕ ದಾಳಿ ನಡೆಯುವ ಸಾಧ್ಯತೆಗಳಿವೆ ಎಂದು ಗುಪ್ತಚರ ದಳಗಳು ಎಚ್ಚರಿಕೆ ನೀಡಿವೆ.



ಗುಪ್ತಚರ ದಳಗಳ ಎಚ್ಚರಿಕೆ ಹಿನ್ನೆಲೆಯಲ್ಲಿ ಕಾಶ್ಮೀರದ 48 ಪ್ರವಾಸಿತಾಣಗಳನ್ನು ಬಂದ್ ಮಾಡಲಾಗಿದೆ ಎಂದು ವರದಿಗಳಿಂದ ತಿಳಿದುಬಂದಿದೆ. ಪಹಲ್ಗಾಮ್ ದಾಳಿಯ ನಂತರ ಕಣಿವೆ ಪ್ರದೇಶದಲ್ಲಿ ಉಗ್ರರ ಸ್ಲೀಪರ್ ಸೆಲ್ ಸಕ್ರಿಯವಾಗಿದ್ದು, ಮತ್ತಷ್ಟು ದಾಳಿಗೆ ಸಂಚು ರೂಪಿಸಿವೆ. ಈ ನಿಟ್ಟಿನಲ್ಲಿ ಕಾರ್ಯಾಚರಣೆ ತೀವ್ರಗೊಳಿಸುವಂತೆ ಗುಪ್ತಚರ ದಳಗಳು ಮಾಹಿತಿ ನೀಡಿವೆ ಎಂದು ವರದಿಗಳು ತಿಳಿಸಿವೆ. ಮೂಲಗಳ ಪ್ರಕಾರ, ಭಯೋತ್ಪಾದಕ ಸಂಘಟನೆಗಳು ಮುಂಬರುವ ದಿನಗಳಲ್ಲಿ ಭದ್ರತಾ ಪಡೆ ಮತ್ತು ಸ್ಥಳೀಯರಲ್ಲದ ನಿವಾಸಿಗಳ ಮೇಲೆ ದಾಳಿ ನಡೆಸಲು ಸಂಚು ರೂಪಿಸಿವೆ ಎಂದು ತಿಳಿದುಬಂದಿದೆ. ಸ್ಥಳೀಯರು, ಸಿಐಡಿ ಅಧಿಕಾರಿಗಳು, ಕಾಶ್ಮೀರಿ ಪಂಡಿತರು, ಭದ್ರತಾ ಪಡೆಗಳ ಮೇಲೆ ದಾಳಿ ನಡೆಸಲು ಪಾಕಿಸ್ತಾನದ ಐಎಸ್‌ಐ ಸಂಚು ರೂಪಿಸಿರುವುದಾಗಿ ಗುಪ್ತಚರ ದಳ ಮುನ್ನೆಚ್ಚರಿಕೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಸತ್ಯವನ್ನೇ ಹೇಳುವ ಕರ್ನಾಟಕದ ಕೆಚ್ಚೆದೆಯ ನಾಯಕ ಸಿದ್ದರಾಮಯ್ಯ

ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ರಹ್ಮಣ್ಯ ಬಣ್ಣನೆ

ಮೈಸೂರು, ಏ.29– ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ಕೃತ್ಯಕ್ಕೆ ಕೇಂದ್ರದ ವೈಫಲ್ಯವೇ ಕಾರಣ ಎಂದು ಹೇಳುವ ಮನಸ್ಥಿತಿ ರಾಜ್ಯದ ಯಾವ ರಾಜಕಾರಣಿಗಳಿಗೂ ಇಲ್ಲ. ಸತ್ಯ ತಿಳಿದೂ ತಿಳಿಯದಂತೆ ಇರುವುದು ಮುಖ್ಯಮಂತ್ರಿ ಸಿದ್ದರಾಮಯ್ಯರ ಮನಸ್ಥಿತಿಯೂ ಅಲ್ಲ. ಸತ್ಯವನ್ನೇ ಹೇಳುವ ಕರ್ನಾಟಕದ ಕೆಚ್ಚೆದೆಯ ಗಂಡು ಸಿದ್ದರಾಮಯ್ಯ ಎಂದು ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ರಹ್ಮಣ್ಯ ಹೇಳಿದ್ದಾರೆ.



ಸುಬ್ರಹ್ಮಣ್ಯ


ಸಿದ್ದರಾಮಯ್ಯ ವಿರುದ್ಧ ಬಿಜೆಪಿಯ ಟೀಕೆಗಳಿಗೆ ತಿರುಗೇಟು ನೀಡಿದ ಅವರು, ಉಗ್ರರ ದಾಳಿಗೆ ಕೇಂದ್ರದ ವೈಫಲ್ಯವೇ ಕಾರಣ ಎಂದು ಹೇಳಿದ ಸಿದ್ದರಾಮಯ್ಯನವರು, ಸರ್ವಪಕ್ಷ ಸಭೆಯಲ್ಲಿ ಖುದ್ದು ಕೇಂದ್ರ ಸರ್ಕಾರವೇ ಭದ್ರತಾ ವೈಫಲ್ಯವನ್ನ ಒಪ್ಪಿಕೊಂಡಿದೆ. ಆದರೆ ಇಲ್ಲಿನ ಬಿಜೆಪಿ ನಾಯಕರಿಗೆ ಅದರ ಅರಿವೂ ಇಲ್ಲದಂತೆ ಮಾತನಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಪಾಕಿಸ್ತಾನದ ವಿರುದ್ಧ ಯುದ್ಧ ಬೇಡವೇ ಬೇಡ ಎಂದು ಸಿದ್ದರಾಮಯ್ಯ ಹೇಳಿಲ್ಲ. ಯುದ್ಧವೇ ಮೊದಲ ಆಯ್ಕೆಯಲ್ಲ. ಅನಿವಾರ್ಯತೆ ಬಂದರೆ ಪಾಕ್ ಹುಟ್ಟಡಗಿಸಲು ಯುದ್ಧ ಮಾಡಲೇಬೇಕು ಎಂದು ಹೇಳಿದ್ದಾರೆ. ಆದರೆ ಬಿಜೆಪಿ ನಾಯಕರು ಸಿಎಂ ಹೇಳಿಕೆಯನ್ನು ತಿರುಚಿ, ಕೋಮು ಸೌಹಾರ್ದತೆಗೆ ಧಕ್ಕೆ ತರುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಬಿಜೆಪಿ ಜನಾಕ್ರೋಶ ಯಾತ್ರೆ ನಡೆಸಿದಾಗ ಒಂದು ಸಾವಿರ ಜನರನ್ನು ಸೇರಿಸುವುದಕ್ಕೇ ಆಗಲಿಲ್ಲ. ಇದನ್ನ ಯತ್ನಾಳ್ ಕೂಡ ಲೇವಡಿ ಮಾಡಿದ್ದರು. ಆದರೆ ಬೆಳಗಾವಿಯಲ್ಲಿ ಕೇಂದ್ರದ ನಿರಂತರ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ ನಡೆಸುವಾಗ ಸಿಎಂಗೆ ಬೆಂಬಲವಾಗಿ ಸಾವಿರಾರು ಜನ ಬಂದಿದ್ದರು. ಈ ವೇಳೆ ಬಿಜೆಪಿಯವರು ಕಪ್ಪು ಪಟ್ಟಿ ಪ್ರದರ್ಶಿಸಿದ್ದಾರೆ. ಇದು ಹೊಟ್ಟೆಕಿಚ್ಚಿನಿಂದ ಮಾಡಿರುವ ಕೆಲಸ. ಮಾತಿಗೆ ಮುಂಚೆ ಸಿದ್ದರಾಮಯ್ಯರನ್ನ ಒಂದು ಸಮುದಾಯಕ್ಕೆ ಸೀಮಿತಗೊಳಿಸಿ ಟೀಕೆ ಮಾಡುತ್ತಾರೆ. ಸಿದ್ದರಾಮಯ್ಯ ಸರ್ವಧರ್ಮಗಳನ್ನು ಸಮಾನವಾಗಿ ಗೌರವಿಸುವ ನಾಯಕ. ಇದು ರಾಜಕೀಯ ವಿರೋಧಿಗಳಿಗೆ ಸಹಿಸಲಾಗದೇ, ಕೋಮು ದ್ವೇಷದ ಬಣ್ಣ ಹಚ್ಚುತ್ತಿದ್ದಾರೆ ಎಂದು ಸುಬ್ರಹ್ಮಣ್ಯ ವಾಗ್ದಾಳಿ ನಡೆಸಿದರು.

ದೇಶ - ವಿದೇಶ


ಅಮೆರಿಕದೊಂದಿಗೆ ನಮ್ಮ ಹಳೆಯ ಸಂಬಂಧ ಮುಗಿದಿದೆ



ಕೆನಡಾ: ಕೆನಡಾದ ನೂತನ ಪ್ರಧಾನಿ ಮಾರ್ಕ್ ಕಾರ್ನಿ, ಯುನೈಟೆಡ್ ಸ್ಟೇಟ್ಸ್‌ನೊಂದಿಗಿನ ನಮ್ಮ ದೇಶದ ಹಳೆಯ ಸಂಬಂಧ ಮುಗಿದಿದೆ ಎಂದು ಹೇಳಿದ್ದಾರೆ. ಇವು ದುರಂತಗಳು, ಆದರೆ ಇದು ನಮ್ಮ ಹೊಸ ವಾಸ್ತವವೂ ಆಗಿದೆ. ನಾವು ಅಮೆರಿಕದ ದ್ರೋಹದ ಆಘಾತದಿಂದ ಹೊರಬಂದಿದ್ದೇವೆ, ಆದರೆ ಅದರ ಪಾಠಗಳನ್ನು ನಾವು ಎಂದಿಗೂ ಮರೆಯಬಾರದು. ನಮ್ಮನ್ನು ನಾವು ನೋಡಿಕೊಳ್ಳಬೇಕು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ನಾವು ಪರಸ್ಪರ ಕಾಳಜಿ ವಹಿಸಬೇಕು ಎಂದು ಹೇಳಿದ್ದಾರೆ.

ನಾವು ಈ ವ್ಯಾಪಾರ ಯುದ್ಧವನ್ನು ಗೆಲ್ಲುತ್ತೇವೆ ಎಂದು ಕಾರ್ನಿ ಒಟ್ಟಾವಾದಲ್ಲಿ ವಿಜಯೋತ್ಸವ ಭಾಷಣದಲ್ಲಿ ಬೆಂಬಲಿಗರಿಗೆ ಹೇಳಿದರು. ಟ್ರಂಪ್‌ರ ಸುಂಕ ಸಮರ ಮತ್ತು ಸ್ವಾಧೀನ ಬೆದರಿಕೆಗಳಿಂದ ಬರುವ ಸವಾಲಿನ ದಿನಗಳ ಬಗ್ಗೆ ಎಚ್ಚರಿಕೆ ನೀಡಿದರು. ವಾಷಿಂಗ್ಟನ್‌ನ ಬೆದರಿಕೆಗಳ ಹಿನ್ನೆಲೆಯಲ್ಲಿ ಕೆನಡಾದ ಏಕತೆಯ ಮಹತ್ವವನ್ನು ಕಾರ್ನಿ ಒತ್ತಿ ಹೇಳಿದರು. ಅಧ್ಯಕ್ಷ ಟ್ರಂಪ್ ಅಮೆರಿಕದೊಂದಿಗೆ ನಮ್ಮನ್ನು ವಿಲೀನಗೊಳಿಸಿಕೊಳ್ಳಲು ಅಥವಾ ನಮ್ಮನ್ನು ಮುರಿಯಲು ಪ್ರಯತ್ನಿಸುತ್ತಿದ್ದಾರೆ. ಅದು ಎಂದಿಗೂ ಸಂಭವಿಸುವುದಿಲ್ಲ ಎಂದು ಅವರು ಪ್ರತಿಪಾದಿಸಿದ್ದಾರೆ.

ಭಾರತದಲ್ಲಿ ಪಾಕ್ ರಕ್ಷಣಾ ಸಚಿವರ 'ಎಕ್ಸ್' ಖಾತೆಗೆ ನಿರ್ಬಂಧ




ನವದೆಹಲಿ: 28 ಪ್ರವಾಸಿಗರನ್ನು ಬಲಿ ಪಡೆದ ಪಹಲ್ಗಾಮ್ ಉಗ್ರ ದಾಳಿಯ ಕೆಲವು ದಿನಗಳ ನಂತರ ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಅವರ ಎಕ್ಸ್ ಖಾತೆಯನ್ನು ಭಾರತದಲ್ಲಿ ನಿರ್ಬಂಧಿಸಲಾಗಿದೆ.

ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರ ದಾಳಿಯ ಹಿನ್ನೆಲೆಯಲ್ಲಿ ಭಾರತ ಮತ್ತು ಅದರ ಸೇನೆ ಹಾಗು ಭದ್ರತಾ ಸಂಸ್ಥೆಗಳ ವಿರುದ್ಧ ಪ್ರಚೋದನಕಾರಿ ಮತ್ತು ಕೋಮು ಸೂಕ್ಷ್ಮ ವಿಷಯ ಹಾಗೂ ತಪ್ಪು ಮಾಹಿತಿ ಹರಡಿದ್ದಕ್ಕಾಗಿ ಸೋಮವಾರ ಕೇಂದ್ರ ಸರ್ಕಾರ 16 ಪಾಕಿಸ್ತಾನಿ ಯೂಟ್ಯೂಬ್ ಚಾನೆಲ್‌ಗಳನ್ನು ನಿಷೇಧಿಸಿತ್ತು. ಇಂದು ಪಾಕ್ ರಕ್ಷಣಾ ಸಚಿವರ ಎಕ್ಸ್ ಖಾತೆಯನ್ನು ನಿರ್ಬಂಧಿಸಲಾಗಿದೆ. ಕಳೆದ ವಾರ ಪಾಕಿಸ್ತಾನದ ರಕ್ಷಣಾ ಸಚಿವರು ವೈರಲ್ ಆಗಿರುವ ವಿಡಿಯೋ ಕ್ಲಿಪ್‌ನಲ್ಲಿ ಪಾಕಿಸ್ತಾನ ಉಗ್ರ ಸಂಘಟನೆಗಳಿಗೆ ಬೆಂಬಲ ಮತ್ತು ಹಣಕಾಸು ನೆರವು ನೀಡುತ್ತಿದೆ ಎಂದು ಹೇಳುವ ಮೂಲಕ ತಪ್ಪೊಪ್ಪಿಕೊಂಡಿದ್ದರು. ಪಾಕಿಸ್ತಾನದ ರಕ್ಷಣಾ ಸಚಿವರು ಸ್ಕೈ ನ್ಯೂಸ್‌ನ ಯಾಲ್ಡಾ ಹಕೀಮ್ ಅವರೊಂದಿಗೆ ಮಾತನಾಡುತ್ತಿದ್ದಾಗ, ನಾವು ಕಳೆದ 3 ದಶಕಗಳಿಂದ ಅಮೆರಿಕಕ್ಕಾಗಿ ಈ ಕೊಳಕು ಕೆಲಸ ಮಾಡುತ್ತಿದ್ದೇವೆ. ಅದು ತಪ್ಪು. ನಾವು ಅದರಿಂದ ಸಾಕಷ್ಟು ತೊಂದರೆ ಅನುಭವಿಸಿದ್ದೇವೆ ಎಂದಿದ್ದರು.

ಪಾಕಿಸ್ತಾನಕ್ಕೆ ಭಾರಿ ಹಿನ್ನಡೆ: ಟರ್ಕಿಯಿಂದ ಶಸ್ತ್ರಾಸ್ತ್ರ ಸ್ಥಗಿತ

ಟರ್ಕಿ: ಜಮ್ಮು –ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರ ದಾಳಿ ಬಳಿಕ ಭಾರತ–ಪಾಕಿಸ್ತಾನ ನಡುವಿನ ಸಂಬಂಧ ಮತ್ತಷ್ಟು ಹಳಸಿದ್ದು, ಈ ನಡುವೆ ಯುದ್ಧೋತ್ಸಾಹ ತೋರುತ್ತಿರುವ ಪಾಕಿಸ್ತಾನಕ್ಕೆ ಭಾರಿ ಹಿನ್ನಡೆಯುಂಟಾಗಿದೆ. ಭಾರತದೊಂದಿಗಿನ ಯುದ್ಧದ ಭೀತಿ ನಡುವೆಯೇ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡುವುದಿಲ್ಲ ಎಂದು ಟರ್ಕಿ ಹೇಳಿದೆ. ಟರ್ಕಿಯಲ್ಲಿ ಭೂಕಂಪ ಸಂಭವಿಸಿದ ಸಂದರ್ಭದಲ್ಲಿ ಭಾರತವು ಸಾಕಷ್ಟು ಸಹಾಯ ಮಾಡಿತ್ತು. ಆದರೆ, ಭಾರತದ ರಕ್ತ ಹರಿಸಲು ಟರ್ಕಿಯು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಕಳುಹಿಸಿದೆ ಎನ್ನುವ ವಿಚಾರ ಎಲ್ಲೆಡೆ ಹರಿದಾಡಿತ್ತು. ಶಸ್ತ್ರಾಸ್ತ್ರಗಳನ್ನು ಹೊತ್ತ ಟರ್ಕಿಶ್ ವಾಯುಪಡೆಯ ಸಿ–130 ಹರ್ಕ್ಯುಲಸ್ ಮಿಲಿಟರಿ ಸಾರಿಗೆ ವಿಮಾನ ಭಾನುವಾರ ಕರಾಚಿಗೆ ಬಂದಿಳಿದಿತ್ತು ಎನ್ನಲಾಗಿತ್ತು, ಆದರೆ, ಈ ಬಗ್ಗೆ ಸ್ಪಷ್ಟನೆ ನೀಡಿರುವ ಟರ್ಕಿ, ನಾವು ಯಾವುದೇ ಶಸ್ತ್ರಾಸ್ತ್ರಗಳನ್ನು ಕಳುಹಿಸಿಲ್ಲ. ಟರ್ಕಿಯಿಂದ ಹೊರಟ ಸರಕು ವಿಮಾನ ಇಂಧನ ತುಂಬಲು ಪಾಕಿಸ್ತಾನದಲ್ಲಿ ಇಳಿದಿತ್ತು. ಯಾವುದೇ ಊಹಾಪೋಹಗಳಿಗೂ ಕಿವಿಗೊಡಬೇಡಿ ಎಂದು ಹೇಳಿದೆ.



ರಾಜಸ್ಥಾನ ಶಿಕ್ಷಣ ಇಲಾಖೆ ವೆಬ್‌ಸೈಟ್ ಹ್ಯಾಕ್; 'ಪಾಕ್ ಸೈಬರ್ ಫೋರ್ಸ್' ಸಂದೇಶ ಪ್ರದರ್ಶನ



ಜೈಪುರ: ರಾಜಸ್ಥಾನ ಶಿಕ್ಷಣ ಇಲಾಖೆ ಅಧಿಕೃತ ಪೋರ್ಟಲ್ ಅನ್ನು ಹ್ಯಾಕ್ ಮಾಡಲಾಗಿದ್ದು, ಪೋರ್ಟಲ್‌ನ ಮುಖಪುಟದಲ್ಲಿ 'ಪಾಕಿಸ್ತಾನ ಸೈಬರ್ ಫೋರ್ಸ್' ಎಂಬ ಹೆಸರಿನಲ್ಲಿ ಪ್ರಚೋದನಕಾರಿ ಸಂದೇಶಗಳ ಸರಣಿಯನ್ನು ಪ್ರದರ್ಶಿಸಲಾಗಿದೆ.

ಒಂದು ಸಂದೇಶವು ಪಹಲ್ಗಾಮ್ ಭಯೋತ್ಪಾದಕ ದಾಳಿಯನ್ನು ಆಂತರಿಕವಾಗಿ ಆಯೋಜಿಸಲಾಗಿದೆ ಮತ್ತು ಅದನ್ನು ದೇಶದ ಒಳಗಿನ ಕೃತ್ಯ ಎಂದು ಹೇಳಿಕೊಂಡಿದೆ. ಇನ್ನೊಂದು ಸಂದೇಶವು ಈ ಘಟನೆಯನ್ನು ಸಂಘರ್ಷ ಮತ್ತು ಧಾರ್ಮಿಕ ವಿಭಜನೆಯನ್ನು ಪ್ರಚೋದಿಸಲು ವಿನ್ಯಾಸಗೊಳಿಸಲಾದ ಭಾರತ ಸರ್ಕಾರದ ತಂತ್ರ ಎಂದು ಟೀಕಿಸಿದೆ.

ಹ್ಯಾಕರ್‌ಗಳು ದಿವಂಗತ ಲೆಫ್ಟಿನೆಂಟ್ ವಿನಯ್ ನರ್ವಾಲ್ ಅವರ ಪತ್ನಿ ಹಿಮಾಂಶಿ ನರ್ವಾಲ್ ಬಗ್ಗೆಯೂ ಆಕ್ಷೇಪಾರ್ಹ ಕಾಮೆಂಟ್‌ಗಳನ್ನು ಪೋಸ್ಟ್ ಮಾಡಿದ್ದು, ಅವರ ಪತಿಯ ಮೃತದೇಹದ ಪಕ್ಕದಲ್ಲಿ ಕುಳಿತಿರುವ ಚಿತ್ರ ಇತ್ತೀಚೆಗೆ ಸಾಮಾಜಿಕ ಮಾಧ್ಯಮದಲ್ಲಿ ವ್ಯಾಪಕ ವೈರಲ್ ಆಗಿತ್ತು. ಸೈಬರ್ ದಾಳಿ ಖಂಡಿಸಿದ ರಾಜಸ್ಥಾನ ಶಿಕ್ಷಣ ಸಚಿವ ಮದನ್ ದಿಲಾವರ್, ಪ್ರಸ್ತುತ ವೆಬ್‌ಸೈಟ್ ಅನ್ನು ಸ್ಥಗಿತಗೊಳಿಸಿದ್ದು, ಸರಿ ಮಾಡುವ ಪ್ರಯತ್ನಗಳು ನಡೆಯುತ್ತಿವೆ ಎಂದಿದ್ದಾರೆ.

ವಿಶ್ವಸಂಸ್ಥೆಯಲ್ಲಿ ಪಾಕಿಸ್ತಾನವನ್ನು ತರಾಟೆಗೆ ತೆಗೆದುಕೊಂಡ ಭಾರತ



ನ್ಯೂಯಾರ್ಕ್: ಪಹಲ್ಗಾಮ್‌ನಲ್ಲಿ ಏ.22ರಂದು ನಡೆದ ಭಯೋತ್ಪಾದಕ ದಾಳಿ ನಂತರ ಪಾಕಿಸ್ತಾನ ಮತ್ತು ಭಯೋತ್ಪಾದನೆಯನ್ನು ಬೆಂಬಲಿಸುವ ಅದರ ನೀತಿಗಳ ಬಗ್ಗೆ ಮತ್ತೆ ಪ್ರಶ್ನೆಗಳು ಎದ್ದಿವೆ. ವಿಶ್ವಸಂಸ್ಥೆಯಲ್ಲಿ ಭಾರತ, ಪಾಕಿಸ್ತಾನದ ಮುಖವಾಡವನ್ನು ಕಳಚಿದೆ. ಇದು ಭಯೋತ್ಪಾದಕರಿಗೆ ಹಣಕಾಸು ಒದಗಿಸುವ ಒಂದು ರಕ್ಕಸ ದೇಶ ಎಂದು ಪಾಕಿಸ್ತಾನವನ್ನು ಕರೆದಿದೆ. ವಿಶ್ವಸಂಸ್ಥೆಯಲ್ಲಿ ಭಾರತದ ರಾಯಭಾರಿ ಯೋಜ್ನಾ ಪಟೇಲ್ ಮಾತನಾಡಿ, ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಸಂದರ್ಶನದಲ್ಲಿ ಭಯೋತ್ಪಾದನೆಗೆ ಬೆಂಬಲ ಹಾಗೂ ಹಣಕಾಸು ಸಹಾಯ ಮಾಡಿರುವುದನ್ನು ಒಪ್ಪಿಕೊಂಡಿದ್ದಾರೆ. ಅದನ್ನು ಇಡೀ ಜಗತ್ತೇ ನೋಡಿದೆ. ಖ್ವಾಜಾ ತಪ್ಪೊಪ್ಪಿಗೆಯಿಂದ ಯಾರಿಗೂ ಆಶ್ಚರ್ಯವಾಗಿಲ್ಲ. ಏಕೆಂದರೆ ಪಾಕಿಸ್ತಾನವು ಜಾಗತಿಕ ಭಯೋತ್ಪಾದನೆಯನ್ನು ಉತ್ತೇಜಿಸುವ ರಕ್ಕಸ ರಾಷ್ಟ್ರವಾಗಿದೆ ಎಂದು ಹೇಳಿದರು. ಪಹಲ್ಗಾಮ್ ದಾಳಿ ನಂತರ ವಿಶ್ವದಾದ್ಯಂತದ ದೇಶಗಳು ಮತ್ತು ಅವುಗಳ ನಾಯಕರಿಂದ ದೊರೆತ ಬೆಂಬಲವನ್ನು ಭಾರತವು ಪೂರ್ಣ ಹೃದಯದಿಂದ ಶ್ಲಾಘಿಸುತ್ತದೆ. ಭಾರತದ ವಿರುದ್ಧ ಅಸಂಬದ್ಧ ಆರೋಪಗಳನ್ನು ಮಾಡಲು ಮತ್ತು ಪ್ರಚಾರವನ್ನು ಹರಡಲು ಅಂತಾರಾಷ್ಟ್ರೀಯ ವೇದಿಕೆಯನ್ನು ದುರುಪಯೋಗಪಡಿಸಿಕೊಳ್ಳುತ್ತಿರುವ ಪಾಕಿಸ್ತಾನವನ್ನು ಖಂಡಿಸಿದರು.

ಮೈಸೂರು ಮಿತ್ರ ಬುಧವಾರ 30 ಏಪ್ರಿಲ್ 2025

ಅರಣ್ಯ ಜಾಗದಲ್ಲಿ ವಾಸಿಸುತ್ತಿರುವವರಿಗೆ ಅಗತ್ಯ ದಾಖಲೆ ನೀಡಲು ತಿಂಗಳ ಕಾಲಾವಕಾಶ

ವಿರಾಜಪೇಟೆ, ಏ.29– ಅರಣ್ಯ ಇಲಾಖೆಯ ಜಾಗದಲ್ಲಿ ವಾಸಿಸುತ್ತಿರುವವರು ಅಗತ್ಯ ದಾಖಲೆ ನೀಡಲು ಒಂದು ತಿಂಗಳ ಕಾಲವಕಾಶ ನೀಡಲಾಗಿದೆ ಎಂದು ಪುರಸಭಾ ಮುಖ್ಯಾಧಿಕಾರಿ ನಾಚಪ್ಪ ತಿಳಿಸಿದ್ದಾರೆ.

ಇಂದು ನಡೆದ ಮಾಸಿಕ ಸಭೆಯಲ್ಲಿ ವಿಚಾರವನ್ನು ಪ್ರಸ್ತಾಪಿಸಿದ ಸದಸ್ಯ ರಾಜೇಶ್ ನೆಹರು ವಿವರ ಕೇಳಿದಾಗ ಮುಖ್ಯಾಧಿಕಾರಿ ನಾಚಪ್ಪ ಡಿಎಫ್‌ಓ ನ್ಯಾಯಾಲಯದಲ್ಲಿ ಈ ಬಗ್ಗೆ ವಿಚಾರಣೆ ನಡೆದಿದೆ. ವಾಸವಿರುವ ಯಾರನ್ನೂ ಒಕ್ಕಲೆಬ್ಬಿಸುವುದಿಲ್ಲ, ವಾಸವಿರುವ ಸ್ಥಳದ ಬಗ್ಗೆ ಕೆಲವರು ಅಗತ್ಯ ದಾಖಲೆಗಳನ್ನು ನೀಡಿಲ್ಲ ಇಂಥವರಿಗೆ ಒಂದು ತಿಂಗಳ ಕಾಲಾವಕಾಶ ನೀಡಲಾಗಿದೆ ಎಂದು ಅಧ್ಯಕ್ಷೆ ದೇಚಮ್ಮ ಹೇಳಿದರು. ಈ ಕುರಿತು ಜನರಿಗೆ ಅಗತ್ಯ ಮಾಹಿತಿ ಸಲಹೆ ನೀಡಲು ಸಿಬ್ಬಂದಿ ನೇಮಿಸಿರುವುದಾಗಿ ತಿಳಿಸಿದರು.

ತಮ್ಮ ವಾರ್ಡಿನಲ್ಲಿ ಕುಡಿಯುವ ನೀರಿನ ವ್ಯವಸ್ಥೆಗೆ ಮೋಟರ್ ಅಳವಡಿಸದೆ ನಾಲ್ಕು ತಿಂಗಳಿನಿಂದ ಸತಾಯಿಸುತ್ತಿರುವ ಕುಡಿಯುವ ನೀರಿನ ವಿಭಾಗದ ಇರ್ಫಾನ್ ಅವರನ್ನು ಸಭೆಯಲ್ಲಿಯೇ ಸದಸ್ಯೆ ಅನಿತಾ ತೀವ್ರ ತರಾಟೆಗೆ ತೆಗೆದುಕೊಂಡರು.

ಪಟ್ಟಣದ ಕೆಲ ಅಭಿವೃದ್ಧಿಗೆ ಕೇಂದ್ರ ಸರಕಾರದಿಂದ ಶೇ 60ರಷ್ಟು ಅನುದಾನ ಬರುತ್ತಿದೆ ಇದರಲ್ಲಿ ಶೇ 30ರಷ್ಟು ರಾಜ್ಯ ಸರಕಾರದ ಮತ್ತು ಶೇ10 ಸ್ಥಳಿಯ ಸಂಸ್ಥೆಯ ಅನುದಾನವಾಗಿರುತ್ತದೆ. ಇದನ್ನು ತೋರಿಸದೆ ಎಲ್ಲಾ ಅನುದಾನ ರಾಜ್ಯ ಸರಕಾರದ್ದು ಎಂದು ಬಿಂಬಿಸುತ್ತಿರುವುದು ಸೂಕ್ತ ನಡೆಯಲ್ಲ ಎಂದು ಬಿಜೆಪಿ ಸದಸ್ಯ ಮಹಾದೇವ ಮತ್ತು ಜೂನ ಆಕ್ಷೇಪ ವ್ಯಕ್ತಪಡಿಸಿದಾಗ ಆಡಳಿತ ಹಾಗೂ ವಿರೋಧ ಪಕ್ಷಗಳ ನಡುವೆ ತೀವ್ರ ವಾಗ್ವಾದ ನಡೆಯಿತು. ಸಭೆ ವಿಕೋಪಕ್ಕೆ ತೆರಳುವುದನ್ನು ಅರಿತ ಅಧ್ಯಕ್ಷೆ ಸಭೆಯನ್ನು ಹತ್ತು ನಿಮಿಷಗಳ ಕಾಲ ಮುಂದೂಡಿದರು.

ಕಾಂಗ್ರೆಸ್ ಕಚೇರಿ ನಿರ್ಮಾಣಕ್ಕೆ ಜಾಗ ನೀಡುವಂತೆ ಜಿಲ್ಲಾ ಅಧ್ಯಕ್ಷ ಧರ್ಮಜ ಉತ್ತಪ್ಪರ ಕೋರಿಕೆಯಂತೆ ಸುಮಾರು ನಾಲ್ಕು ಸೆಂಟುಗಳಿಗೆ ಅಧಿಕ ಜಾಗ ನೀಡುವ ಬಗ್ಗೆ ಮುಂದಿನ ದಿನಗಳಲ್ಲಿ ತೀರ್ಮಾನಿಸಲು ಪುರಸಭೆ ನಿರ್ಧರಿಸಿತು

ಹಣಕಾಸು ಸಮಿತಿಯ ಅಧ್ಯಕ್ಷರಾಗಿ ಎಂ.ಕೆ ಅಬ್ದುಲ್ ಜಲೀಲ್ ಮತ್ತು ಆರೋಗ್ಯ ಮತ್ತು ಶಿಕ್ಷಣ ಸಾಮಾಜಿಕ ನ್ಯಾಯ ಸಮಿತಿಗೆ ಹೆಚ್. ಎಂ.ಪೂರ್ಣಿಮರವರನ್ನು ಅಧ್ಯಕ್ಷೆಯಾಗಿ ಆಯ್ಕೆ ಮಾಡಲಾಯಿತು. ನೂತನ ಅಧ್ಯಕ್ಷರನ್ನು ಅಭಿನಂದಿಸಿದ ಅಧ್ಯಕ್ಷೆ ದೇಚಮ್ಮ ಮೂವರು ಮಹಿಳೆಯರು ಆಡಳಿತದ ಮುಂಚೂಣಿಯಲ್ಲಿರುವುದು ಹೆಮ್ಮೆಯ ವಿಚಾರ ಇದಕ್ಕೆ ಒತ್ತಾಸೆಯಾಗಿರುವ ಶಾಸಕರಿಗೂ ಅಭಿನಂದನೆ ಸಲ್ಲಿಸುವುದಾಗಿ ಹೇಳಿದರು.

ಮೇ 2 ರಿಂದ ಬೇತು ಶ್ರೀ ಮಕ್ಕಿ ಶಾಸ್ತಾವು ಉತ್ಸವ

ನಾಪೋಕ್ಲು, ಏ.29– ಇಲ್ಲಿಗೆ ಸಮೀಪದ ಇತಿಹಾಸ ಪ್ರಸಿದ್ಧ ಬೇತು ಗ್ರಾಮದ ಶ್ರೀ ಮಕ್ಕಿ ಶಾಸ್ತಾವು ದೇವರ ಎಡಮ್ಯಾರು ವಾರ್ಷಿಕ ಉತ್ಸವವು ಮೇ 2 ರಿಂದ 4 ರವರೆಗೆ ಜರುಗಲಿದೆ. 2 ರ ರಾತ್ರಿ 9 ಗಂಟೆಗೆ ಶ್ರೀ ದೇವರನ್ನು ಕೊಟ್ಟಿ ಹಾಡುವುದು, 3 ರಂದು ಬೆಳಿಗ್ಗೆ 11.30 ಕ್ಕೆ ಎತ್ತು ಪೋರಾಟ ಅಂದು ರಾತ್ರಿ 9.30 ಗಂಟೆಗೆ ಶ್ರೀ ಶಾಸ್ತಾವು ದೇವರ ದೀಪಾರಾಧನೆ (ಅಂದಿ ಬೊಳಕು) ನಡೆಯಲಿದೆ.

ಶಾಶ್ವತ ಸೂರಿಗಾಗಿ ಪ್ರತಿಭಟನೆ ನಡೆಸುತ್ತಿದ್ದವರ ಗುಡಿಸಲು ತೆರವು

● ಅಡುಗೆ ಪಾತ್ರೆ ವಸ್ತುಗಳನ್ನ ಕೊಂಡೊಯ್ದ ಅಧಿಕಾರಿಗಳು; ● ತಹಸಿಲ್ದಾರ್ ವಿರುದ್ಧ ಆಕ್ರೋಶ ● ನಾಡಕಛೇರಿ ಮುಂದೆ ಅಹೋರಾತ್ರಿ ಪ್ರತಿಭಟನೆ ಮುಂದುವರಿಕೆ



ಗುಡಿಸಲು ತೆರವು ಕಾರ್ಯಾಚರಣೆಯಿಂದ ನಿರಾಶ್ರಿತರಾಗಿರುವ ಕುಟುಂಬಗಳು.

ಸಿದ್ದಾಪುರ,ಏ.29– ಸ್ವಂತ ಸೂರಿಲ್ಲದೆ ಅತಂತ್ರ ಸ್ಥಿತಿಯಲ್ಲಿ ಬದುಕು ಸಾಗಿಸುತ್ತಿರುವ ಆದಿವಾಸಿ ಹಾಗೂ ದಲಿತ ಕುಟುಂಬಗಳು ವಿರಾಜಪೇಟೆ ತಾಲೂಕಿನ ಅಮ್ಮತ್ತಿ ಬಳಿಯ ಪೈಸಾರಿ ಭೂಮಿಯೊಂದರಲ್ಲಿ ತಾತ್ಕಾಲಿಕ ಗುಡಿಸಲು ಕಟ್ಟಿ ಶಾಶ್ವತ ಸೂರಿಗಾಗಿ ಪ್ರತಿಭಟನೆ ನಡೆಸುತ್ತಿದ್ದ ಸ್ಥಳಕ್ಕೆ ತಹಸಿಲ್ದಾರ್ ನೇತೃತ್ವದ ಕಂದಾಯ ಇಲಾಖೆ ಸಿಬ್ಬಂದಿಗಳು ದಿಢೀರ್ ದಾಳಿ ನಡೆಸಿ ಗುಡಿಸಲು ತೆರವು ಕಾರ್ಯಾಚರಣೆ ಮಾಡಿ ಸ್ಥಳದಲ್ಲಿದ್ದ ವಸ್ತುಗಳನ್ನು ವಶಕ್ಕೆ ಪಡೆದು ಕೊಂಡೊಯ್ದ ಘಟನೆ ವಿರಾಜಪೇಟೆ ತಾಲೂಕಿನ ಅಮ್ಮತ್ತಿ ಬಳಿ ನಡೆದಿದೆ.

ಯಾವುದೇ ಮುನ್ಸೂಚನೆ ನೀಡದೆ ಏಕಾಏಕಿ ತೆರವುಗೊಳಿಸಿ ಭಯದ ವಾತಾವರಣ ಸೃಷ್ಟಿಸುವುದರೊಂದಿಗೆ ಆಹಾರ ಸೇರಿದಂತೆ ಇತರ ವಸ್ತುಗಳನ್ನು ಕೊಂಡೊಯ್ದ ತಹಶೀಲ್ದಾರ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿರುವ ನಿರಾಶ್ರಿತರು ಅಮ್ಮತ್ತಿ ನಾಡ ಕಚೇರಿ ಮುಂಭಾಗ ಆಹೋರಾತ್ರಿ ಪ್ರತಿಭಟನೆ ಆರಂಭಿಸಿದ್ದಾರೆ. ಚಳಿ, ಮಳೆ ಗಾಳಿಯೆನ್ನದೆ ಶಾಶ್ವತ ನಿವೇಶನ ವ್ಯವಸ್ಥೆ ಮಾಡುವವರೆಗೂ ಪ್ರತಿಭಟನೆ ಮುಂದುವರಿಸುವುದಾಗಿ ಎಚ್ಚರಿಸಿದ್ದಾರೆ.

ಪುಟ್ಟ ಮಕ್ಕಳೊಂದಿಗೆ ವೈಯೋವೃದ್ಧರು ಸೇರಿ ಮಹಿಳೆಯರು, ಪುರುಷರು ತಾತ್ಕಾಲಿಕ ಶೆಡ್ಡನ್ನು ನಿರ್ಮಿಸಿ ಪ್ರತಿಭಟನೆ ಮಾಡುತ್ತಿದ್ದ ಸ್ಥಳದಲ್ಲಿದ್ದ ಆಹಾರ ಪದಾರ್ಥಗಳಿಂದ ಅಡಿಗೆ ಮಾಡಿ ತಿನ್ನಲು ಮುಂದಾಗುತ್ತಿದ್ದ ವೇಳೆ ಸ್ಥಳಕ್ಕೆ ಬಂದ ಅಧಿಕಾರಿಗಳು ಪಾತ್ರೆ ಸೇರಿದಂತೆ ಇತರ ವಸ್ತುಗಳೆಲ್ಲ ಕೊಂಡೊಯ್ಯಲೆತ್ನಿಸಿದಾಗ ಪ್ರತಿಭಟನಾಕಾರರು ಊಟ ಮಾಡಲಾದರೂ ಬಿಡಿ ಎಂದು ಅಂಗಲಾಚಿದರು. ಊಟ ಮಾಡಿದ ನಂತರ ಎಲ್ಲವನ್ನೂ ಕೊಂಡೊಯ್ದರು.

ಕೆಲಕಾಲ ದಿಢೀರ್ ಮಳೆ ಸುರಿಯಲಾರಂಭಿಸಿದಾಗ ಹನಿ ಮಳೆಗೆ ಮೈಯೊಡ್ಡಿದ ಮಹಿಳೆಯರು ತಮ್ಮಲ್ಲಿದ್ದ ಚಾಪೆ ಬಟ್ಟೆಗಳಿಂದ ಮಕ್ಕಳ ಸಂರಕ್ಷಣೆ ಮಾಡಿದರು

ಭೂಮಿ ಮತ್ತು ವಸತಿ ಹೋರಾಟ ಸಮಿತಿ ಹಾಗೂ ಬಹುಜನ ಕಾರ್ಮಿಕ ಸಂಘದ ಮುಖಂಡ ಮೊಣಪ್ಪ ಮಾತನಾಡಿ, ಅಮ್ಮತ್ತಿ ಹಾಗೂ ಕಾರ್ಮಾಡು ಗ್ರಾಪಂ ವ್ಯಾಪ್ತಿಯಲ್ಲಿರುವ ನೂರಾರು ಕುಟುಂಬಗಳು ಸ್ವಂತ ಸೂರಿಲ್ಲದೆ ಅತಂತ್ರ ಸ್ಥಿತಿಯಲ್ಲಿ ಜೀವನ ನಡೆಸುತ್ತಿದ್ದಾರೆ. ಈ ವ್ಯಾಪ್ತಿಯಲ್ಲಿ ನೂರಾರು ಎಕರೆ ಸರ್ಕಾರಿ ಭೂಮಿಗಳಿದ್ದರೂ ಸೂರು ಕಟ್ಟಲು ಸ್ವಲ್ಪ ಜಾಗವನ್ನು ಬಿಡಿಸಿಕೊಡಲು ಅಧಿಕಾರಿಗಳು ಮುಂದಾಗುತ್ತಿಲ್ಲ ಎಂದು ಆರೋಪಿಸಿದರು. ದಲಿತ ಹಾಗೂ ಆದಿವಾಸಿ ಕುಟುಂಬಗಳು ತಾತ್ಕಾಲಿಕ ಗುಡಿಸಲನ್ನು ಕಟ್ಟಿದ ಸ್ಥಳಕ್ಕೆ ಆಗಮಿಸಿ ಏಕಾಏಕಿ ದಾಳಿ ನಡೆಸಿ ಗುಡಿಸಲು ತೆರವುಗೊಳಿಸಿದ ತಹಸೀಲ್ದಾರ್ ಅನಂತ್ ಶಂಕರ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಬಹುಜನ ಕಾರ್ಮಿಕ ಸಂಘದ ಕಾರ್ಯದರ್ಶಿ ಮಹೇಶ್, ಕಿರಣ್ ಜಗದೀಶ್, ಹೊದ್ದೂರು ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಬಹುಜನ ಕಾರ್ಮಿಕ ಸಂಘದ ತಾಲೂಕು ಅಧ್ಯಕ್ಷೆ ಕುಸುಮಾವತಿ ಆನಂದ್, ಬಹುಜನ ಸಮಾಜ ಪಕ್ಷದ ಪೂವಣಿ, ಹನೀಫ್, ಅಂಬೇಡ್ಕರ್ ಯುವಕ ಸಂಘದ ಕಾರ್ಯದರ್ಶಿ ಎಂ.ರಂಜಿತ್ ಮೌರ್ಯ ಹಾಗೂ ಚೆಟ್ಟಳ್ಳಿಯ ಪೊನ್ನತ್‌ಮೊಟ್ಟೆ, ಪೆಗ್ಗೋಳಿ ಭೂಮಿ ಹೋರಾಟ ಸಮಿತಿ, ಕಡಗದಾಳು, ಹೊದ್ದೂರು ಗ್ರಾಮ ಪಂಚಾಯಿತಿ ಕಬಡಗೇರಿ, ಕುಂಜಲಗೇರಿ, ಬೊಳ್ಳುಮಾಡು ವಸತಿ ಮತ್ತು ಹಕ್ಕು ವಂಚಿತ ಹೋರಾಟಗಾರರು ಹಾಜರಿದ್ದರು.

ಪಯಶ್ವಿನಿ ನದಿಗೆ ಬಿದ್ದು ಪಾರ್ಶ್ವವಾಯುಪೀಡಿತ ಮಹಿಳೆ ಆತ್ಮಹತ್ಯೆ



ಮಡಿಕೇರಿ, ಏ.29– ಪಯಶ್ವಿನಿ ನದಿಗೆ ಬಿದ್ದು ಮಹಿಳೆ ಮೃತಪಟ್ಟ ಘಟನೆ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಕೊಯನಾಡು ಗ್ರಾಮದಲ್ಲಿ ನಡೆದಿದೆ. ಕೊಯನಾಡು ನಿವಾಸಿ ಯಶೋಧದಾಸ್ (60) ಎಂಬವರೇ ಆತ್ಮಹತ್ಯೆ ಮಾಡಿಕೊಂಡ ಮಹಿಳೆಯಾಗಿದ್ದಾರೆ.

ಸಂಪಾಜೆ ಗ್ರಾಮದ ಕೊಯನಾಡು ನಿವಾಸಿ ಯಶೋಧ ದಾಸ್ ಅವರು ಕೆಲವು ವರ್ಷಗಳ ಹಿಂದಿನಿಂದ ಪಾರ್ಶ್ವ ವಾಯು ಮತ್ತು ಹೃದಯ ಸಂಬಂಧಿತ ಕಾಯಿಲೆಯಿಂದ ಬಳಲುತಿದ್ದರು. ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ನಂತರ ಆಸ್ಪತ್ರೆಯಲ್ಲೇ ಉಳಿದು ಚಿಕಿತ್ಸೆ ಪಡೆಯುತ್ತಿದ್ದರು. ಅವರನ್ನು ಕೆಲವು ದಿನಗಳ ಹಿಂದೆ ಕೊಯನಾಡು ಮನೆಗೆ ಕರೆದುಕೊಂಡು ಬರಲಾಗಿತ್ತು. ಮಂಗಳವಾರ ತಮ್ಮ ಮಗ ಉಮೇಶ್ ಅವರಿಗೆ ಕೋಳಿ ಮಾಂಸ ತರಲು ಹೇಳಿದ್ದರು ಎನ್ನಲಾಗಿದೆ.

ಅದರಂತೆ ಉಮೇಶ್ ಚಡಾವು ಗ್ರಾಮಕ್ಕೆ ತೆರಳಿ ಕೋಳಿ ಮಾಂಸ ಸಹಿತ ಮನೆಗೆ ಆಗಮಿಸಿದಾಗ ಯಶೋಧ ದಾಸ್ ಅವರು ಮನೆಯಲ್ಲಿ ಕಂಡು ಬರಲಿಲ್ಲ. ಇದರಿಂದ ಆತಂಕಗೊಂಡ ಉಮೇಶ್ ಕೂಡಲೇ ಅಕ್ಕಪಕ್ಕದ ಮನೆಯವರಿಗೆ ವಿಷಯ ತಿಳಿಸಿದ್ದಾರೆ. ಸುತ್ತಮುತ್ತಲಿನ ಪ್ರದೇಶದಲ್ಲಿ ಹುಡುಕಾಟ ನಡೆಸುತ್ತಿದ್ದ ಸಂದರ್ಭ ಮನೆಯ ಪಕ್ಕದ ಪಯಶ್ವಿನಿ ನದಿಯಲ್ಲಿ ಯಶೋಧ ದಾಸ್ ಅವರ ಮೃತದೇಹ ಪತ್ತೆಯಾಗಿದೆ. ಮಡಿಕೇರಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಟ್ಟಿಗೆ ಲಾರಿ ಬೆಂಕಿಗೆ ಆಹುತಿ



ಮಡಿಕೇರಿ,ಏ.29– ಪುತ್ತೂರಿನಿಂದ ಮಡಿಕೇರಿ ಕಡೆಗೆ ಕೆಂಪು ಕಲ್ಲು ಇಟ್ಟಿಗೆ ಸಾಗಿಸುತ್ತಿದ್ದ ಲಾರಿಯೊಂದು ಹೆದ್ದಾರಿಯಲ್ಲಿ ಬೆಂಕಿಗೆ ಆಹುತಿಯಾದ ಘಟನೆ ಸೋಮವಾರ ತಡ ರಾತ್ರಿ ನಡೆದಿದೆ.

ಮಡಿಕೇರಿ–ಮಂಗಳೂರು ಎನ್‌ಹೆಚ್ 275ರ ಕೊಯನಾಡು ಬಳಿ ಕೆಂಪು ಕಲ್ಲು ಇಟ್ಟಿಗೆ ಲಾರಿ ಆಗಮಿಸುತ್ತಿದ್ದಾಗ ಇಂಜಿನ್ ಬಳಿ ತಾಂತ್ರಿಕ ದೋಷ ಕಾಣಿಸಿಕೊಂಡು ಬೆಂಕಿ ಹೊತ್ತಿಕೊಂಡಿದೆ. ಇದನ್ನು ಅರಿತ ಚಾಲಕ ಮತ್ತು ಕ್ಲೀನರ್ ಲಾರಿಯಿಂದ ಇಳಿದು ಅಪಾಯದಿಂದ ಪಾರಾಗಿದ್ದಾರೆ. ಆದರೆ ಬೆಂಕಿಯ ಕೆನ್ನಾಲಿಗೆ ಸಂಪೂರ್ಣವಾಗಿ ಕ್ಯಾಬಿನ್‌ಗೆ ಆವರಿಸಿ ಲಾರಿಯನ್ನು ಆಪೋಷನ ಪಡೆದಿದೆ. ಘಟನೆ ಕುರಿತು ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಭೂಮಿ ನೀಡದೆ ಸಹೋದರರಿಂದ ಅನ್ಯಾಯ

ನೊಂದ ಕುಟುಂಬದಿಂದ ದಯಾಮರಣಕ್ಕಾಗಿ ರಾಷ್ಟ್ರಪತಿಗಳಿಗೆ ಪತ್ರ



ರಾಷ್ಟ್ರಪತಿಗಳಿಗೆ ದಯಾಮರಣಕ್ಕಾಗಿ ಅರ್ಜಿಸಲ್ಲಿಸಿರುವ ಕುಟುಂಬ.

ಕೆ.ಆರ್.ಪೇಟೆ,ಏ.29– ಹಿರಿಯ ಸಹೋದರರು ಭೂಮಿ ನೀಡದೇ ಅನ್ಯಾಯ ಮಾಡಿದ್ದು, ತಮಗೆ ನ್ಯಾಯ ಒದಗಿಸಬೇಕು ಇಲ್ಲವೇ ದಯಾಮರಣಕ್ಕೆ ಅನುಮತಿ ನೀಡಬೇಕೆಂದು ನೊಂದ ಕುಟುಂಬ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪತ್ರ ಬರೆದಿದೆ.

ಘಟನೆ ಕೆ.ಆರ್.ಪೇಟೆ ತಾಲೂಕಿನ ಕಿಕ್ಕೇರಿ ಹೋಬಳಿಯ ಚಿಕ್ಕಳಲೆ ಗ್ರಾಮದ ಅಮ್ಮಣ್ಣಮ್ಮ ಹಾಗೂ ದಾಸಾಚಾರಿ ದಂಪತಿ ತಮ್ಮ ಜೀವಿತಾವಧಿಯಲ್ಲಿ ಚಿಕ್ಕಳಲೆ ಜಮಾಬಂಧಿಗೆ ಸರ್ವೆ ನಂ.107ರಲ್ಲಿ ಸುಮಾರು ಎರಡೂವರೆ ಎಕರೆ ಜಮೀನನ್ನು ಸಾಗುವಳಿ ಮಾಡುತ್ತಿದ್ದರು. 1998ರಲ್ಲಿ ಅಕ್ರಮ-ಸಕ್ರಮದಡಿ ಭೂಮಿ ಮಂಜೂರಾತಿಗಾಗಿ ಫಾರಂ.ನಂ.53ರಲ್ಲಿ ಅರ್ಜಿ ಸಲ್ಲಿಸಿದ್ದರು. ಆದರೆ ದಾಸಾಚಾರಿ 2000ರಲ್ಲಿ ಮತ್ತು ಅಮ್ಮಣ್ಣಮ್ಮ 2001ರಲ್ಲಿ ನಿಧನ ಹೊಂದಿದ್ದು ಅನಂತರ ಅವರ ಹಿರಿಯ ಪುತ್ರ ಸೋಮಚಾರಿ 33 ಗುಂಟೆ, ಎರಡನೇ ಪುತ್ರ ಜಯರಾಮಾಚಾರಿ 33 ಗುಂಟೆ, ಕಿರಿಯ ಪುತ್ರ ಕೃಷ್ಣಾಚಾರಿ 33 ಗುಂಟೆ ಹಂಚಿಕೊಂಡು ಬೇಸಾಯ ಮಾಡಿ ಕೊಂಡು ಹೋಗುತ್ತಿದ್ದರು.

2002ರಲ್ಲಿ ಅಕ್ರಮ–ಸಕ್ರಮದಡಿಯಲ್ಲಿ ಸರ್ಕಾರವು ಎರಡೂವರೆ ಎಕರೆ ಜಮೀನಿನನ್ನು ದಾಸಾಚಾರಿಯವರ ಫಾರಂ. ನಂ.53 ಅರ್ಜಿಯ ಮೇರೆಗೆ ಹಿರಿಯ ಪುತ್ರ ಸೋಮಾಚಾರಿಗೆ 1ಎಕರೆ 10ಗುಂಟೆ, ಮತ್ತು ಅಮ್ಮಣ್ಣಮ್ಮ ಅವರ ಫಾರಂ. ನಂ.53ಅರ್ಜಿಯ ಮೇರೆಗೆ ಎರಡನೇ ಪುತ್ರ ಜಯರಾಮಾಚಾರಿ ಅವರಿಗೆ 1 ಎಕರೆ 10 ಗುಂಟೆ ಮಂಜೂರು ಮಾಡಿಕೊಟ್ಟು, ಕಿರಿಯ ಪುತ್ರ ಕೃಷ್ಣಾಚಾರಿ ಅವರೂ ಸೇರಿದಂತೆ ಮೂವರೂ ಸಮಪಾಲು ಹಂಚಿಕೆ ಮಾಡಿಕೊಂಡು ಹೋಗುವಂತೆ ಅಧಿಕಾರಿಗಳು ಮೌಖಿಕ ಸಲಹೆ ನೀಡಿ ಸಾಗುವಳಿ ಚೀಟಿ ಮಂಜೂರು ಮಾಡಿದರು.

ಈ ಜಮೀನನ್ನು ಜಿಲ್ಲಾಧಿಕಾರಿಯವರ ಆದೇಶದ ಮೇರೆಗೆ 2004–05ರಲ್ಲಿ ಪಾಲು–ಪಟ್ಟಿ ಮಾಡಿಕೊಂಡು ಅದರಂತೆ ಖಾತೆ ಮಾಡಿಸಿಕೊಂಡು 2008 ರವರೆಗೂ ಬೇಸಾಯ ಮಾಡುತ್ತಿದ್ದೆವು. ಆದರೆ ನಂತರದ ದಿನಗಳಲ್ಲಿ ಹಿರಿಯ ಸಹೋದರರಾದ ಸೋಮಾಚಾರಿ ಹಾಗೂ ಜಯರಾಮಚಾರಿ ಅವರು ಕಿರಿಯ ಸಹೋದರನಿಗೆ ಮೋಸ ಮಾಡಬೇಕು ಎಂಬ ದುರುದ್ದೇಶದಿಂದ ನಮಗೆ ಸಾಗುವಳಿ ಮಂಜೂರಾತಿ ನೆಪ ಇಟ್ಟುಕೊಂಡು ಸರ್ಕಾರದಿಂದ ಮಂಜೂರಾದ ಎರಡೂವರೆ ಎಕರೆ ಜಮೀನು ಒಟ್ಟು ಕುಟುಂಬದ ಆಸ್ತಿಯಾಗಿದ್ದರೂ ಸಹ ಸದರಿ ಜಮೀನಿನಲ್ಲಿ ಒಂದು ಗುಂಟೆಯನ್ನೂ ನೀಡದೇ ಮೋಸ ಮಾಡಿರುತ್ತಾರೆ. ಇದರಿಂದ ತನ್ನ ಕುಟುಂಬ ಕಳೆದ 20 ವರ್ಷಗಳಿಂದಲೂ ಭೂಮಿ ಇಲ್ಲದೆ ಕೂಲಿ ಮಾಡಿಕೊಂಡು ಜೀವನ ನಡೆಸ ಬೇಕಾದ ದುಸ್ಥಿತಿಗೆ ತಳ್ಳಿದ್ದಾರೆ.

ಈ ಸಂಬಂಧ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು, ತಹಸೀಲ್ದಾರ್‌ರವರು, ಗಮನಹರಿಸಿ ದರಖಾಸ್ತು ಭೂಮಿಯ ಹಂಚಿಕೆಯಲ್ಲಿ ನಮಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿ ಕೊಟ್ಟು ನ್ಯಾಯ ದೊರಕಿಸಿಕೊಡಬೇಕು. ಇಲ್ಲವೇ ಬದುಕಲು ಯಾವುದೇ ದಾರಿ ಇಲ್ಲದ ಕಾರಣ ದಯಾ ಮರಣ ನೀಡಬೇಕು ಎಂದು ರಾಷ್ಟ್ರಪತಿಗಳಿಗೆ ಪತ್ರ ಬರೆದು ಕೃಷ್ಣಾಚಾರಿ ಕುಟುಂಬಸ್ಥರು ತಮ್ಮ ಅಳಲು ತೋಡಿಕೊಂಡಿದ್ದಾರೆ.

ಉಗ್ರರ ದಾಳಿಗೆ ಬಲಿಯಾದ ಪ್ರವಾಸಿ ಭಾರತೀಯರಿಗೆ ಚಿತ್ರನಮನ



ಚಿತ್ರನಮನ–ಸಂತಾಪ ಕಾರ್ಯಕ್ರಮಕ್ಕೆ ಚಾಲನೆ ನೀಡುತ್ತಿರುವುದು.

ಮಂಡ್ಯ,ಏ.29– ಸನಾತನ ಹಿಂದೂ ಧರ್ಮಿಯರ ಜೀವದ ಮೇಲೆ ನಿರಂತರ ಉಗ್ರರ ದಾಳಿಯಾಗುತ್ತಿದೆ ಎಂದು ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ. ನಿಂಗರಾಜ್‌ಗೌಡ ಆತಂಕ ವ್ಯಕ್ತಪಡಿಸಿದರು.

ನಗರದ ವಿದ್ಯಾನಗರದ ರೈನ್‌ಬೋ ಕ್ರಿಯೇಷನ್ ಸಭಾಂಗಣದಲ್ಲಿ ಮಂಡ್ಯ ಚಿತ್ರಕಲಾವಿದ ಬಳಗ, ರೈನ್‌ಬೋ ಕ್ರಿಯೇಷನ್, ಡಾ.ಈ.ಸಿ.ನಿಂಗರಾಜ್‌ಗೌಡ ಸ್ನೇಹ ಬಳಗ ಇವರ ಸಹಯೋಗದಲ್ಲಿ ಆಯೋಜಿಸಿದ್ದ ಪಹಲ್ಗಾಮ್‌ನಲ್ಲಿ ಉಗ್ರರ ಗುಂಡಿಗೆ ಬಲಿಯಾದ ಭಾರತೀಯ ನಾಗರೀಕರಿಗೆ ಚಿತ್ರನಮನ–ಸಂತಾಪ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಏ.22ರಂದು ನಡೆದ ಪಹಲ್ಗಾಮ್ ಉಗ್ರರ ದಾಳಿ ಭಾರತದಲ್ಲಿ 2008ರ ಮುಂಬೈ ದಾಳಿಯ ನಂತರದ ಅತ್ಯಂತ ಘೋರ ಘಟನೆಗಳಲ್ಲಿ ಒಂದಾಗಿದೆ ಎಂದು ಸ್ಮರಿಸಿದರು.

ಭಾರತೀಯ ತನಿಖಾ ಸಂಸ್ಥೆಗಳು ಲಷ್ಕರ್–ಎ–ತೊಯ್ಬಾ ಉಗ್ರ ಸಂಘಟನೆಯ ಸಂಪರ್ಕವನ್ನು ಪತ್ತೆಹಚ್ಚಿದ್ದು, ಮೂವರು ಆರೋಪಿಗಳಲ್ಲಿ ಇಬ್ಬರು ಪಾಕಿಸ್ತಾನ ಮೂಲದವರಾಗಿದ್ದಾರೆ ಎಂಬ ಮಾಹಿತಿಯನ್ನು ಕಲೆ ಹಾಕಿದ್ದಾರೆ ಎಂದು ತಿಳಿಸಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಈ ದಾಳಿಯನ್ನು "ಹೀನ ಮತ್ತು ಅಮಾನುಷ" ಎಂದು ಖಂಡಿಸಿ, ಆರೋಪಿಗಳನ್ನು ನ್ಯಾಯದ ಮುಂದೆ ತರಲು ಬದ್ಧತೆ ವ್ಯಕ್ತಪಡಿಸಿದ್ದಾರೆ. ಭಾರತವು ಪಾಕಿಸ್ತಾನದ ವಿರುದ್ಧ ದ್ವಿಪಕ್ಷೀಯ ನೀರು ಒಪ್ಪಂದವನ್ನು ಸ್ಥಗಿತಗೊಳಿಸಿ, ಪಾಕಿಸ್ತಾನದ ರಾಯಭಾರಿಗಳನ್ನು ಹಿಂಪಡೆದು, ಗಡಿಗಳನ್ನು ಮುಚ್ಚಿದೆ ಎಂದು ಹೇಳಿದರು.

ಮುಖ್ಯಮಂತ್ರಿಯ ರಾಜಿನಾಮೆಗೆ ಆಗ್ರಹ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರಿನಲ್ಲಿ ಪಹಲ್ಗಾಮ್ ದಾಳಿ ಕುರಿತು ಪಾಕಿಸ್ಥಾನದ ಮೇಲೆ ಯುದ್ಧ ಅಗತ್ಯವಿಲ್ಲ, ಕಾಶ್ಮೀರದ ಪ್ರದೇಶಗಳಲ್ಲಿ ಭದ್ರತೆಯನ್ನು ಬಿಗಿಗೊಳಿಸಬೇಕು, ನಾವು ಯುದ್ಧದ ಪರ ಇಲ್ಲ, ಬದಲಾಗಿ ಶಾಂತಿ ನೆಲಸುವಂತೆ ಮಾಡಲು ಕ್ರಮ ಹೆಚ್ಚಿಸಿ ಎಂದಿರುವ ವಿಚಾರ ಪಾಕಿಸ್ತಾನ ಮಾಧ್ಯಮಗಳಲ್ಲಿ ವೈರಲ್ ಆಗುತ್ತಿದೆ, ಇಂತಹ ದೇಶದ್ರೋಹ ಹೇಳಿಕೆ ನೀಡಿರುವ ಸಿ.ಎಂ. ಅವರು ನೈತಿಕಹೊಣೆಹೊತ್ತು ರಾಜಿನಾಮೆ ಸಲ್ಲಿಸಿ, ದೇಶ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು.

ಕೇಂದ್ರ ಸರ್ಕಾರಕ್ಕೆ ಒಂದು ಸದಾವಕಾಶ ಬಂದಿದೆ, ವಿದೇಶಾಂಗ ನೀತಿಯ ಮೂಲಕ ರಾಜತಾಂತ್ರಿಕ ಕ್ರಮ ಕೈಗೊಂಡು ಭಾರತೀಯ ಪ್ರವಾಸಿಗರನ್ನು ರಕ್ಷಿಸುತ್ತಿದೆ, ಪಾಪಿ ಪಾಕಿಸ್ತಾನಕ್ಕೆ ಕೇಂದ್ರ ಸರ್ಕಾರ ತಕ್ಕ ಉತ್ತರ ನೀಡಲು ಎಲ್ಲಾ ರೀತಿ ಕಠಿಣ ನಿಲುವುಗಳನ್ನು ತಾಳುತ್ತಿದೆ ಎಂದು ತಿಳಿಸಿದರು.

ಇದೇ ಸಂಧರ್ಭದಲ್ಲಿ ಉಗ್ರರ ದಾಳಿಗೆ ಬಲಿಯಾದ ಪ್ರವಾಸಿ ಭಾರತೀಯರ ಆತ್ಮಕ್ಕೆ ಶಾಂತಿ ಸಿಗಲು ಮೌನ ಆಚರಿಸಿ, ಸಂತಾಪ ಸೂಚಿಸಿ, ಚಿತ್ರನಮನ–ದೀಪನಮನ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಚಿತ್ರಕಲಾವಿದರಾದ ಡಾ.ಶಂಕರಪ್ಪ, ವಿನೋದ್‌ಕುಮಾರ್, ವಿರುಪಾಕ್ಷ, ಜಯಶಂಕರ್, ಶೋಭಾ, ವಿದ್ಯಾಶ್ರೀ, ಚೇತನ್, ವಿಜಯೇಂದ್ರ, ಶಿವಪ್ರಸಾದ್, ನಿವೃತ್ತ ಸೈನಿಕ ಕುಮಾರ್ ಮತ್ತಿತರರಿದ್ದರು.

ರೇಣುಕಾಚಾರ್ಯರ ಜಯಂತಿ ಆಚರಿಸಬೇಕೆಂಬ ಆದೇಶ ಹಿಂಪಡೆಯುವಿಕೆ ಸ್ವಾಗತಾರ್ಹ

ವೀರಶೈವ ಲಿಂಗಾಯಿತ ಮಹಾಸಭಾ ಜಿಲ್ಲಾಧ್ಯಕ್ಷ ಮಂಜುನಾಥ್

ಮಂಡ್ಯ: ಬಸವೇಶ್ವರರ ಜಯಂತಿ ಜೊತೆಯಲ್ಲಿ ರೇಣುಕಾಚಾರ್ಯರ ಜಯಂತಿ ಆಚರಿಸಬೇಕೆಂಬ ವೀರಶೈವ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ ಬಿದರಿ ಅವರ ಆದೇಶವನ್ನು ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಹಿಂಪಡೆದಿರುವುದು ಸ್ವಾಗತಾರ್ಹ ಎಂದು ಮಹಾಸಭಾದ ಜಿಲ್ಲಾಧ್ಯಕ್ಷ ಎಂ.ಎಸ್.ಮಂಜುನಾಥ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವೀರಶೈವ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ ಬಿದರಿ ಅವರ ಆದೇಶ ಗೊಂದಲ ಸೃಷ್ಟಿಸಿದ್ದು, ಶಾಮನೂರು ಶಿವಶಂಕರಪ್ಪ ಅವರ ಆದೇಶ ಗೊಂದಲ ನಿವಾರಿಸಿದೆ ಎಂದರು.

ಸರ್ಕಾರಿ ಕಛೇರಿಗಳಲ್ಲಿ ಕಡ್ಡಾಯವಾಗಿ ಬಸವಣ್ಣನವರ ಭಾವಚಿತ್ರ ಅಳವಡಿಕೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದ್ದರೂ ಜಿಲ್ಲಾ ಪಂಚಾಯಿತಿ, ಪೊಲೀಸ್ ಠಾಣೆಗಳು ಹಾಗೂ ಇತರ ಸರ್ಕಾರಿ ಕಚೇರಿಗಳಲ್ಲಿ ಪಾಲನೆಯಾಗುತ್ತಿಲ್ಲ ಎಂದು ಖಂಡಿಸಿದರು. ಕೇಂದ್ರ ಸರ್ಕಾರ ಬಸವಜಯಂತಿ ಆಚರಿಸಲು ಮುಂದಾಗಿದ್ದು, ನೂತನ ಸಂಸತ್ ಭವನದ ಮುಂದೆ ಬಸವೇಶ್ವರರ ಪುತ್ಥಳಿ ಸ್ಥಾಪನೆ ಮಾಡುವಂತೆ ಆಗ್ರಹಿಸಿದರು.

ಒಂದು ಸಮುದಾಯದ ಸಂಘಟನೆ ಗಳ ಹೆಸರನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸಿ, ಲೋಪವೆಸಗಿದ ಕಾರಣ ಆಹ್ವಾನ ಪತ್ರಿಕೆ ಮರುಮುದ್ರಿಸಲಾಗಿದೆ. ಜಿಲ್ಲಾಡಳಿತ ಎಲ್ಲ ಧರ್ಮೀಯರು, ಸಂಘಟನೆಗಳನ್ನು ಒಗ್ಗೂಡಿಸಿ ಬಸವ ಜಯಂತಿ ಆಚರಿಸಲು ಮುಂದಾಗಬೇಕು. ಬಸವ ಜಯಂತಿ ಸಂಬಂಧ ಮೆರವಣಿಗೆ ರದ್ದುಗೊಳಿಸಿರುವುದು ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಸಾಕ್ಷಿಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗೋಷ್ಠಿಯಲ್ಲಿ ಶಿವಲಿಂಗಪ್ಪ ಹೆಚ್.ವಿ.ಶಿವರುದ್ರಪ್ಪ, ಎಲ್.ಡಿ.ನಂದೀಶ್, ಮಲ್ಲಿಕಾರ್ಜುನಪ್ಪ, ಸುಂಡಹಳ್ಳಿ ಸೋಮಶೇಖರ್ ಇತರರಿದ್ದರು.

ತಾಯಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ ಪೊಲೀಸರು: ಆತ್ಮಹತ್ಯೆಗೆ ಯತ್ನಿಸಿದ ಮಗ

ಸಬ್ ಇನ್ಸ್‌ಪೆಕ್ಟರ್, ಪೇದೆ ವಿರುದ್ಧ ಸರ್ಕಲ್ ಇನ್ಸ್‌ಪೆಕ್ಟರ್‌ಗೆ ದೂರು

ಕೊಳ್ಳೇಗಾಲ, ಏ.29– ಮನೆಗೆ ಬಳಿಗೆ ಬಂದ ಪೊಲೀಸರು ತನ್ನನ್ನು ಅವಾಚ್ಯ ಶಬ್ದಗಳಿಂದ ನಿಂಧಿಸಿ, ಮಗನ ಮೇಲೆ ಗುಂಡು ಹಾರಿಸುವುದಾಗಿ ಬೆದರಿಸಿದ್ದರಿಂದ ಮನನೊಂದು ಮಗ ವಿಷ ಸೇವಿಸಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದು, ಇದಕ್ಕೆ ಕಾರಣರಾದ ಪಟ್ಟಣ ಠಾಣೆಯ ಸಬ್ ಇನ್ಸ್‌ಪೆಕ್ಟರ್ ವರ್ಷ ಮತ್ತು ಪೇದೆ ವೀರೇಂದ್ರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ನಗರಸಭಾ ಮಾಜಿ ಸದಸ್ಯ ಕೆ.ಕೆ. ಮೂರ್ತಿ ಪತ್ನಿ ರಾಧಿಕಾ ಸರ್ಕಲ್ ಇನ್ಸ್‌ಪೆಕ್ಟರ್‌ಗೆ ದೂರು ನೀಡಿದ್ದಾರೆ.

ತನ್ನ ಮಗ ದುಷ್ಯಂತ್‌ನನ್ನು ಹುಡುಕಿಕೊಂಡು ಜಿ.ಪಿ. ಮಲ್ಲಪ್ಪಪುರಂ ಬಡಾವಣೆಯಲ್ಲಿರುವ ತಮ್ಮ ಮನೆಗೆ ಬಂದ ಸಬ್ ಇನ್ಸ್‌ಪೆಕ್ಟರ್ ಬಿ.ವೈ.ವರ್ಷ ಮತ್ತು ಗುಪ್ತಚಾರ ವಿಭಾಗದ ಪೇದೆ ವೀರೇಂದ್ರ 'ನಿನ್ನ ಮಗ ಠಾಣೆಗೆ ಕರೆದರೆ ಬಂದಿಲ್ಲ ಸಂಜೆಯೊಳಗೆ ಕರಕೊಂಡು ಬರದಿದ್ದರೆ, ಸಂಜೆ ಬಂದು ನಿನ್ನನ್ನೇ ಬಂಧಿಸಿ ಲಾಕಪ್‌ಗೆ ದೂಡುತ್ತೇವೆ ಅಗತ್ಯ ಬಂದರೆ ಗುಂಡು ಹೊಡೆದು ನಿನ್ನ ಮಗನನ್ನು ಸಾಯಿಸಿ ಬಿಡುತ್ತೇವೆ ಎಂದು ಬೆದರಿಸಿದ್ದಲ್ಲದೆ ಅಶ್ಲೀಲ ಶಬ್ದಗಳಿಂದ ನಿಂದಿಸಿ ದ್ದಾರೆ. ತನ್ನ ಮಗ ಏನು ತಪ್ಪು ಮಾಡಿದ್ದಾನೆ ಪೊಲೀಸರು ಯಾಕೆ ಆತನನ್ನು ಬಂಧಿಸಲು ಬಂದಿದ್ದರು ಎಂಬ ಬಗ್ಗೆ ತಮಗೇನೂ ಗೊತ್ತಿಲ್ಲ ಆದರೆ ಈ ವಿಷಯ ಗೊತ್ತಾಗಿನಿಂದ ದುಷ್ಯಂತ್ ಬಹಳ ಖಿನ್ನತೆಗೆ ಒಳಗಾಗಿದ್ದು, ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿ, ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಾಗಿದ್ದಾನೆ. ಇದಕ್ಕೆ ಕಾರಣರಾದ ಸಬ್ ಇನ್ಸ್‌ಪೆಕ್ಟರ್ ಮತ್ತು ಪೇದೆ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಅವರು ದೂರಿ ನಲ್ಲಿ ಕೋರಿದ್ದಾರೆ.

ಇತ್ತೀಚೆಗೆ ಸ್ನೇಹಿತರೊಂದಿಗೆ ಬಾರ್‌ಗೆ ಹೋಗಿದ್ದ ದುಷ್ಯಂತ್ ಬಿಲ್ ಕೊಡುವ ವಿಷಯದಲ್ಲಿ ಕ್ಯಾಷಿಯರ್ ವೆಂಕಟೇಶ್ ಮೇಲೆ ಹಲ್ಲೆ ನಡೆಸಿದ ದೃಶ್ಯ ಅಲ್ಲಿನ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಪಿಎಸ್‌ಐ ಮತ್ತು ಪೇದೆ ದುಷ್ಯಂತ್ ಮನೆಗೆ ಹೋಗಿರಬಹುದು ಎಂದು ಹೇಳಲಾಗಿದೆ.

ಮೇ 2, ಶ್ರೀ ಶಂಕರಭಗವತ್ಪಾದಾಚಾರ್ಯರ ಜಯಂತಿ



ಚಾಮರಾಜನಗರ,ಏ.28– ತಾಲೂಕಿನ ಹೆಬ್ಬಸೂರು ಗ್ರಾಮದಲ್ಲಿನ ಶೃಂಗೇರಿ ಶಾರದಾ ಪೀಠ ಶಾಖಾ ಮಠದಲ್ಲಿ ಮೇ.2 ರಂದು ಶಂಕರಭಗವತ್ಪಾದಾಚಾರ್ಯರ ಜಯಂತಿ ಹಾಗೂ ಮೇ 7ರಿಂದ 9ರವರೆಗೆ ಪ್ರತಿಷ್ಠಾ ವಾರ್ಷಿಕೋತ್ಸವ ಮತ್ತು ರಥೋತ್ಸವ ಆಯೋಜಿಸಲಾಗಿದೆ.

ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರರಾದ ಶ್ರೀ ಭಾರತೀ ತೀರ್ಥ ಸ್ವಾಮೀಜಿ, ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಪಾಲ್ಗೊಳ್ಳಲಿದ್ದಾರೆ. ಮೇ 2ರಿಂದ 9ರವರೆಗೆ ಶ್ರೀ ಮಠದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿದ್ದು, ಭಕ್ತಾದಿಗಳು ತನು, ಮನ, ಧನ ಸಹಾಯವನ್ನು ಮಾಡಿ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಕಾರ್ಯಕ್ರಮದಲ್ಲಿ ಭಾಗವಹಿಸಿ ಶ್ರೀ ಶಂಕರಭಗವತ್ಪಾದರ ಹಾಗೂ ಜಗದ್ಗುರುಗಳವರ ಆಶೀರ್ವಾದಕ್ಕೆ ಪಾತ್ರರಾಗಬೇಕೆಂದು ಹೆಬ್ಬಸೂರು ಶಂಕರಮಠದ ಧರ್ಮಾಧಿಕಾರಿ ಹೆಚ್.ಎಸ್.ಶ್ರೀಧರ ಪ್ರಸಾದ್ ತಿಳಿಸಿದ್ದಾರೆ.

ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಕಾಲೇಜು 4ನೇ ಘಟಿಕೋತ್ಸವ

147 ವಿದ್ಯಾರ್ಥಿಗಳಿಗೆ 'ಅಭ್ಯುದಯನ್ಸ್' ಪದವಿ ಪ್ರದಾನ



ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 4ನೇ ಘಟಿಕೋತ್ಸವವನ್ನು ವೈದ್ಯಕೀಯ ಶಿಕ್ಷಣ ನಿರ್ದೇಶಕಿ ಡಾ. ಬಿ.ಎಲ್. ಸುಜಾತ ರಾಥೋಡ್ ಉದ್ಘಾಟಿಸಿದರು.

ಚಾಮರಾಜನಗರ, ಏ.29– ವೈದ್ಯಕೀಯ ವಿಜ್ಞಾನಗಳ (ಸಿಮ್ಸ್) ಕಾಲೇಜು ವತಿಯಿಂದ "ಅಭ್ಯುದಯನ್ಸ್" ವಿದ್ಯಾರ್ಥಿಗಳಿಗೆ ಇಂದು ವೈದ್ಯಕೀಯ ಪದವಿ ಪ್ರದಾನ ಮಾಡಲಾಯಿತು.

ನಗರದ ಹೊರವಲಯದ ಯಡಬೆಟ್ಟದಲ್ಲಿರುವ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ಆಯೋಜಿಸಲಾಗಿದ್ದ ಭವ್ಯ ವೇದಿಕೆಯಲ್ಲಿ ನಡೆದ 4ನೇ ಘಟಿಕೋತ್ಸವದ 'ಪರ್ವ' ಸಮಾರಂಭದಲ್ಲಿ ವೈದ್ಯಕೀಯ ಶಿಕ್ಷಣದಲ್ಲಿ ಉತ್ತಮ ಸಾಧನೆ ಮಾಡಿದ 150 ವಿದ್ಯಾರ್ಥಿಗಳ ಪೈಕಿ 147 ವಿದ್ಯಾರ್ಥಿಗಳಿಗೆ ಪದವಿ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ 2019ರ ಬ್ಯಾಚಿನ ಟಾಪರ್‌ಗಳಾಗಿ ಹೊರ ಹೊಮ್ಮಿದ ಡಾ. ಸಿ.ಜೆ.ಕೇಶವ್, ಡಾ.ಮೇಹಾ ಜೋಶಿಪುರ, ಡಾ.ಎನ್.ವಿನುತಾ, ಡಾ.ಪ್ರತೀಕ್ ಗೌಡ, ಡಾ.ಆರ್.ಸುಶ್ಮಿತ ಮತ್ತು ಡಾ.ಯು. ಸಹನಾ ಅವರಿಗೆ ಪದವಿ, ಪಾರಿತೋಷಕ ಮತ್ತು ವಿವಿಧ ವಿಷಯಗಳಲ್ಲಿ ಆರ್.ಜಿ.ಯು.ಹೆಚ್.ಎಸ್ ರಾಜ್ಯಮಟ್ಟದ ಶ್ರೇಣಿಗಳನ್ನು ಪಡೆದ ವಿದ್ಯಾರ್ಥಿಗಳು ಹಾಗೂ ಕ್ರಿಕೆಟ್, ವಾಲಿಬಾಲ್, ಥ್ರೋಬಾಲ್ ಸೇರಿದಂತೆ ಕ್ರೀಡಾ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

ಬೆಂಗಳೂರಿನ ವೈದ್ಯಕೀಯ ಶಿಕ್ಷಣ ನಿರ್ದೇಶಕ ಡಾ.ಬಿ.ಎಲ್.ಸುಜಾತ ರಾಥೋಡ್ ಉದ್ಘಾಟಿಸಿ ತಂದೆ–ತಾಯಿ ಪೋಷಕರ ಒತ್ತಾಸೆ ಮೇರೆಗೆ ವೈದ್ಯಕೀಯ ಪದವಿ ಪಡೆದಿರುವ ನಿಮ್ಮ ಉದ್ದೇಶ, ಕನಸು ಸಾಕಾರಗೊಳ್ಳಲಿ. ವೈದ್ಯಕೀಯ ಸೇವೆಗೆ ಸಂಪೂರ್ಣವಾಗಿ ಸಮರ್ಪಿಸಿಕೊಂಡು ಜೀವನ ಸಾರ್ಥಕಪಡಿಸಿಕೊಳ್ಳಬೇಕೆಂದು ತಿಳಿಸಿದರು.

ಕುಲಪತಿ ಪ್ರೊ.ಎಂ.ಆರ್. ಗಂಗಾಧರ್ ಮಾತನಾಡಿ ಬಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಹಾಗೂ ಕಾಡಂಚಿನ ಪ್ರದೇಶಗಳಲ್ಲಿ ಆರೋಗ್ಯ ಸೇವೆ ನೀಡಲು ಮುಂದಾಗಬೇಕು. ವೈದ್ಯರೆಂದ ಮೇಲೆ ಸೇವಾವದಿಯಲ್ಲಿ ಮಾನಸಿಕ, ದೈಹಿಕ ಒತ್ತಡ ಸಹಜ. ಅದನ್ನು ಜವಾಬ್ದಾರಿಯಿಂದ ನಿಭಾಯಿಸಿ ವೃತ್ತಿಯಲ್ಲಿ ಮಾನವೀಯತೆ ಮೈಗೂಡಿಸಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ನಿರ್ದೇಶಕ ಡಾ.ಹೆಚ್.ಜಿ.ಮಂಜುನಾಥ್ ಮಾತನಾಡಿ ವೈದ್ಯಕೀಯ ಪದವಿ ಪಡೆದ ನಿಮ್ಮ ಸೇವೆಯ ಹೊಸ ಅಧ್ಯಾಯ ಇಂದಿನಿಂದ ಆರಂಭವಾಗಲಿದೆ. ಪ್ರತಿಯೊಬ್ಬರಿಗೂ ಆರೋಗ್ಯವೇ ಭಾಗ್ಯವಾಗಿದೆ. ದೇಶಕ್ಕೆ ಮಾದರಿಯಾಗುವಂತಹ ಆರೋಗ್ಯ ಸೇವೆ ನೀಡಿಕೆಗೆ ಮುಂದಾಗಬೇಕು ಎಂದು ಸಲಹೆ ಮಾಡಿದರು. ಇದೇ ವೇಳೆ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ (ಸಿಮ್ಸ್) ಕಾಲೇಜಿನ ಡಾ. ಪ್ರದೀಪ್ ಅವರು ನೂತನ ವೈದ್ಯರಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ಮುಖ್ಯ ಆಡಳಿತಾಧಿಕಾರಿ ನಂಜುಂಡೇಗೌಡ, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ. ಕೆ.ಆರ್. ಮಹೇಶ, ಅರ್ಥೋಪೆಡಿಕ್ ವಿಭಾಗದ ಮುಖ್ಯಸ್ಥ ಡಾ.ಮಾರುತಿ, ವಿವಿಧ ವಿಭಾಗಗಳ ಮುಖ್ಯಸ್ಥ ಡಾ.ರಾಜೇಶ್, ಡಾ.ದರ್ಶನ್, ಡಾ.ರಮೇಶ್, ಡಾ.ನವೀನ್, ಡಾ.ಮಹಮ್ಮದ್ ಶರೀಫ್, ಡಾ.ಪ್ರಭಾ, ಡಾ.ಅಭಿಷೇಕ್, ಡಾ.ತೃಪ್ತಿ, ಡಾ.ಚಂದ್ರ ಕಲಾ, ಡಾ.ದಮಯಂತಿ ಉಪಸ್ಥಿತರಿದ್ದರು.

ವಕೀಲ ಕೃಷ್ಣ ಮೇಲೆ ಮಾರಣಾಂತಿಕ ಹಲ್ಲೆ: ಆರೋಪಿಗಳ ಬಂಧನಕ್ಕೆ ಪ್ರತಿಭಟನೆ

ಯಳಂದೂರು, ಏ.29– ತಾಲೂಕಿನ ಅಂಬಳೆ ಗ್ರಾಮದಲ್ಲಿ ತಾಲೂಕು ವಕೀಲರ ಸಂಘದ ಮಾಜಿ ಅಧ್ಯಕ್ಷ ಕೃಷ್ಣರ ಮೇಲೆ ಹಲ್ಲೆ ನಡೆಸಿರುವ ಆರೋಪಿಗಳನ್ನು ಕೂಡಲೇ ಬಂಧಿಸುವಂತೆ ಒತ್ತಾಯಿಸಿ ವಕೀಲರ ಸಂಘದ ಸದಸ್ಯರು ನ್ಯಾಯಾಲಯದ ಕಲಾಪಗಳಿಂದ ದೂರವಿದ್ದು ಮೌನ ಪ್ರತಿಭಟನೆ ನಡೆಸಿದರು.

ಮನೆ ಕಟ್ಟುವ ವಿಚಾರವಾಗಿ ಕೋರ್ಟಿನಿಂದ ಇಂಜೆಕ್ಷನ್ ಆರ್ಡರ್ ಇದ್ದರೂ ಸಹ ಕೃಷ್ಣರವರ ಅಣ್ಣ ಗೋವಿಂದ, ಆತನ ಮಡದಿ ಜಯಮ್ಮ ಮತ್ತು ಮಗ ಶ್ರೀನಿವಾಸ ಮೂವರು ಸೇರಿಕೊಂಡು ಏ.25 ರಂದು ಕೃಷ್ಣ ಹಾಗೂ ಇವರ ಭಾವಮೈದ ರವಿ ಎಂಬುವರ ಮೇಲೆ ಮಚ್ಚು ಹಾಗೂ ಕಬ್ಬಿಣದ ರಾಡ್‌ಗಳ ಮೇಲೆ ಮಾರಣಾಂತಿಕ ದಾಳಿ ನಡೆಸಿದ್ದಾರೆ ಎಂದು ವಕೀಲರ ಸಂಘದ ಕೆ.ಬಿ. ಶಶಿಧರ ತಿಳಿಸಿದರು. ಇಬ್ಬರಿಗೂ ತೀವ್ರ ಗಾಯಗಳಾಗಿದ್ದು ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಘಟನೆ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದರೂ ಸಹ ಈವರೆಗೂ ಹಲ್ಲೆಕೋರರನ್ನು ಬಂಧಿಸಿಲ್ಲವೆಂದು ಆರೋಪಿಸಿ, ಕೂಡಲೇ ಪೊಲೀಸರು ಈ ಮೂವರನ್ನು ಬಂಧಿಸಿ ಶೀಘ್ರ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು.

ಸಂಘದ ಅಧ್ಯಕ್ಷ ರಾಜಣ್ಣ, ಸದಸ್ಯರಾದ ಸಿ. ಸಿದ್ದರಾಜು, ಸಿ.ಎಂ. ಮಹದೇವಸ್ವಾಮಿ, ಎಂ. ನಾಗರಾಜು, ಕುಮಾರಸ್ವಾಮಿ, ಮಾದೇಶ್, ಎಂ.ಮಾದೇಶ್, ಗೌಡಹಳ್ಳಿ ಮಹೇಶ್, ಜೆ.ಎನ್. ಸಂಪತ್ತು, ಚಂದನ, ಉಮಾ, ಮೇಘಾ, ರವೀಶ್, ಅಶ್ವಿನ್ ಶ್ರೀನಿವಾಸಮೂರ್ತಿ, ಕಾಂತರಾಜು ಮೊದಲಾದವರು ಇದ್ದರು.

ಕೃಷಿ ಪತ್ತಿನ ಸಹಕಾರಿ ಸಂಘಕ್ಕೆ ಆಯ್ಕೆ



ಕೊಳ್ಳೇಗಾಲ: ಕಸಬಾ ಕೃಷಿ ಪತ್ತಿನ ಸಹಕಾರಿ ಸಂಘಕ್ಕೆ ನೂತನವಾಗಿ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಹಿಂದುಳಿದ ವರ್ಗ ಎ ಕ್ಷೇತ್ರದಿಂದ ಸ್ಪಧಿಸಿದ್ದ ಮಧುವನಹಳ್ಳಿ ರಮೇಶ್, ಸಾಮಾನ್ಯ ವರ್ಗದಿಂದ ಮಹದೇವಸ್ವಾಮಿ 2ನೇ ಬಾರಿಗೆ ಪುನರಾಯ್ಕೆಯಾಗಿದ್ದಾರೆ. ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿದ್ದ ಮಹದೇವಸ್ವಾಮಿ ಅಲಿಯಾಸ್ ಸುರೇಶ್, ಎಂ.ಶೇಖರ್, ಎಸ್.ರವಿಕುಮಾರ್, ಮುಳ್ಳೂರು ಇಂದ್ರ, ಪುಟ್ಟಸ್ವಾಮಿ ಅಧಿಕ ಮತ ಪಡೆದು ಗೆಲುವು ಸಾಧಿಸಿದ್ದಾರೆ. ಬಿಸಿಎಂಬಿ ಕ್ಷೇತ್ರದಿಂದ ಕಣದಲ್ಲಿದ್ದ ಸಿ.ಬಸವರಾಜು ಅಧಿಕ ಮತಗಳೊಂದಿಗೆ ಗೆಲುವು ತಮ್ಮದಾಗಿಸಿಕೊಂಡಿದ್ದಾರೆ.

ಮೈಸೂರಲ್ಲಿ ಮಳೆ ಅಬ್ಬರ

● ರಸ್ತೆಯಲ್ಲಿ ಮಳೆ ನೀರು ಹರಿದು ವಾಹನ ಸಂಚಾರ ಅಸ್ತವ್ಯಸ್ತ ● ಭಾರಿ ಗಾಳಿ, ಗುಡುಗು, ಮಿಂಚಿನ ಆರ್ಭಟ



ಪಾರ್ಕಿಂಗ್ ಸ್ಥಳದಲ್ಲಿ ನಿಂತಿದ್ದ ಕಾರಿನ ಮೇಲೆ ಮರದ ರೆಂಬೆ ಬಿದ್ದು, ಕಾರು ಜಖಂಗೊಂಡಿದೆ.

ಮೈಸೂರು, ಏ.29(ಎಸ್‌ಪಿಎನ್)– ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಮಂಗಳವಾರ ಗುಡುಗು ಸಹಿತ ಧಾರಾಕಾರ ಮಳೆ ಸುರಿದಿದೆ. ವಾಹನ ಸಂಚಾರ ಅಸ್ತವ್ಯಸ್ತವಾಯಿತು.

ಮೈಸೂರಿನ ವಿವಿ ಪುರಂ ಟೆಂಪಲ್ ರಸ್ತೆಯ ಪಾರ್ಕಿಂಗ್ ಸ್ಥಳದಲ್ಲಿ ನಿಂತಿದ್ದ ಕಾರಿನ (ಕೆಎ.09– ಝಡ್ 6602) ಮೇಲೆ ಮರದ ರೆಂಬೆ ಬಿದ್ದು, ಕಾರು ಜಖಂಗೊಂಡಿದೆ. ಯಾದವಗಿರಿಯ ಶ್ರೀರಾಮಕೃಷ್ಣಾಶ್ರಮದ ಬಳಿಯೂ ಮರದ ರೆಂಬೆಯೊಂದು ರಸ್ತೆಗೆ ಬಿದ್ದಿದ್ದು, ಮೈಸೂರು ನಗರಪಾಲಿಕೆ ಸಿಬ್ಬಂದಿ ಇದನ್ನು ತೆರವುಗೊಳಿಸಿ, ಸಾರ್ವಜನಿಕರ ಓಡಾಟಕ್ಕೆ ಅನುವು ಮಾಡಿಕೊಟ್ಟಿದ್ದಾರೆ.

ಅಲ್ಲದೆ, ಮೈಸೂರು ನಗರದ ಹೃದಯ ಭಾಗವಾದ ಅರಮನೆ ಸುತ್ತಮುತ್ತ, ಸರಸ್ವತಿಪುರಂ, ರಾಮಕೃಷ್ಣನಗರ, ಆಲನಹಳ್ಳಿ, ಕುವೆಂಪುನಗರ, ವಿದ್ಯಾರಣ್ಯಪುರಂ, ಸಿದ್ಧಾರ್ಥನಗರ, ಎನ್.ಆರ್.ಮೊಹಲ್ಲಾ ಸೇರಿದಂತೆ ನಗರದ ಎಲ್ಲಾ ಬಡಾವಣೆಗಳಲ್ಲಿ ಗುಡುಗು ಸಹಿತ ಧಾರಾಕಾರ ಮಳೆ ಸುರಿದು ಅಲ್ಲಲ್ಲಿ ಯುಜಿಡಿ ನೀರು ಮಿಶ್ರಿತ ಮಳೆ ನೀರು ರಸ್ತೆಯಲ್ಲಿ ಹರಿದಿದೆ.

ನ್ಯೂ ಸಯ್ಯಾಜಿರಾವ್ ರಸ್ತೆಯ ಕಿವುಡ ಮತ್ತು ಮೂಗರ ಶಾಲೆ ಬಳಿ ಮಳೆ ನೀರು ಚರಂಡಿ ಬಂದ್ ಆಗಿ ಆ ನೀರು ರಸ್ತೆಯಲ್ಲಿ ಹರಿದಿದೆ. ಅಂತೆಯೇ ಜೆ.ಪಿ.ನಗರದ 11ನೇ ಮುಖ್ಯರಸ್ತೆಯ ಶ್ರೀರಾಮಮಂದಿರ ಬಳಿ ವಿದ್ಯುತ್ ತಂತಿ ತುಂಡಾಗಿ ನೆಲಕ್ಕೆ ಉರುಳಿ ಬಿದ್ದಿದ್ದು, ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಸೆಸ್ಕ್ ಸಿಬ್ಬಂದಿ ದುರಸ್ತಿಗೊಳಿಸಿದ್ದಾರೆ. ಮಂಗಳವಾರ ರಾತ್ರಿ 8.30ಕ್ಕೆ ಆರಂಭವಾದ ಮಳೆ 9.30ರವರೆಗೆ ಗುಡುಗು, ಮಿಂಚು ಸಹಿತ ಧಾರಾಕಾರವಾಗಿ ಸುರಿಯಿತು. ಅಲ್ಲದೆ, ನಗರದ ಹಲವೆಡೆ ಮರದ ರೆಂಬೆಗಳು ವಿದ್ಯುತ್ ಲೈನ್‌ಗಳ ಮೇಲೆ ಬಿದ್ದು, ಕೆಲವೆಡೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ ಎಂದು ಸೆಸ್ಕ್ ಅಧಿಕಾರಿಗಳು ಪತ್ರಿಕೆಗೆ ತಿಳಿಸಿದ್ದಾರೆ.

ವಾರಸುದಾರರಲ್ಲದವರಿಗೆ ಅಕ್ರಮವಾಗಿ ಮುಡಾದ ತುಂಡು ಜಾಗ ಸಮೇತ ಮನೆ ಪರಭಾರೆ

ಮುಡಾ ವಿಶೇಷ ತಹಸೀಲ್ದಾರ್ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸ್ಸು

ಮೈಸೂರು, ಏ. 29(ಆರ್‌ಕೆ)– ಮೃತ ಆಸ್ತಿ ಮಾಲೀಕರ ವಾರಸುದಾರರಲ್ಲದವರಿಗೆ ಅಕ್ರಮವಾಗಿ ಪೌತಿ ಖಾತೆ ಮಾಡಿ, ಅಕ್ರಮವಾಗಿ ಮನೆ ಮತ್ತು ಅದಕ್ಕೆ ಹೊಂದಿಕೊಂಡಂತೆ ಮುಡಾಗೆ ಸೇರಿದ ತುಂಡು ಜಾಗಕ್ಕೆ ಕ್ರಯಪತ್ರ ನೀಡಿದ್ದ ಆರೋಪದ ಮೇರೆಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ವಿಶೇಷ ತಹಸೀಲ್ದಾರ್ ಕೆ.ವಿ.ರಾಜಶೇಖರ್ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಮುಡಾ ಆಯುಕ್ತ ಎ.ಎನ್.ರಘುನಂದನ್, ನಗರಾಭಿವೃದ್ಧಿ ಪ್ರಾಧಿಕಾರಗಳು ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯಕ್ಕೆ ಏಪ್ರಿಲ್ 17ರಂದು ಪತ್ರ ಬರೆದು, ಶಿಫಾರಸ್ಸು ಮಾಡಿದ್ದಾರೆ.

ಮೈಸೂರಿನ ಯಾದವಗಿರಿ ನಿವಾಸಿಯಾದ ಆರ್‌ಟಿಐ ಕಾರ್ಯಕರ್ತ ಬಿ.ಎನ್. ನಾಗೇಂದ್ರ ಸಲ್ಲಿಸಿದ್ದ ದೂರಿನ ಮೇರೆಗೆ ಪರಿಶೀಲನೆ ನಡೆಸಿದಾಗ, ಮೈಸೂರಿನ ಗೋಕುಲಂ 3ನೇ ಹಂತದ ಮಾಡೆಲ್ ಹೌಸ್ ಸಂಖ್ಯೆ 867, 30x40 ಅಳತೆಯ ನಿವೇಶನ, 1982ರ ನವೆಂಬರ್ 2ರಂದು ಅಂದಿನ ಸಿಐಟಿಬಿಯಿಂದ ವಿಲಿಯಂ ಶಾರದಾ ಜೋಸೆಫ್ ಎಂಬುವರಿಗೆ ಮಂಜೂರು ಮಾಡಿ, ಕರಾರು ಪತ್ರವನ್ನು ನೀಡಲಾಗಿತ್ತು.

1983ರ ಸೆಪ್ಟೆಂಬರ್ 3ರಂದು ವಿಲಿಯನ್ ಶಾರದಾ ಜೋಸೆಫ್ ಮೃತರಾಗಿದ್ದು, ಸದರಿ ಸ್ವತ್ತು 2024ರ ಏಪ್ರಿಲ್ 6 ರವರೆಗೂ ಯಾರಿಗೂ ವರ್ಗಾವಣೆಯಾಗಿರಲಿಲ್ಲ. ಆದರೆ, ವಾರಸುದಾರರಲ್ಲದ, ನೆವಿಲ್ ಮಾರ್ಕಸ್ ಜೋಸೆಫ್ ಎಂಬುವರ ಹೆಸರಿಗೆ ವಂಶವೃಕ್ಷ ಸೇರಿದಂತೆ ಯಾವುದೇ ದಾಖಲೆಗಳನ್ನೂ ಪಡೆಯದೇ ಪೌತಿ ಖಾತೆ ವರ್ಗಾವಣೆ ಮಾಡಿರುವುದಲ್ಲದೆ, ಈ ಆಸ್ತಿಗೆ ಹೊಂದಿಕೊಂಡಂತಿರುವ ಮುಡಾಗೆ ಸೇರಿದ ತುಂಡು ಜಾಗವನ್ನೂ ಮಂಜೂರು ಮಾಡಿ ಹಕ್ಕುಪತ್ರವನ್ನು ನೀಡಿರುವುದು ಅಕ್ರಮ ಎಂದು ಆಯುಕ್ತರು ಪತ್ರದಲ್ಲಿ ತಿಳಿಸಿದ್ದಾರೆ.

ಮುಡಾದಲ್ಲಿ ಕ್ರಯಪತ್ರ ಹಾಗೂ ಅನುಮೋದನೆ ನೀಡುವ ಅಧಿಕಾರವನ್ನು ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿ ಆದೇಶಿಸಲಾಗಿದೆಯಾದ್ದೂ, ಕಾರ್ಯದರ್ಶಿಗಳ ಅನುಮೋದನೆ ಪಡೆಯದೇ ಸದರಿ ಸ್ವತ್ತಿನ ತಿದ್ದುಪಡಿ ಕ್ರಯಪತ್ರವನ್ನು ವಿಶೇಷ ತಹಸೀಲ್ದಾರ್ ಕೆ.ವಿ.ರಾಜಶೇಖರ್, ಕಚೇರಿ ವ್ಯವಸ್ಥಾಪಕ ಸೋಮಸುಂದ್ರು ಅಕ್ರಮವಾಗಿ ನೀಡಿ ಅಧಿಕಾರ ದುರುಪಯೋಗಪಡಿಸಿಕೊಂಡಿರುವುದರಿಂದ ಅವರಿಬ್ಬರ ವಿರುದ್ಧ ಕ್ರಮ ಜರುಗಿಸುವಂತೆ ಮುಡಾ ಕಾರ್ಯದರ್ಶಿಗಳು ಆಯುಕ್ತರ ಕೋರಿದ್ದರು.

ಅದರನ್ವಯ ಪರಿಶೀಲಿಸಲಾಗಿ ಸದರಿ ಸ್ವತ್ತಿನ ಪೌತಿ ಖಾತೆ ವರ್ಗಾವಣೆ, ಕ್ರಯಪತ್ರ ತಿದ್ದುಪಡಿ ಮಾಡಿಕೊಟ್ಟಿರುವುದು ದೃಢಪಟ್ಟ ಹಿನ್ನೆಲೆಯಲ್ಲಿ ಈಗಾಗಲೇ ಸೋಮಸುಂದ್ರು ಅವರನ್ನು ಅಮಾನತುಗೊಳಿಸಿದ್ದು, ಗ್ರೂಪ್ 'ಬಿ' ಅಧಿಕಾರಿಯಾದ ರಾಜಶೇಖರ್ ವಿರುದ್ಧ ಸೂಕ್ತ ಕ್ರಮ ವಹಿಸುವಂತೆ ಮುಡಾ ಆಯುಕ್ತರು ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿ ಶಿಫಾರಸ್ಸು ಮಾಡಿದ್ದಾರೆ.

ಇಂದೂ ತೆರಿಗೆ ಪಾವತಿಸಬಹುದು!

ಮೈಸೂರು, ಏ.29(ಎಸ್‌ಪಿಎನ್)– ಮೈಸೂರು ನಗರಪಾಲಿಕೆ ವ್ಯಾಪ್ತಿಯ ಎಲ್ಲಾ ವಲಯ ಕಚೇರಿಗಳಲ್ಲಿ ಏ.30ರಂದು ಬಸವ ಜಯಂತಿ ಪ್ರಯುಕ್ತ ರಜೆಯಿದ್ದರೂ ನಗದು ಕೌಂಟರ್‌ಗಳನ್ನು ತೆರೆಯಲಾಗುವುದು ಎಂದು ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸ್ವತ್ತಿನ ಮಾಲೀಕರು ಆಸ್ತಿ ತೆರಿಗೆ ಪಾವತಿಸಲು ಅನುಕೂಲವಾಗುವ ದೃಷ್ಟಿಯಿಂದ ಏ.30 ರಜೆದಿನವಾಗಿದ್ದರೂ ನಗದು ಕೌಂಟರ್ ತೆರೆಯಲು ಸೂಚಿಸಲಾಗಿದೆ. ಸಾರ್ವಜನಿಕರು ಇದರ ಸದುಪಯೋಗಪಡಿಸಿಕೊಳ್ಳುವಂತೆ ಆಯುಕ್ತರು ಮನವಿ ಮಾಡಿದ್ದಾರೆ.

ಮೈಸೂರು ವಕೀಲರ ಸಂಘದಿಂದ ಅಂಬೇಡ್ಕರ್ ಜಯಂತಿ ಆಚರಣೆ

ಡಾ.ಅಂಬೇಡ್ಕರ್, ಭಾರತದ ಸಂವಿಧಾನ ಒಂದೇ ನಾಣ್ಯದ ಎರಡು ಮುಖ

ಹೈಕೋರ್ಟ್ ನ್ಯಾಯಮೂರ್ತಿ ಕೆ.ಸೋಮಶೇಖರ್ ಬಣ್ಣನೆ

ಮೈಸೂರು,ಏ.29(ಪಿಎಂ)– ಮಹಾನ್ ಮಾನವತಾವಾದಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಭಾರತದ ಸಂವಿಧಾನವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಕೆ.ಸೋಮಶೇಖರ್ ಬಣ್ಣಿಸಿದರು.

ಮೈಸೂರಿನ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಮೈಸೂರು ವಕೀಲರ ಸಂಘದ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತ್ಯುತ್ಸವ ಕಾರ್ಯಕ್ರಮವನ್ನು ಅಂಬೇಡ್ಕರ್ ಅವರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಅಂಬೇಡ್ಕರ್ ಅವರು ಈ ಜಗತ್ತಿನ ಮಹಾನ್ ವ್ಯಕ್ತಿತ್ವ, ಅವರಿಗೆ ಸರಿಸಮಾನರಾಗಿ ಬೇರೆ ಯಾರನ್ನೂ ಹೋಲಿಸಲು ಸಾಧ್ಯವಿಲ್ಲ. ಬುದ್ಧನ ವಿಚಾರಧಾರೆಯನ್ನು ಅರ್ಥ ಮಾಡಿಕೊಂಡಂತಹ ಡಾ.ಬಾಬಾ ಸಾಹೇಬರು ಬೌದ್ಧ ಧರ್ಮಕ್ಕೆ ಪರಿವರ್ತನೆ ಹೊಂದುತ್ತಾರೆ. ಇದನ್ನು ನಾನು ಮತಾಂತರ ಎಂದು ಹೇಳುವುದಿಲ್ಲ ಎಂದರು.

ಡಾ.ಅಂಬೇಡ್ಕರ್ ಅವರು ತಮ್ಮ ಜೀವನಪೂರ್ತಿ ಹೋರಾಟ ಮತ್ತು ಪರಿಶ್ರಮದ ಮೂಲಕ ಎಲ್ಲಾ ವರ್ಗದವರಿಗೆ ಸಂವಿಧಾನದಲ್ಲಿ ಹಕ್ಕುಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಅಂಬೇಡ್ಕರ್ ಅವರ ಸಂದೇಶದಂತೆ ಶಿಕ್ಷಣಕ್ಕೆ ಸಮಾಜ ಹೆಚ್ಚು ಒತ್ತು ನೀಡಬೇಕಿದೆ. ಜೊತೆಗೆ ಗುಣಮಟ್ಟದ ಶಿಕ್ಷಣ ನೀಡುವುದು ಮುಖ್ಯ. ಶಿಕ್ಷಣ ಪಡೆದಷ್ಟು ನಮ್ಮ ಜ್ಞಾನ ವಿಸ್ತಾರಗೊಳ್ಳಲಿದೆ. ಇದರಿಂದ ನಮ್ಮ ಸಮಸ್ಯೆಗಳಿಗೆ ನಾವೇ ಪರಿಹಾರ ಕಂಡುಕೊಳ್ಳುವ ಜಾಣ್ಮೆ ಬರಲಿದೆ. ಆದ್ದರಿಂದ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಂದು ಶಿಕ್ಷಣದ ಮಹತ್ವ ಅರಿಯಬೇಕು ಎಂದು ಸಲಹೆ ನೀಡಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ ಮಾತನಾಡಿ, ಅಂಬೇಡ್ಕರ್ ತಮ್ಮ ಬಾಲ್ಯದಿಂದಲೇ ಜಾತಿ ಕಾರಣಕ್ಕೆ ಅನೇಕ ಸವಾಲು–ಸಂಕಷ್ಟಗಳನ್ನು ಎದುರಿಸಿದರು. ಈ ಎಲ್ಲದರ ನಡುವೆಯೂ ಅವರು ಸಂವಿಧಾನ ಮಾತ್ರವಲ್ಲದೆ, ಮಹತ್ವದ ಕೃತಿಗಳನ್ನೂ ಸಮಾಜಕ್ಕೆ ಕೊಡುಗೆಯಾಗಿ ನೀಡಿದ್ದಾರೆ ಎಂದು ಹೇಳಿದರು.

ಮುಖ್ಯ ಭಾಷಣ ಮಾಡಿದ ಅಂಬೇಡ್ಕರ್ ವಾದಿಗಳೂ ಆದ ಬೆಂಗಳೂರು ಕ್ರೈಸ್ಟ್ ಕಾಲೇಜ್ ಪ್ರಾಧ್ಯಾಪಕ ಡಾ.ಹ.ರಾ.ಮಹೇಶ್, ಅಂಬೇಡ್ಕರ್ ಅವರನ್ನು ಅನುಸರಣೆ ಮಾಡುವವರು ಪರಸ್ಪರ ಭೇಟಿಯಾದಾಗ, 'ಜೈ ಭೀಮ್' ಎಂದು ಪರಸ್ಪರ ಹೇಳಿಕೊಳ್ಳುತ್ತೇವೆ. ಜೈ ಭೀಮ್ ಎಂಬುದು ಕೇವಲ ಒಂದು ಹೆಸರಲ್ಲ. ಅದೊಂದು ಸಿದ್ಧಾಂತ. ಸ್ವಾತಂತ್ರ್ಯ, ಸಮಾನತೆ, ಸಹೋದರತೆ ಮತ್ತು ನ್ಯಾಯವನ್ನು ಹೊಂದಿರುವ ಸಂವಿಧಾನ ಆಧಾರ ಸ್ತಂಭಗಳನ್ನು ನಾವು ಒಪ್ಪಿ ಗೌರವಿಸಿ, ಸ್ಥಾಪನೆ ಮಾಡುತ್ತೇವೆ ಎಂಬ ಭೀಮ ಮಾರ್ಗವೇ ಅದಾಗಿದೆ ಎಂದು ವಿವರಿಸಿದರು.

ಅಂಬೇಡ್ಕರ್ ಅವರನ್ನು ಒಂದು ಹಂತಕ್ಕೆ ಕೇವಲ ಒಂದು ಜಾತಿಗೆ ಸೀಮಿತ ಮಾಡುವ ಹುನ್ನಾರವು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿತ್ತು. ಆದರೆ ಈಗ ಅಂಬೇಡ್ಕರ್ ಅವರ ಹೋರಾಟ ಹಾಗೂ ಅವರು ಸಂವಿಧಾನದಲ್ಲಿ ಅಳವಡಿಸಿರುವ ಮೌಲ್ಯಗಳು ಪ್ರತಿಯೊಂದು ಜಾತಿ–ಜನಾಂಗಕ್ಕೂ ಅರ್ಥವಾಗಿ ಬಾಬಾ ಸಾಹೇಬರು ಅವರ ಹೃದಯಕ್ಕೆ ಇಳಿಯುತ್ತಿದ್ದಾರೆ. ಹಾಗಾಗಿ ಪ್ರಜಾಪ್ರಭುತ್ವ ಮೌಲ್ಯಗಳು ದಿನದಿಂದ ದಿನಕ್ಕೆ ಗಟ್ಟಿಗೊಳ್ಳುತ್ತಿವೆ. ಬಾಬಾ ಸಾಹೇಬರನ್ನು ಜಾತಿ ಸಂಕೋಲೆಯಿಂದ ಬಿಡಿಸಿ ಎಲ್ಲರ ಅಂಬೇಡ್ಕರ್ ಮಾಡುವಂತಹ ಜವಾಬ್ದಾರಿಯನ್ನು ಎಲ್ಲಾ ವಿದ್ಯಾವಂತರು ಈಗ ವಹಿಸಿಕೊಂಡಿದ್ದಾರೆ ಎಂದರು.


ಅಂಬೇಡ್ಕರ್ ಅವರನ್ನು ದಲಿತರ ನಾಯಕರು, ಅವರಿಗಾಗಿ ಹೋರಾಟ ಮಾಡಿದವರು ಎಂಬ ರೀತಿಯಲ್ಲಿ ನೂರೆಂಟು ಪುಸ್ತಕಗಳು ಬಂದಿದ್ದು, ಸಾವಿರಾರು ಭಾಷಣಗಳೂ ಆಗಿವೆ. ಆದರೆ ವಾಸ್ತವವಾಗಿ ಬಾಬಾ ಸಾಹೇಬರು ಈ ದೇಶದ ಕಟ್ಟಕಡೆಯ ವ್ಯಕ್ತಿಯಿಂದ ಪ್ರತಿಯೊಬ್ಬರಿಗಾಗಿ ಹೋರಾಟ ಮಾಡಿದರು. ಇಂತಹ ವಿಚಾರಗಳು ಈಗ ಜನಮಾನಸಕ್ಕೆ ತಲುಪುವಂತಾಗಿದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ವಕೀಲರ ಪರಿಷತ್ ಸದಸ್ಯ ಬಿ.ಆರ್.ಚಂದ್ರಮೌಳಿ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ್, ಕಾರ್ಯದರ್ಶಿ ಎ.ಜಿ.ಸುಧೀರ್, ಜಂಟಿ ಕಾರ್ಯದರ್ಶಿ ಕೆ.ಆರ್.ಚರಣ್‌ರಾಜ್, ಖಜಾಂಚಿ ಹೆಚ್.ಬಿ.ಭರತ್, ಮಹಿಳಾ ಜಂಟಿ ಕಾರ್ಯದರ್ಶಿ ಬಿ.ವಿ.ವಿನೋದ ಸೇರಿದಂತೆ ನ್ಯಾಯಾಧೀಶರು, ವಕೀಲರು ಮತ್ತಿತರರು ಪಾಲ್ಗೊಂಡಿದ್ದರು.



ಮೈಸೂರಿನ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತ್ಯುತ್ಸವ ಕಾರ್ಯಕ್ರಮವನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಕೆ.ಸೋಮಶೇಖರ್ ಉದ್ಘಾಟಿಸಿದರು.

ವಿ.ಶ್ರೀನಿವಾಸ್ ಪ್ರಸಾದ್ ಅವರ ಮೊದಲ ವರ್ಷದ ಪುಣ್ಯಸ್ಮರಣೆ



ಮಾಜಿ ಕೇಂದ್ರ ಸಚಿವರೂ ಆದ ದಿವಂಗತ ವಿ.ಶ್ರೀನಿವಾಸ್ ಪ್ರಸಾದ್ ಅವರ ಮೊದಲ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಭಾಗವಹಿಸಿದ್ದರು. ಈ ವೇಳೆ ಅಂಬೇಡ್ಕರ್ ಚಿಂತಕ ವಾದಿರಾಜ್, ಕೋಲಾರದ ಮಾಜಿ ಸಂಸದ ಮುನಿಸ್ವಾಮಿ, ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹಾದೇವಸ್ವಾಮಿ, ಮಾಜಿ ಉಪ ಮೇಯರ್ ವಿ.ಶೈಲೇಂದ್ರ, ಶ್ರೀನಿವಾಸ್ ಪ್ರಸಾದ್ ಅವರ ಧರ್ಮಪತ್ನಿ ಭಾಗ್ಯ ಪ್ರಸಾದ್, ಪುತ್ರಿ ಪ್ರತಿಮಾ ಪ್ರಸಾದ್, ಅಳಿಯಂದಿರಾದ ಡಾ.ಮೋಹನ್, ಮಾಜಿ ಶಾಸಕ ಹರ್ಷವರ್ಧನ್, ರಾಮಸ್ವಾಮಿ, ವೆಂಕಟರಾಜು, ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ರಾಕೇಶ್ ಭಟ್, ಮುಖಂಡರಾದ ಪ್ರತಾಪ್, ರಾಹುಲ್, ಮಹೇಶ್ ಇದ್ದರು.

ಬೆದರಿಕೆ ಕರೆ ಆರೋಪ: ಅವ್ವ ಮಾದೇಶ, ನಾಗು ವಿರುದ್ಧ ಪ್ರಕರಣ ದಾಖಲು

ಮೈಸೂರು, ಏ. 29(ಆರ್‌ಕೆ)– ಕಟ್ಟಡವೊಂದರಲ್ಲಿ ಫ್ರಾಂಚೈಸಿ ಪಡೆದು ಬ್ಯುಸಿನೆಸ್ ಮಾಡಲು ಇಂಟೀರಿಯರ್ ಡಿಸೈನ್ ಮಾಡುತ್ತಿದ್ದ ಉದ್ಯಮಿಯೊಬ್ಬರಿಗೆ 5 ಲಕ್ಷ ಹಣಕ್ಕೆ ಬೇಡಿಕೆ ಇಟ್ಟು ಬೆದರಿಕೆ ಒಡ್ಡಿರುವ ಆರೋಪದ ಮೇರೆಗೆ ಮಾಜಿ ಕಾರ್ಪೊರೇಟರ್ ಅವ್ವ ಮಾದೇಶ್ ಮತ್ತು ಸಹಚರ ನಾಗು ಎಂಬಾತನ ವಿರುದ್ಧ ಜಯಲಕ್ಷ್ಮೀಪುರಂ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಮೈಸೂರಿನ ಮಂಚೇಗೌಡನಕೊಪ್ಪಲು ನಿವಾಸಿ ಕೇಶವ ರೆಡ್ಡಿ ಅವರ ಮಗ ಕೃಷ್ಣಾಮಿ ರೆಡ್ಡಿ ಎಂಬುವರು ನೀಡಿದ ದೂರಿನನ್ವಯ ಏಪ್ರಿಲ್ 28ರಂದು ಜಯಲಕ್ಷ್ಮೀಪುರಂ ಠಾಣೆ ಪೊಲೀಸರು ಅವ್ವ ಮಾದೇಶ, ನಾಗು ಎಂಬುವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ 308(2), 3(5) ರೀತ್ಯಾ ಎಫ್‌ಐಆರ್ ದಾಖಲಿಸಿದ್ದಾರೆ.

ಗೋಕುಲಂ ಮುಖ್ಯ ರಸ್ತೆಯ ಕಟ್ಟಡದಲ್ಲಿ ಬರಿಷ್ಠಾ ಕೆಫೆ ಫ್ರಾಂಚೈಸಿ ಪಡೆದು ಬ್ಯುಸಿನೆಸ್ ಪ್ರಾರಂಭಿಸಲು ಅಗ್ರಿಮೆಂಟ್ ಮಾಡಿಕೊಂಡು ಇಂಟೀರಿಯರ್ ಡಿಸೈನಿಂಗ್ ಕೆಲಸ ಮಾಡುತ್ತಿರುವಾಗ ಜನವರಿ 24ರಂದು ಮಧ್ಯಾಹ್ನ ನಾಗು ಎಂಬಾತ ಬಿಲ್ಡಿಂಗ್ ಬಳಿಗೆ ಬಂದು ನಾನು ಅವ್ವ ಮಾದೇಶ ಕಡೆಯವನು. ಇಲ್ಲಿ ವ್ಯಾಪಾರ ಮಾಡಬೇಕೆಂದರೆ ನಮಗೆ 5 ಲಕ್ಷ ಹಣ ಕೊಡಬೇಕು. ಇಲ್ಲವಾದರೆ ನಿಮಗೆ ಬಿಸಿನೆಸ್ ಮಾಡಲು ಬಿಡುವುದಿಲ್ಲ ಎಂದು ತಿಳಿಸಿದನು ಎಂದು ದೂರುದಾರ ಹೇಳಿದ್ದಾರೆ.

> ನಾನು ಯಾವುದೇ ಇಂತಹ ಕೃತ್ಯಗಳನ್ನು ಮಾಡುತ್ತಿಲ್ಲ. ನನ್ನ ವಿರುದ್ಧ ದೂರು ಕೊಟ್ಟಿರುವವರು ಯಾರು ಎಂಬುದು ಗೊತ್ತಿಲ್ಲ. ಹೀಗಿರುವಾಗ ಅವರನ್ನು ಬೆದರಿಸಲು ಹೇಗೆ ಸಾಧ್ಯ. ನನ್ನ ವಿರುದ್ಧ ದೂರು ಬಂದಾಗ ಪೊಲೀಸರು ನನ್ನನ್ನು ಕರೆದು ವಿಚಾರಣೆ ಮಾಡಿ, ಅಗತ್ಯ ಬಿದ್ದರೆ ನನ್ನ ಮೊಬೈಲ್‌ನ ಕಾಲ್ ಡೀಟೇಲ್‌ಗಳನ್ನು ತೆಗೆದು ನಾನೇನಾದರೂ ದೂರುದಾರರಿಗೆ ಕರೆ ಮಾಡಿದ್ದೇನೆಯೇ? ಎಂಬುದರ ಬಗ್ಗೆ ಪರಿಶೀಲಿಸಿ, ಸತ್ಯಾಸತ್ಯತೆ ತಿಳಿಯಬಹುದಿತ್ತು. ಆದರೆ, ಅದೇನನ್ನೂ ಮಾಡದೇ ದೂರು ಬಂದ ತಕ್ಷಣ ಪೊಲೀಸರು ಎಫ್‌ಐಆರ್ ಮಾಡಿಬಿಟ್ಟಿದ್ದಾರೆ. ದೂರಿನಲ್ಲಿ ಉಲ್ಲೇಖವಾಗಿರುವ ನಾಗು ನನ್ನ ಬಳಿ ಕೆಲಸ ಮಾಡುತ್ತಿರುವುದು ನಿಜ. ಆದರೆ, ಅವನು ಕೂಡ ಯಾರಿಗೂ ಬೆದರಿಕೆ ಹಾಕುವವನಲ್ಲ.
>
> – ಅವ್ವ ಮಾದೇಶ್, ಮಾಜಿ ಕಾರ್ಪೊರೇಟರ್

ಹಣ ಹೊಂದಿಸಿಕೊಡುತ್ತೇನೆಂದು ಕಾಲಾವಕಾಶ ಕೇಳಿದರೂ, ಫೆಬ್ರವರಿ 2ರಂದು ನಾಗು ಎಂಬಾತ ಕರೆ ಮಾಡಿ ದುಡ್ಡು ಕೊಡುವವರೆಗೂ ಕೆಲಸ ನಿಲ್ಲಿಸು ಎಂದು ಧಮ್ಕಿ ಹಾಕಿದ. ನಂತರ ಈಗ್ಗೆ ಸುಮಾರು 1 ತಿಂಗಳಿಂದ ಕೆಲಸ ಮಾಡುತ್ತಿದ್ದೇನೆ. ಮತ್ತೆ ಏಪ್ರಿಲ್ 10ರಂದು ಬೆಳಗ್ಗೆ ಕರೆ ಮಾಡಿದ ವ್ಯಕ್ತಿ, ನಾನು ಅವ್ವ ಮಾದೇಶ ಮಾತನಾಡುತ್ತಿರುವುದು, ನಮ್ಮ ಮನೆಗೆ ಬಂದು ಮಾತನಾಡು ಎಂದು ಹೇಳಿದ್ದಾರೆ ಎಂದು ಕೃಷ್ಣಕಾಮಿ ರೆಡ್ಡಿ ದೂರಿನಲ್ಲಿ ತಿಳಿಸಿದ್ದಾರೆ.


ತದನಂತರ ನಿರಂತರವಾಗಿ ನನಗೆ ಆ ನಂಬರ್‌ನಿಂದ ಬೆದರಿಕೆ ಕರೆಗಳು ಬರುತ್ತಿದ್ದು, ಅವರ ವಿರುದ್ಧ ಕಾನೂನು ಕ್ರಮ ವಹಿಸಿ ತಮಗೆ ವ್ಯಾಪಾರ ಮಾಡಲು ಸೂಕ್ತ ರಕ್ಷಣೆ ನೀಡುವಂತೆ ದೂರುದಾರ ಮನವಿ ಮಡಿದ್ದಾರೆ.

ದೇಶದ 52ನೇ ಸಿಜೆಐ ಆಗಿ ನ್ಯಾಯಮೂರ್ತಿ ಬಿ.ಆರ್. ಗವಾಯಿ ನೇಮಕ



ನವದೆಹಲಿ: ನ್ಯಾಯಮೂರ್ತಿ ಭೂಷಣ್ ರಾಮಕೃಷ್ಣ ಗವಾಯಿ ಅವರನ್ನು ಭಾರತದ ನೂತನ ಮುಖ್ಯನ್ಯಾಯ ಮೂರ್ತಿಯಾಗಿ ನೇಮಕ ಮಾಡಿ ಕೇಂದ್ರ ಕಾನೂನು ಸಚಿವಾಲಯ ಮಂಗಳವಾರ ಅಧಿಸೂಚನೆ ಹೊರಡಿಸಿದೆ.

ಹಾಲಿ ಸಿಜೆಐ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ನಿವೃತ್ತಿಯಾದ ಒಂದು ದಿನದ ನಂತರ, ಅಂದರೆ ಮೇ 14 ರಂದು ದೇಶದ 52ನೇ ಸಿಜೆಐ ಆಗಿ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ಪ್ರಮಾಣವಚನ ಸ್ವೀಕರಿಸಲಿದ್ದಾರೆ.



ಹಸಿರು ನಮ್ಮ ಉಸಿರು

ಪಹಲ್ಗಾಮ್ ಉಗ್ರರ ಹತ್ಯಾಕಾಂಡ

ಸರ್ವಪಕ್ಷಗಳೂ ಕೇಂದ್ರದ ಬೆಂಬಲಕ್ಕೆ ನಿಂತಿರುವುದು ಸ್ವಾಗತಾರ್ಹ: ದೇವೇಗೌಡ

ಮೈಸೂರು, ಏ.29(ಎಸ್‌ಬಿಡಿ)– ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರು ನಡೆಸಿದ ಹೀನ ಕೃತ್ಯವನ್ನು ಸರ್ವಪಕ್ಷಗಳೂ ಖಂಡಿಸಿ, ಕೇಂದ್ರ ಸರ್ಕಾರದ ಬೆಂಬಲಕ್ಕೆ ನಿಂತಿರುವುದು ಸ್ವಾಗತಾರ್ಹ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹೇಳಿದರು.

ಮೈಸೂರಿನ ಮಾಜಿ ಸಚಿವ ಸಾ.ರಾ. ಮಹೇಶ್ ನಿವಾಸಕ್ಕೆ ಮಂಗಳವಾರ ಭೇಟಿ ನೀಡಿದ್ದ ವೇಳೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಪಹಲ್ಗಾಮ್ ಪ್ರವಾಸಿಗರ ಮೇಲೆ ದಾಳಿ ನಡೆಸಿ, ಹತ್ಯೆ ಮಾಡಿದ್ದು ಅತ್ಯಂತ ಹೀನ ಕೃತ್ಯ. ದೇಶದ ಜನ ಇದನ್ನು ಖಂಡಿಸಿದ್ದಾರೆ. ಈ ಬಗ್ಗೆ ಅನುಭವಿ ರಾಜಕಾರಣಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಉಗ್ರರನ್ನು ಹಿಮ್ಮೆಟ್ಟಿಸುವ ವಿಚಾರದಲ್ಲಿ ಐಕ್ಯತೆ ತೋರಬೇಕೆಂದು ಪ್ರಬುದ್ಧ ಹೇಳಿಕೆ ನೀಡಿದ್ದಾರೆ. ಐಎನ್‌ಡಿಐಎ ಒಕ್ಕೂಟವೂ ಶತ್ರುಗಳನ್ನು ಸರ್ವನಾಶ ಮಾಡುವವರೆಗೂ ಜೊತೆಯಲ್ಲಿರುತ್ತೇವೆ ಎಂದು ಕೇಂದ್ರ ಸರ್ಕಾರದ ಬೆಂಬಲಕ್ಕೆ ನಿಂತಿರುವುದು ಸ್ವಾಗತಾರ್ಹ ಎಂದರು.

ಬುದ್ಧಿಗೆ ಕೊರತೆ ಇಲ್ಲ: ಪ್ರಧಾನಿ ಮೋದಿ ಅವರು ವಿಶ್ವ ನಾಯಕರಾಗಿ ಬೆಳೆದಿದ್ದಾರೆ. ಪಹಲ್ಗಾಮ್‌ನಲ್ಲಿ ನಡೆದ ದುಷ್ಕೃತ್ಯವನ್ನು ಹಲವು ರಾಷ್ಟ್ರಗಳು ಖಂಡಿಸಿವೆ. ಅಮೆರಿಕಾ ಅಧ್ಯಕ್ಷರು ಸೇರಿದಂತೆ ಅನೇಕ ದೇಶಗಳ ಮುಖ್ಯಸ್ಥರು ಯಾವುದೇ ಸಂದರ್ಭದಲ್ಲೂ ಭಾರತದೊಂದಿಗೆ ನಿಲ್ಲುವುದಾಗಿ ಬಹಿರಂಗವಾಗಿ ಬೆಂಬಲ ಘೋಷಿಸಿದ್ದಾರೆ. ಸೇನೆ ಉಗ್ರರ ಶೋಧ ಮುಂದುವರೆಸಿದೆ. ಈ ಸಂಬಂಧ ಕೇಂದ್ರ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲಿದೆ. ನಾನು ಆ ಘಟನೆ ನಡೆದ ತಕ್ಷಣ ನನ್ನ ಅಭಿಪ್ರಾಯ ಹೇಳಿದ್ದೇನೆ. ನನ್ನ ಬುದ್ಧಿಗೆ ಕೊರತೆ ಇಲ್ಲ, ಆದರೆ ಆರೋಗ್ಯದ ಸಮಸ್ಯೆ ಇದೆ. ಹಾಗಾಗಿ ಪ್ರಮುಖ ವಿಚಾರಗಳ ಬಗ್ಗೆ ಪ್ರಧಾನಿಗಳಿಗೆ ಪತ್ರ ಬರೆಯುತ್ತೇನೆ ಎಂದು ತಿಳಿಸಿದರು.

ಬೆಳಗಾವಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಪೊಲೀಸ್ ಅಧಿಕಾರಿ ಮೇಲೆ ಕೈ ಎತ್ತಿದ ವಿಚಾರ ಪ್ರಸ್ತಾಪಿಸಿದಾಗ, ನಾನು ರಾಜ್ಯದ ರಾಜಕಾರಣದ ಬಗ್ಗೆ, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಬಗ್ಗೆ ಮಾತನಾಡುವುದಿಲ್ಲ. ನಮ್ಮದು ಒಂದು ಪ್ರಾದೇಶಿಕ ಪಕ್ಷ. ರಾಜ್ಯದ ಆಡಳಿತದ ಬಗ್ಗೆ ಪ್ರತಿನಿತ್ಯ ಪತ್ರಿಕೆ ಓದಿ ತಿಳಿದುಕೊಂಡಿದ್ದೇನೆ. ಅಸತ್ಯ ಹೇಳಲಿಕ್ಕೆ ಹೋಗುವುದಿಲ್ಲ ಎಂದರು.

ಕುಮಾರಸ್ವಾಮಿಗೂ ಆರೋಗ್ಯ ಸರಿ ಇರಲಿಲ್ಲ. ಈಗ ಸುಧಾರಿಸಿಕೊಂಡು ಬೆಳಗಿನ ಉಪಾಹಾರ ಸೇವಿಸಿದ್ದಾರೆ. ಪಕ್ಷದ ಸಂಘಟನೆ ವಿಚಾರವಾಗಿಯೂ ಮಾತನಾಡಿದ್ದಾರೆ. ಕುಮಾರಣ್ಣನ ನಾಯಕತ್ವಕ್ಕೆ ಭಗವಂತ ಎಷ್ಟು ದಿನ ಆಯಸ್ಸು ಕೊಡುತ್ತಾನೋ ಗೊತ್ತಿಲ್ಲ. ನಮ್ಮ ಪಕ್ಷಕ್ಕೆ ಅವರು ನಾಯಕರು. ನನ್ನ ಶಕ್ತಿ ಮೀರಿ ಅವರ ಕೈ ಬಲಪಡಿಸುವ ಕೆಲಸ ಮಾಡುತ್ತೇನೆ. ಮುಂದಿನ ದಿನಗಳಲ್ಲಿ ರಾಜ್ಯ ಪ್ರವಾಸ ಮಾಡುತ್ತೇನೆ. ನಿಖಿಲ್ ಕುಮಾರಸ್ವಾಮಿ ನಾಯಕತ್ವದಲ್ಲಿ ಯುವಕರ ಗುಂಪಿನ ಜೊತೆ ಚರ್ಚೆ ಮಾಡ್ತೇವೆ. ಮತ್ತೆ ಮೈಸೂರಿಗೆ ಬರುತ್ತೇನೆ ಎಂದು ತಿಳಿಸಿದರು.

ಸಾರಾ ಮಹೇಶ್, ತಮ್ಮ ಮಗನ ಮದುವೆಗೆ ಆಹ್ವಾನಿಸಿದ್ದರು. ಆದರೆ ಮದುವೆಗೆ ಬರುವಷ್ಟು ಶಕ್ತಿ ಇರಲಿಲ್ಲ. ಹಾಗಾಗಿ ಮುಂದಿನ ದಿನಗಳಲ್ಲಿ ಮಗ–ಸೊಸೆ ನೋಡಲು ಬರುತ್ತೇನೆ ಎಂದಿದ್ದೆ. ವಿಷ್ಣು ದೇವಸ್ಥಾನದಲ್ಲಿ ಮಂಗಳವಾರದ ಪೂಜೆ ಸಲ್ಲಿಸಿ, ಪ್ರಸಾದ ಸ್ವೀಕರಿಸಿ ಇಲ್ಲಿಗೆ ಬಂದಿದ್ದೇನೆ ಎಂದ ಹೆಚ್.ಡಿ.ದೇವೇಗೌಡರು, ಸಾ.ರಾ.ಮಹೇಶ್ ಪುತ್ರರಾದ ಎಸ್.ಎಂ.ಧನುಷ್, ಎಸ್.ಎಂ.ಜಯಂತ್ ಹಾಗೂ ಸೊಸೆಯಂದಿರನ್ನು ಆಶೀರ್ವದಿಸಿದರು. ಬಳಿಕ ಮುದ್ದೆ ಊಟ ಸವಿದರು.



ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಮಂಗಳವಾರ ಮಾಜಿ ಸಚಿವ ಸಾ.ರಾ.ಮಹೇಶ್ ನಿವಾಸಕ್ಕೆ ಭೇಟಿ ನೀಡಿ, ಎಸ್.ಎಂ.ಜಯಂತ್ ಹಾಗೂ ಎಂ.ಎಸ್.ವರ್ಷಾ ನವದಂಪತಿಗೆ ಆಶೀರ್ವದಿಸಿದರು.

ಹುಣಸೂರಲ್ಲಿ ಮಿನಿ ದಸರಾ ಮಾದರಿ ಅಂಬೇಡ್ಕರ್ ಜಯಂತಿ

● ಆನೆ ಮೇಲೆ ಅಂಬೇಡ್ಕರ್ ಭಾವಚಿತ್ರ ಮೆರವಣಿಗೆ ● ಗಮನ ಸೆಳೆದ ಸ್ಥಬ್ಧ ಚಿತ್ರಗಳು

ಹುಣಸೂರು, ಏ.29– ನಗರದಲ್ಲಿ ತಾಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತಿ ಇದೇ ಮೊದಲ ಬಾರಿಗೆ ಮಿನಿ ದಸರಾ ಮಾದರಿ ವಿಜೃಂಭಣೆಯಿಂದ ನಡೆಯಿತು.

ಮಂಗಳವಾರ ಬೆಳಗ್ಗೆ ಪ್ರವಾಸಿ ಮಂದಿರದ ಬಳಿಯಿಂದ ಹೊರಟ ಭವ್ಯ ಮೆರವಣಿಗೆಗೆ ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ತಹಸೀಲ್ದಾರ್ ಜೆ.ಮಂಜುನಾಥ್, ನಗರಸಭೆ ಪ್ರಭಾರ ಅಧ್ಯಕ್ಷೆ ಆಶಾ, ಪೌರಾಯುಕ್ತೆ ಮಾನಸ, ತಾಪಂ ಇಓ ಹೊಂಗಯ್ಯ ಮತ್ತಿತರ ಗಣ್ಯರು ಅಂಬೇಡ್ಕರ್ ಪ್ರತಿಮೆ ಹಾಗೂ ಅಂಬೇಡ್ಕರ್ ಭಾವಚಿತ್ರ ಹೊತ್ತ ಅಲಂಕೃತ ಆನೆಗೆ ಪುಷ್ಪಾರ್ಚನೆಗೈಯುವ ಮೂಲಕ ಚಾಲನೆ ನೀಡಿದರು. ಈ ವೇಳೆ ಅಧಿಕಾರಿಗಳು ಹಾಗೂ ಸಾರ್ವಜನಿಕರು ಪುಷ್ಪಾರ್ಚನೆ ಮಾಡಿ ಗೌರವ ಸಮರ್ಪಿಸಿದರು.



ಅಂಬೇಡ್ಕರ್ ಭಾವಚಿತ್ರ ಹೊತ್ತಿದ್ದ ಲಕ್ಷ್ಮಿ ಆನೆಗೆ ಶಾಸಕ ಹರೀಶ್‌ಗೌಡ ಇತರರು ಪುಷ್ಪಾರ್ಚನೆ ಮಾಡಿದರು.

ಪೂರ್ಣಕುಂಭ ಕಳಸ: ಕಳಸ ಹೊತ್ತ ನೂರಾರು ಮಹಿಳೆ ಯರು ಮೆರವಣಿಗೆಯಲ್ಲಿ ಸಾಗಿ ಬಂದರೆ, ನೀಲಿ ಶಾಲು ಹೊದ್ದಿದ್ದ ನೂರಾರು ಮಂದಿ ಕೈಯಲ್ಲಿ ನೀಲಿ ಬಾವುಟ ಹಿಡಿದಿದ್ದ ಪುರುಷರು, ಮಹಿಳೆಯರು ಅಂಬೇಡ್ಕರ್ ಕುರಿತು ಘೋಷಣೆ ಕೂಗುತ್ತಾ ಸಾಗಿದರೆ, ಡಿ.ಡಿ. ಅರಸು ಕಾಲೇಜು ವಿದ್ಯಾರ್ಥಿಗಳು ಶಿಕ್ಷಣದ ಮಹತ್ವ ಸಾರುವ ಘೋಷಣೆಯುಳ್ಳ ಫಲಕ ಹಿಡಿದು ಸಾಗಿ ಬಂದರು.

ಕಲಾ ಪ್ರಕಾರಗಳ ಕಲರವ: ಮೆರವಣಿಗೆಯಲ್ಲಿ ಉಡುಪಿಯ ಹುಲಿ ಕುಣಿತ, ಚಂಡೆ, ಕೋಲಾಟ, ಬೊಂಬೆ ಕುಣಿತ ಮತ್ತಿತರ ಕಲಾ ಪ್ರಕಾರಗಳೊಂದಿಗೆ ನಗಾರಿ ಹಾಗೂ ಡಿ.ಜೆ.ಸದ್ದಿಗೆ ಬಿಇಓ ಮಹದೇವ್, ಮಹಿಳೆಯರು ಸೇರಿದಂತೆ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಕುಣಿದು ಸಂಭ್ರಮಿಸಿದರೆ, ಎಸ್.ಜೆ.ರಸ್ತೆಯಲ್ಲಿ ಶಾಸಕ ಹರೀಶ್ ಗೌಡರನ್ನು ಹೆಗಲ ಮೇಲೆ ಹೊತ್ತು ಕುಣಿದರು. ಮೆರವಣಿಗೆಯು ಸಂವಿಧಾನ ಸರ್ಕಲ್ ಬಳಿ ಬಂದ ವೇಳೆ ಜೆಸಿಬಿ ಮೂಲಕ ಅಲಂಕೃತ ಸಂವಿಧಾನ ಸ್ತಂಭಕ್ಕೆ ಪುಷ್ಪಾರ್ಚನೆ ಮಾಡಲಾಯಿತು.

ಗಮನ ಸೆಳೆದ ಸ್ಥಬ್ದ ಚಿತ್ರ: ಮೆರವಣಿಗೆಯಲ್ಲಿ ಅಂಬೇಡ್ಕರ್ ಪ್ರತಿಮೆ ಇದ್ದ ಟ್ಯಾಬ್ಲೋ, ಬುದ್ಧ, ಬಸವ, ಅಂಬೇಡ್ಕರ್ ಪ್ರತಿಮೆ ಬಳಿ ಮಕ್ಕಳು ಪುಸ್ತಕ ಓದುತ್ತಿರುವ ಸ್ಥಬ್ದಚಿತ್ರ ಎಲ್ಲರ ಗಮನ ಸೆಳೆಯಿತು.

ಆಕರ್ಷಿಸಿದ ಲಕ್ಷ್ಮಿ ಆನೆ: ತುಮಕೂರಿನ ಮಠದಿಂದ ಕರೆಸಲಾಗಿದ್ದ ಅಂಬೇಡ್ಕರ್ ಭಾವಚಿತ್ರ ಹೊತ್ತು ಮೆರವಣಿಗೆಯಲ್ಲಿ ಸಾಗಿ ಬಂದ ಲಕ್ಷ್ಮಿ ಆನೆ ಎಲ್ಲರ ಗಮನ ಸೆಳೆಯಿತು. ಮಹಿಳೆಯರು, ಮಕ್ಕಳು ಮತ್ತು ನಾಗರಿಕರು ಆನೆ ಕಣ್ತುಂಬಿಕೊಂಡರಲ್ಲದೆ ಸೆಲ್ಫಿಯೊಂದಿಗೆ ಸಂಭ್ರಮಿಸಿದರು. ಅರಣ್ಯ ಇಲಾಖೆಯ ಕಣ್ಗಾವಲಿನಲ್ಲಿ ಆನೆಯನ್ನು ಕರೆ ತರಲಾಯಿತು.

ಬಿಸಿಲಿನ ಝಳ: ಬಿಸಿಲಿನ ಝಳದ ನಡುವೆ ಮೆರವಣಿಗೆಯಲ್ಲಿ ಆಶಾ, ಅಂಗನವಾಡಿ ಕಾರ್ಯಕರ್ತರು, ಶಿಕ್ಷಕರು, ಮಹಿಳಾ ಸಂಘದವರು, ವಿವಿಧ ದಲಿತ ಸಂಘಟನೆಗಳ ಪದಾಧಿಕಾರಿಗಳು ಹೆಜ್ಜೆ ಹಾಕಿದರು. ಪ್ರಮುಖ ಬೀದಿಗಳ ಮುಖಾಂತರ ನಗರಸಭಾ ಮೈದಾನದಲ್ಲಿ ಅಂತ್ಯಗೊಳಿಸಿದರು. ಕಾರ್ಯಕ್ರಮದಲ್ಲಿ ಎಲ್ಲರಿಗೂ ಅಂಬೇಡ್ಕರ್ ಓದು ಪುಸ್ತಕವನ್ನು ವಿತರಿಸಲಾಯಿತು.

ಸಂವಿಧಾನ ವೃತ್ತದ ಬಳಿ ಅಂಬೇಡ್ಕರ್ ಪ್ರತಿಮೆ ನಿರ್ಮಾಣ

ಹುಣಸೂರು: ನಗರದ ಸಂವಿಧಾನ ವೃತ್ತದ ಬಳಿ ಜಾಗ ಗುರ್ತಿಸಲಾಗಿದ್ದು, ಅನುಮತಿ ದೊರೆತ ಬಳಿಕ ಅಂಬೇಡ್ಕರ್ ಬೃಹತ್ ಪ್ರತಿಮೆ ನಿರ್ಮಾಣಕ್ಕೆ ಚಾಲನೆ ನೀಡಲಾಗುವುದು ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಭರವಸೆ ನೀಡಿದರು.



ಅಂಬೇಡ್ಕರ್ ಭಾವಚಿತ್ರಕ್ಕೆ ಶಾಸಕ ಜಿ.ಡಿ.ಹರೀಶ್‌ಗೌಡ ಇತರರು ಪುಷ್ಪಾರ್ಚನೆ ಮಾಡಿದರು.

ಅಂಬೇಡ್ಕರ್ ಜಯಂತಿ ವೇದಿಕೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಗರದಲ್ಲಿ ಅಂಬೇಡ್ಕರ್ ಪ್ರತಿಮೆ ಸ್ಥಾಪಿಸುವಂತೆ ಸಾಕಷ್ಟು ಒತ್ತಾಯಗಳು ಕೇಳಿ ಬಂದಿದ್ದು, ಅದರಂತೆ ಜಾಗ ಗುರ್ತಿಸಲಾಗಿದೆ. ಅನುಮತಿ ಸಿಕ್ಕ ತಕ್ಷಣ ಪ್ರತಿಮೆ ನಿರ್ಮಿಸಲಾಗುವುದು ಎಂದರು.

ತಾಲೂಕಿನ ಕಟ್ಟೆಮಳಲವಾಡಿಯಲ್ಲಿ ಈಗಾಗಲೇ ಗೋಪುರ ನಿರ್ಮಿಸಲಾಗಿದ್ದು, ಅಲ್ಲಿಯೂ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಲಾಗುವುದು. ಯುವಜನರ ಜ್ಞಾನಾರ್ಜನೆಗೆ ಪಕ್ಕದಲ್ಲೇ ಜ್ಞಾನ ವಿಹಾರ ಕೇಂದ್ರ ತೆರೆಯಲಾಗುವುದು. ಬಾಚಳ್ಳಿ ರಸ್ತೆಯಲ್ಲಿ ಬೌದ್ಧ ವಿಹಾರ ಕೇಂದ್ರ ತೆರೆಯಲಾಗುವುದು ಎಂದರು.

ವಸತಿ ಶಾಲೆ ನಿರ್ಮಾಣಕ್ಕೆ 22 ಕೋಟಿ: ತಾಲೂಕಿನ ಹನಗೋಡು ಗ್ರಾಮದಲ್ಲಿ ಅನೇಕ ದಿನಗಳಿಂದ ಜಾಗದ ವಿಚಾರವಾಗಿ ಅರಣ್ಯ ಇಲಾಖೆ ತಕರಾರು ತೆಗೆದಿದ್ದು, ಇದೀಗ ಎಲ್ಲಾ ಸಮಸ್ಯೆಗಳು ಬಗೆಹರಿದಿದೆ. ಅಂಬೇಡ್ಕರ್ ವಸತಿ ಶಾಲೆ ನಿರ್ಮಾಣಕ್ಕಾಗಿ ಸರ್ಕಾರ 22 ಕೋಟಿ ಬಿಡುಗಡೆ ಮಾಡಿದ್ದು, ಕಾಮಗಾರಿ ಪ್ರಾರಂಭವಾಗಲಿದೆ ಎಂದರು.

ಅಂಬೇಡ್ಕರ್ ಜಯಂತಿ ಪೂರ್ವಭಾವಿ ಸಭೆಯಲ್ಲಿ ಜಯಂತಿಯನ್ನು ಆನೆ ತರಿಸಿ ಅದ್ದೂರಿಯಾಗಿ ಆಚರಿಸಬೇಕು ಎಂದು ಸಮುದಾಯದ ಮುಖಂಡರು ಒತ್ತಾಯಿಸಿದ್ದರಿಂದ ತುಮಕೂರಿನ ಕರಿಬಸವ ಮಠದಿಂದ ಭೀಮನಂತಹ ಆನೆ ತರಿಸಿ ಭೀಮೋತ್ಸವ ಮಾಡಿದ ಖುಷಿ ಇದೆ ಎಂದರು.

ಪ್ರಧಾನ ಭಾಷಣಕಾರ ಬೆಂಗಳೂರು ಕ್ರೈಸ್ಟ್ ಕಾಲೇಜಿನ ಉಪನ್ಯಾಸಕ ಹ.ರಾ.ಮಹೇಶ್ ಅಂಬೇಡ್ಕರ್ ಬಗ್ಗೆ ಸವಿಸ್ತಾರವಾಗಿ ತಿಳಿಸಿದ್ದಾರೆ. ಅಂಬೇಡ್ಕರ್ ಅವರ ಸಂವಿಧಾನ ಎಲ್ಲಾ ಸಮುದಾಯಕ್ಕೂ ಅವಕಾಶ ನೀಡಿದ್ದರಿಂದ ನಿಮ್ಮ ಮುಂದೆ ನಾನು ಶಾಸಕನಾಗಿದ್ದೇನೆ ಎಂದರು.

ಪ್ರೀತಿ ಸಾಧನೆ ಇತರರಿಗೆ ಮಾದರಿ: ಎಂಎಲ್‌ಸಿ ವಿಶ್ವನಾಥ್

ಕೆ.ಆರ್.ನಗರ, ಏ.29– ಶಿಕ್ಷಣದಿಂದ ಸರ್ವವನ್ನು ಸಾಧಿಸಬಹುದು ಎಂದು ತೋರಿಸಿ ಕೊಟ್ಟಿರುವ ನಮ್ಮೂರಿನ ಹೆಣ್ಣು ಮಗಳಾದ ಎ.ಸಿ.ಪ್ರೀತಿ ಸಾಧಕರಿಗೆ ಮಾದರಿ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ತಿಳಿಸಿದರು.



ಎ.ಸಿ.ಪ್ರೀತಿ ಅವರನ್ನು ಎಂಎಲ್‌ಸಿ ಹೆಚ್.ವಿಶ್ವನಾಥ್ ಮತ್ತು ಕುಟುಂಬದವರು ಸನ್ಮಾನಿಸಿದರು.

ಯುಪಿಎಸ್‌ಸಿ ಪರೀಕ್ಷೆಯಲ್ಲಿ 263ನೇ ರ್‍ಯಾಂಕ್ ಪಡೆದ ಸಾಲಿಗ್ರಾಮ ತಾಲೂಕಿನ ಅಂಕನಹಳ್ಳಿ ಗ್ರಾಮದ ಚನ್ನಬಸಪ್ಪ ಮತ್ತು ನೇತ್ರಾವತಿ ಪುತ್ರಿ ಎ.ಸಿ.ಪ್ರೀತಿ ಅವರನ್ನು ಕೆ.ಆರ್.ನಗರದ ತಮ್ಮ ನಿವಾಸದಲ್ಲಿ ಸನ್ಮಾನಿಸಿ ಅವರು ಮಾತನಾಡಿದರು.

ಸಾಧನೆಗೆ ಬಡತನ ಮತ್ತು ಹಳ್ಳಿಗಾಡಿನ ವಾತಾವರಣ ಅಡ್ಡಿಯಾಗುವುದಿಲ್ಲ ಎಂದು ತೋರಿಸುವ ಮೂಲಕ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣವನ್ನು ಸರ್ಕಾರಿ ಶಾಲೆ ಮತ್ತು ಕಾಲೇಜಿನಲ್ಲಿ ಪೂರೈಸಿ ದೇಶದ ಪರಮೋಚ್ಛ ಸ್ಪರ್ಧಾತ್ಮಕ ಪರೀಕ್ಷೆಯಾಗಿರುವ ಯುಪಿಎಸ್‌ಸಿಯಲ್ಲಿ ತೇರ್ಗಡೆಯಾಗಿ ಹುಟ್ಟೂರು, ಪೋಷಕರು ಕಲಿಸಿದ ಶಿಕ್ಷಕರು ಮತ್ತು ತಾಲೂಕಿಗೆ ಕೀರ್ತಿ ತಂದಿರುವ ಇವರ ಸಾಧನೆ ಇತರ ವಿದ್ಯಾರ್ಥಿಗಳಿಗೆ ಮಾರ್ಗದರ್ಶಿ ಎಂದು ಪ್ರಶಂಸಿಸಿದರು.

ದೇಶದ ಬೆಳವಣಿಗೆಯಲ್ಲಿ ಅಕ್ಷರ ಮತ್ತು ಆರೋಗ್ಯ ಅತ್ಯಂತ ಪ್ರಮುಖವಾಗಿದ್ದು, ಅವೆರಡು ದೊರೆತರೆ ಸಾಮಾನ್ಯ ವಿದ್ಯಾರ್ಥಿಗಳು ಮುಗಿಲೆತ್ತರದ ಸಾಧನೆ ಮಾಡಬಹುದಾಗಿದ್ದು, ಆಳುವ ಸರ್ಕಾರಗಳು ಈ ವಿಚಾರದ ಬಗ್ಗೆ ಗಂಭೀರವಾಗಿ ಗಮನಹರಿಸಬೇಕು ಎಂದರು.

ಈ ವೇಳೆ ಎಂಎಲ್‌ಸಿ ವಿಶ್ವನಾಥ್, ಶಾಂತಮ್ಮ ವಿಶ್ವನಾಥ್ ಮತ್ತು ಕುಟುಂಬಸ್ಥರು ಪ್ರೀತಿ ಸೇರಿದಂತೆ ಪೋಷಕರನ್ನು ಅಭಿನಂದಿಸಿದರು. ಜಿಪಂ ಮಾಜಿ ಉಪಾಧ್ಯಕ್ಷ ಎ.ಎಸ್.ಚನ್ನಬಸಪ್ಪ, ಖ್ಯಾತ ಮೂಳೆ ತಜ್ಞ ಡಾ.ಮೆಹಬೂಬ್‌ಖಾನ್, ತಾಲೂಕು ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಡಾ.ಡಿ.ನಟರಾಜು, ಪದಾಧಿಕಾರಿಗಳಾದ ಜಿ.ಜೆ.ಮಹೇಶ್, ಸಿ.ಎಂ.ಅಣ್ಣಯ್ಯ, ಬಿ.ಎಲ್.ಮಹದೇವ್, ಮಧುಕುಮಾರ್, ಶಂಕರೇಗೌಡ, ಡಾ.ಹರೀಶ್, ರಾಜಶೇಖರ್, ಕೆ.ಎಸ್.ಸತೀಶ್‌ಕುಮಾರ್, ತಾಲೂಕು ಕಸಾಪ ಅಧ್ಯಕ್ಷ ಡಿಂಡಿಮಶಂಕರ್, ತಾಲೂಕು ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಸ್.ರಾಮಲಿಂಗು, ತಾಲೂಕು ರೈತ ವೇದಿಕೆ ಅಧ್ಯಕ್ಷ ರಾಮಪ್ರಸಾದ್, ಸರ್ವೋದಯ ಪಕ್ಷದ ಅಧ್ಯಕ್ಷ ಗರುಡಗಂಭಸ್ವಾಮಿ, ಸೇರಿದಂತೆ ಇನ್ನಿತರರಿದ್ದರು.

ಕಳಂಕ ರಹಿತ ಅಪರೂಪದ ರಾಜಕಾರಣಿ ವಿ.ಶ್ರೀನಿವಾಸಪ್ರಸಾದ್

ಬಿಜೆಪಿ ರಾಜ್ಯ ಮುಖಂಡ ಕುಂಬ್ರಹಳ್ಳಿ ಸುಬ್ಬಣ್ಣ

ನಂಜನಗೂಡು, ಏ.29– ಮಾಜಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ರಾಜ್ಯ ಕಂಡ ಸೂಕ್ಷ್ಮ ಸಂವೇದನೆಯುಳ್ಳ, ಕಳಂಕ ರಹಿತ ಅಪರೂಪದ ರಾಜಕಾರಣಿ ಎಂದು ಬಿಜೆಪಿ ರಾಜ್ಯ ಮುಖಂಡ ಕುಂಬ್ರ ಹಳ್ಳಿ ಸುಬ್ಬಣ್ಣ ತಿಳಿಸಿದರು.



ನಂಜನಗೂಡಲ್ಲಿ ವಿ.ಶ್ರೀನಿವಾಸ ಪ್ರಸಾದ್ ಪುಣ್ಯಸ್ಮರಣೆ ನಡೆಯಿತು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ಬಳಿ ವಿ.ಶ್ರೀನಿವಾಸ ಪ್ರಸಾದ್ ಅಭಿಮಾನಿ ಬಳಗದಿಂದ ಏರ್ಪಡಿಸಿದ್ದ ಮಾಜಿ ಸಂಸದ ಹಾಗೂ ಮಾಜಿ ಸಚಿವ ವಿ.ಶ್ರೀನಿವಾಸ್ ಪ್ರಸಾದ್ ಪ್ರಥಮ ವರ್ಷದ ಪುಣ್ಯಸ್ಮರಣೆಯಲ್ಲಿ ಅವರು ಮಾತನಾಡಿದರು.

ಸ್ವಾಭಿಮಾನಿ ರಾಜಕಾರಣಕ್ಕೆ ಹೆಸರಾಗಿದ್ದ ವಿ.ಶ್ರೀನಿವಾಸ ಪ್ರಸಾದ್ ಅವರು ಎಲ್ಲಾ ಸಮಾಜದವರನ್ನು ಒಟ್ಟಾಗಿ ಕರೆದುಕೊಂಡು ಹೋಗುವ ಗುಣವುಳ್ಳವರಾಗಿದ್ದರು. ಬಲಾಢ್ಯರು ತಮ್ಮ ಹಕ್ಕುಗಳನ್ನು ಹೇಗಾದರೂ ಪಡೆಯುತ್ತಾರೆ. ಆದ್ದರಿಂದ ದೀನ ದಲಿತರಿಗೆ ಸಹಾಯ ಮಾಡಬೇಕೆಂಬುದು ಅವರ ನಿಲುವಾಗಿತ್ತು. ಅವರ ರಾಜಕೀಯ ಜೀವನದಲ್ಲಿ ಹಲವು ನಾಯಕರನ್ನು ಬೆಳೆಸಿದ್ದಾರೆ. ಅವರ ಆದರ್ಶ ಗುಣಗಳನ್ನು ನಾವು ಅಳವಡಿಸಿಕೊಳ್ಳಬೇಕು ಎಂದರು.

ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ ಮಾತನಾಡಿ, ವಿ.ಶ್ರೀನಿವಾಸ ಪ್ರಸಾದ್ ಮಾನವೀಯ ಗುಣಗಳಿಂದ, ಸಾಮಾಜಿಕ ಕಳಕಳಿಯಿಂದ, ತಮ್ಮ ತತ್ವಗಳಿಗೆ ಅನುಗುಣವಾಗಿ ರಾಜಕಾರಣ ಮಾಡಿ ಎಲ್ಲಾ ಸಮಾಜದವರ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ ಎಂದರು.

ಸಾಹಿತಿ ಮಹದೇವಸ್ವಾಮಿ ಮಾತನಾಡಿ, ವಿ.ಶ್ರೀನಿವಾಸ ಪ್ರಸಾದ್ ಅವರು ಚಾಮರಾಜನಗರ ಮೈಸೂರು ಭಾಗದ ಜನರ ಭಾವನೆಗಳ ತಲ್ಲಣಗಳಲ್ಲಿ ಮರಣಿಸಿದರು ಬದುಕಿದ್ದಾರೆ. ಅವರು ಎಂದಿಗೂ ತಮ್ಮ ಸಿದ್ಧಾಂತ, ನಿಲುವುಗಳಿಗೆ ರಾಜಿಯಾದವರಲ್ಲ. ಅಂಬೇಡ್ಕರ್ ನಿಲುವುಗಳಿಗೆ ಧಕ್ಕೆ ಬಂದಾಗಲೆಲ್ಲಾ ಎದೆಗಾರಿಕೆಯಿಂದ ಪ್ರಶ್ನಿಸುತ್ತಿದ್ದ ಏಕೈಕ ರಾಜಕಾರಣಿ ಎಂದರು.

ಹೆಮ್ಮರಗಾಲ ಸೋಮಣ್ಣ ಮಾತನಾಡಿ, ವಿ.ಶ್ರೀನಿವಾಸಪ್ರಸಾದ್ ಹಿಂದುಳಿದ ವರ್ಗಕ್ಕೆ ರಾಜಕೀಯ ಶಕ್ತಿ ದೊರಕಿಸಿಕೊಡುವುದರಲ್ಲಿ ಮೊದಲಿಗರಾಗಿದ್ದರು. ಅವರಿಂದಾಗಿ ನಮ್ಮ ಜನಾಂಗದ ಪುಟ್ಟರಂಗಶೆಟ್ಟಿ ಅವರು ಶಾಸಕರಾಗಿ ಸಚಿವರಾಗಿದ್ದಾರೆ ಎಂದರು.

ಪ್ರಥಮ ದರ್ಜೆ ಗುತ್ತಿಗೆದಾರ ಯು.ಎನ್.ಪದ್ಮನಾಭರಾವ್ ಮಾತನಾಡಿದರು. ಕಾರ್ಯಕ್ರಮದಲ್ಲಿ ವಿ.ಶ್ರೀನಿವಾಸ ಪ್ರಸಾದ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಈ ವೇಳೆ ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ, ಅಖಿಲ ಭಾರತ ವೀರ ಶೈವ ಮಹಾಸಭಾ ತಾಲೂಕು ಅಧ್ಯಕ್ಷ ಎಸ್.ಎಂ.ಕೆಂಪಣ್ಣ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ಸದಸ್ಯರಾದ ಸಿ.ಎಂ.ಮಹದೇವಯ್ಯ, ಬಿ.ಎಸ್.ರಾಮು, ಕೆ.ಡಿ.ಮಂಜು, ಮುಖಂಡರಾದ ಬಿಎಸ್ಪಿ ಶ್ರೀಕಂಠ, ಮಂಡ್ಯ ಮಹದೇವು, ಜಿ.ಬಸವರಾಜು, ಸುರೇಶ್, ಮಹದೇವು, ಮಲ್ಲಿಕಾರ್ಜುನ, ಅಜ್ಗರ್, ಅರುಣ್‌ಗೌಡ, ನಗರಸಭಾ ಸದಸ್ಯ ಹೆಚ್.ಎಸ್.ಮಹದೇವಸ್ವಾಮಿ, ಪಿಎಲ್‌ಡಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಕೃಷ್ಣ ಸೇರಿದಂತೆ ವಿ.ಶ್ರೀನಿ ವಾಸ ಪ್ರಸಾದ್ ಅಭಿಮಾನಿಗಳು ಉಪಸ್ಥಿತರಿದ್ದರು.

ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಗೆ ರೈತ ಸಂಘ ಖಂಡನೆ

ನಂಜನಗೂಡು, ಏ.29– ಕಾಶ್ಮೀರದ ಪಹಲ್ಗಾಮ್‌ನಲ್ಲಿ ಮುಗ್ಧ ನಾಗರಿಕರ ಮೇಲೆ ಉಗ್ರರು ನಡೆಸಿದ ದಾಳಿಯನ್ನು ರೈತ ಸಂಘ ಖಂಡಿಸುತ್ತದೆ. ನಾವು ಎಡ ಮತ್ತು ಬಲ ಪಂಥವನ್ನು ಬೆಂಬಲಿಸುವುದಿಲ್ಲ. ಉಗ್ರರ ದಾಳಿಯಿಂದ ಸಾವು ನೋವುಗಳಾಗಿವೆ. ಉಗ್ರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ರಾಜ್ಯ ರೈತ ಸಂಘದ ಮುಖಂಡ ಪಚ್ಚೆ ನಂಜುಂಡ ಸ್ವಾಮಿ ಆಗ್ರಹಿಸಿದರು.



ನಂಜನಗೂಡಿನಲ್ಲಿ ಅಧಿಕಾರಿಗಳೊಂದಿಗೆ ರೈತರ ಸಂವಾದ ಕಾರ್ಯಕ್ರಮ ನಡೆಯಿತು

ನಗರದ ಎಪಿಎಂಸಿ ಸಭಾಂಗಣದಲ್ಲಿ ಮಂಗಳವಾರ ನಡೆದ ಅಧಿಕಾರಿಗಳೊಂದಿಗೆ ರೈತರ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದ ಮುಗ್ಧ ನಾಗರಿಕರ ಮೇಲೆ ಭಯೋತ್ಪಾದಕರು ದಾಳಿ ನಡೆಸಿದ್ದಾರೆ. ಕೇಂದ್ರ ಸರ್ಕಾರ ಭಯೋತ್ಪಾದಕರ ಮೇಲೆ ಉಗ್ರ ಕ್ರಮವಹಿಸಬೇಕು. ದೇಶ ಬಲಿಷ್ಠವಾಗಿದ್ದು, ಪಾಕಿಸ್ತಾನದ ಮರೆಮಾಚಿದ ಯುದ್ಧವನ್ನು ಮೆಟ್ಟಿ ನಿಲ್ಲುವ ಸಾಮರ್ಥ್ಯ ಹೊಂದಿದೆ ಎಂದರು.

ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್ ಮಾತನಾಡಿ, ಗ್ರಾಮೀಣ ಅವಿಭಕ್ತ ರೈತ ಕುಟುಂಬಕ್ಕೆ ನಿವೇಶನದ ಕೊರತೆ ಇರುವುದರಿಂದ ಅವರಿಗೆ ಸರ್ಕಾರದಿಂದ ನಿವೇಶನ ನೀಡಬೇಕು. ಗೋಮಾಳವನ್ನು ಬಡ ರೈತರಿಗೆ ಉಳುಮೆ ಮಾಡಲು ಅವಕಾಶ ಮಾಡಿಕೊಡಬೇಕು. ಸೇಂದಿವನ ಸಾಗುವಳಿ ಮಾಡಲು ಬಿಟ್ಟುಕೊಡಬೇಕು. ಅಹಲ್ಯದಲ್ಲಿ ರುದ್ರಭೂಮಿ ಇಲ್ಲದೆ ತೊಂದರೆಯಾಗಿದೆ. ಕೃಷ್ಣಾಪುರದಲ್ಲಿ ಕೆಲವು ಕುಟುಂಬಗಳಿಗೆ ಹಕ್ಕುಪತ್ರ ನೀಡಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಸರ್ಕಾರಿ ಜಾಗಗಳಲ್ಲಿ ಅಕ್ರಮ ಕಟ್ಟಡಗಳ ನಿರ್ಮಾಣ ಮಾಡಲಾಗಿದೆ ಎಂದರು.

ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು ಮಾತನಾಡಿ, ಮರಳೂರು, ಗೊದ್ದನಪುರ, ನಗರ್ಲೆ ಗ್ರಾಮಗಳಲ್ಲಿ ಸ್ಥಳ ಗುರುತಿಸಲಾಗಿದೆ. ದಾಖಲಾತಿ ಸಿದ್ಧಪಡಿಸಿ ಸರ್ಕಾರಕ್ಕೆ ವರದಿ ಸಲ್ಲಿಸುತ್ತೇವೆ. ಜಾನುವಾರುಗಳ ಮೇವಿಗಾಗಿ ಮೀಸಲಿಟ್ಟಿರುವ ಗೋಮಾಳವನ್ನು ಸಾಗುವಳಿಗೆ ಕೊಡಲು ಆಗುವುದಿಲ್ಲ. ಸೇಂದಿವನ ಸರ್ಕಾರದ ಅಧೀನದಲ್ಲಿರುತ್ತದೆ. ಮೇಲಾಧಿಕಾರಿಗಳ ಜೊತೆ ಚರ್ಚಿಸಿ ಕ್ರಮ ವಹಿಸಲಾಗುವುದು. ಜಿಲ್ಲಾಧಿಕಾರಿ ಜೊತೆ ಮಾತನಾಡಿ ಹಕ್ಕುಪತ್ರ ವಿತರಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಚಂದ್ರು, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ರವಿ, ಸಣ್ಣ ನೀರಾವರಿ ಇಲಾಖೆ ಎಇಇ ಅಜರುದ್ದೀನ್, ತಾಲೂಕು ಅಧ್ಯಕ್ಷ ಸತೀಶ್ ಇತರರಿದ್ದರು.

ಸರ್ಕಾರದ ಯೋಜನೆಗೆ ದಾಖಲೆಯೊಂದಿಗೆ ಅರ್ಜಿ ಸಲ್ಲಿಸಿ

ಚುಂಚನಕಟ್ಟೆ, ಏ.29– ಸರ್ಕಾರದ ಯೋಜನೆ ಮತ್ತು ಸವಲತ್ತುಗಳನ್ನು ಒಂದೇ ದಿನದಲ್ಲಿ ಒದಗಿಸಲು ಸಾರ್ವಜನಿಕರು ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿ ಎಂದು ಚುಂಚನಕಟ್ಟೆ ನಾಡಕಚೇರಿ ಉಪ ತಹಸೀಲ್ದಾರ್ ಕೆ.ಜೆ.ಶರತ್ ಕುಮಾರ್ ತಿಳಿಸಿದರು.




ಫಲಾನುಭವಿಗೆ ಸವಲತ್ತು ಮಂಜೂರು ಪತ್ರ ವಿತರಿಸಿದರು.

ಚುಂಚನಕಟ್ಟೆ ನಾಡಕಚೇರಿಯಲ್ಲಿ ಸಕಾಲ ಯೋಜನೆಯಡಿ ಅರ್ಜಿ ಸಲ್ಲಿಸಿದ ಫಲಾನುಭವಿಗಳಿಗೆ ಒಂದೇ ದಿನದಲ್ಲಿ ಸವಲತ್ತು ಮಂಜೂರು ಪತ್ರ ವಿತರಿಸಿ ಅವರು ಮಾತನಾಡಿದರು.

ದೂರದ ಊರುಗಳಿಂದ ವಾಸಸ್ಥಳ, ಆದಾಯ, ವಂಶವೃಕ್ಷ, ವಿಧವಾ ವೇತನ ಸೇರಿದಂತೆ ಇತರೆ ಪ್ರಮಾಣ ಪತ್ರಗಳನ್ನು ಪಡೆಯಲು ಅರ್ಜಿ ಸಲ್ಲಿಸಲು ಬರುವ ಸಾರ್ವಜನಿಕರು ಸೂಕ್ತ ದಾಖಲೆಗಳನ್ನು ಒದಗಿಸಿ ಕೊಟ್ಟರೇ ಅವುಗಳನ್ನು ಪರಿಶೀಲಿಸಿ ಒಂದೇ ದಿನದಲ್ಲಿ ಮಂಜೂರಾತಿ ಮಾಡಲು ನಮ್ಮ ಅಧಿಕಾರಿ ಮತ್ತು ಸಿಬ್ಬಂದಿ ವರ್ಗ ಶ್ರಮಿಸುತ್ತಿದ್ದು, ಇದಕ್ಕೆ ಸಾರ್ವಜನಿಕರು ಸಹಕರಿಸಬೇಕೆಂದು ಕೋರಿದರು.

ಈ ವೇಳೆ ರಾಜಸ್ವ ನಿರೀಕ್ಷಕ ಚಿದಾನಂದ್ ಬಾಬು, ವಿಷಯ ನಿರ್ವಾಹಕಿ ಎಸ್.ವಿ.ಭಾಗ್ಯಲಕ್ಷ್ಮಿ, ಸಿಬ್ಬಂದಿಗಳಾದ ಮಧುಶ್ರೀ, ರವೀಶ್ ಇದ್ದರು.

ನಟ ಡಾ.ಶಿವರಾಜಕುಮಾರ್‌ಗೆ ಸನ್ಮಾನ



ತಿ.ನರಸೀಪುರದ ಶ್ರೀಶಾರದಾ ಡಾನ್ಸ್ ಅಕಾಡೆಮಿಯಿಂದ ನಟ ಡಾ.ಶಿವರಾಜಕುಮಾರ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಡ್ಯಾನ್ಸ್ ಮಾಸ್ಟರ್ ಬಸವರಾಜು, ಶಿಕ್ಷಕಿಯರಾದ ಪುಷ್ಪ, ನಹನ್, ಶೃತಿ, ಕೀರ್ತನ, ಮೂರ್ತಿ, ಕಾವ್ಯ, ಮಲ್ಲಿಕಾರ್ಜುನ್, ಮಕ್ಕಳು ಮತ್ತು ಪೋಷಕರು ಉಪಸ್ಥಿತರಿದ್ದರು.

ಅಂಬೇಡ್ಕರ್ ಹೇಳಿದಂತೆ ಕಾಂಗ್ರೆಸ್ ಒಂದು ಸುಡುವ ಮನೆ

ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ

ತಿ.ನರಸೀಪುರ, ಏ.29– ಕೇಂದ್ರ ಸಚಿವರಾಗಿದ್ದ ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನ ರಚನಾ ಪ್ರಕ್ರಿಯೆ ಕರಡು ಸಿದ್ಧತಾ ಸಮಿತಿ ಅಧ್ಯಕ್ಷರಾಗಿದ್ದ ವೇಳೆ 'ಕಾಂಗ್ರೆಸ್ ಒಂದು ಸುಡುವ ಮನೆ ಎಚ್ಚರಿಕೆ' ಎಂದಿದ್ದರು. ಅದು ಅಕ್ಷರಶಃ ಸತ್ಯವಾಗಿದ್ದು, ಕಾಂಗ್ರೆಸ್ ಅವರನ್ನು ಅಷ್ಟೊಂದು ಕೆಟ್ಟದಾಗಿ ನಡೆಸಿಕೊಂಡು ಸಾಕಷ್ಟು ನೋವು, ಅವಮಾನ ಮಾಡಿತ್ತು ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ತಿಳಿಸಿದರು.



ವಿಚಾರಗೋಷ್ಠಿಯನ್ನು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಉದ್ಘಾಟಿಸಿದರು.

ಪಟ್ಟಣದ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ತಿ.ನರಸೀಪುರ ಹಾಗೂ ವರುಣ ಕ್ಷೇತ್ರದ ಬಿಜೆಪಿ ಘಟಕದಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತಿ ಪ್ರಯುಕ್ತ ನಡೆದ 'ಕಾಂಗ್ರೆಸ್ ಒಂದು ಸುಡುವ ಮನೆ ಎಚ್ಚರ' ವಿಚಾರಗೋಷ್ಠಿ ಉದ್ಘಾಟಿಸಿ ಮಾತನಾಡಿದ ಅವರು, ಜನರ ಮೂಲಭೂತ ಹಕ್ಕುಗಳನ್ನು ಕಿತ್ತುಕೊಂಡಿದ್ದು ಕಾಂಗ್ರೆಸ್‌ನವರು. ಸಂವಿಧಾನ ತಿದ್ದುವ ಮೂಲಕ ಕಾಂಗ್ರೆಸ್ ಪಕ್ಷ ಅಂಬೇಡ್ಕರ್ ಅವರನ್ನು ಅವಮಾನಿಸಿದೆ ಎಂದು ಆರೋಪಿಸಿದರು.

1948ರಲ್ಲಿ ಸಚಿವರಾಗಿದ್ದ ವೇಳೆ ಅಂಬೇಡ್ಕರ್ ಈ ಹೇಳಿಕೆ ಕೊಟ್ಟಿದ್ದು, ಇದು ಆತುರದ ಅಥವಾ ನಿರ್ಲಕ್ಷ್ಯದ ಹೇಳಿಕೆಯಲ್ಲ. ಇದು ಪ್ರಜ್ಞಾಪೂರ್ವಕ ಚಿಂತನೆಯಿಂದ ನೀಡಿದ ಹೇಳಿಕೆ. ಸಂವಿಧಾನ ತಿದ್ದಿ ಅವಮಾನಿಸಿದ್ದು, ಕಾಂಗ್ರೆಸ್‌ನವರೇ ಹೊರತು ಬಿಜೆಪಿಯವರಲ್ಲ. ಜನರ ಮೂಲ ಹಕ್ಕುಗಳನ್ನು ಕಿತ್ತುಕೊಂಡಿದ್ದು ಕಾಂಗ್ರೆಸ್‌ನವರು. ಪ್ರಧಾನಿ ಮೋದಿ ಹಿಂದುಳಿದ ಪರ, ಪ.ಜಾತಿ ಹಾಗೂ ಪ.ಪಂಗಡ ಪರ ಒಟ್ಟು 22 ತಿದ್ದುಪಡಿಗಳನ್ನು ಮಾಡಿದ್ದಾರೆ. ಕಾಂಗ್ರೆಸ್‌ನವರು ಸಂವಿಧಾನ ತಿದ್ದುಪಡಿ ಮಾಡಿದರೂ ಸಹ ಇದರಲ್ಲಿ ಪ.ಜಾತಿ, ಪಂಗಡವರಿಗೆ ಏನೂ ಮಾಡಿಲ್ಲ. ಇದರಿಂದ ಕಾಂಗ್ರೆಸ್ ಸಂವಿಧಾನವನ್ನು ತಿದ್ದಿ ಡಾ.ಅಂಬೇಡ್ಕರ್ ಅವರನ್ನು ಅವಮಾನಿಸಿದೆ ಎಂದು ಆರೋಪಿಸಿದರು.

ನೆಹರು, ಇಂದಿರಾ, ರಾಜೀವ್ ಗಾಂಧಿಗೆ ಕಾಂಗ್ರೆಸ್ಸಿಗರು ಭಾರತರತ್ನ ಕೊಟ್ಟರು. ಆದರೆ ಅಂಬೇಡ್ಕರರಿಗೆ ಕೊಡದೆ ಇರಲು ಕಾರಣವೇನು? ಅಂಬೇಡ್ಕರ್ ಪಿಎ ಆಗಿದ್ದ ಕಾರಜೋಳಕರ್ ಅವರಿಗೆ ನೀವು 1970ರಲ್ಲೇ ಪದ್ಮಭೂಷಣ ಪ್ರಶಸ್ತಿ ನೀಡಿದ್ದೀರಿ. ಅಂಬೇಡ್ಕರ್ ಅವರು ಕಾರಜೋಳಕರ್ ಅವರಿಗಿಂತ ಕೀಳಾಗಿದ್ದರೇ ಎಂದು ಕಿಡಿಕಾರಿದರು.

ಗಾಂಧಿ ಕುಟುಂಬಕ್ಕೆ ಸುಮಾರು 100 ಎಕರೆ ಭೂಮಿಯನ್ನು ದೆಹಲಿಯಲ್ಲಿ ಕೊಟ್ಟಿದ್ದ ನೀವು ಡಾ.ಬಾಬಾಸಾಹೇಬ ಅಂಬೇಡ್ಕರ್ ಸ್ವರ್ಗಸ್ಥರಾದಾಗ ಅವರ ಅಂತ್ಯಕ್ರಿಯೆಗೆ ದೆಹಲಿಯಲ್ಲಿ ಏಕೆ ಜಾಗ ಕೊಡಲಿಲ್ಲ. ಇಂತಹ ಕಾರಣಕ್ಕೆ ಅಂತ್ಯಕ್ರಿಯೆಗೆ ಜಾಗ ಕೊಟ್ಟಿಲ್ಲ ಎಂದು ನೀವು ಜನರ ಮುಂದೆ ತಿಳಿಸಬೇಕೆಂದು ಒತ್ತಾಯಿಸಿದರು.

ಈ ವೇಳೆ ದೆಹಲಿಯ ರಾಜ್ ಘಾಟ್‌ನಲ್ಲಿ ಅಂಬೇಡ್ಕರ್ ಪ್ರತಿಮೆ, ಸ್ಮಾರಕ ನಿರ್ಮಿಸುವಂತೆ ಜೆಡಿಎಸ್ ಹಿರಿಯ ಮುಖಂಡ ಸೋಸಲೆ ಶಿವಕುಮಾರ್ ಛಲವಾದಿ ನಾರಾಯಣಸ್ವಾಮಿ ಅವರಿಗೆ ಮನವಿ ಮಾಡಿದರು.

ಮಾಜಿ ಸಂಸದ ಎಸ್.ಮುನಿಸ್ವಾಮಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮನ್ನು ಯಾವಾಗಲೂ ಅಹಿಂದ ನಾಯಕ ಎಂದು ಹೇಳಿಕೊಳ್ಳುತ್ತಾರೆ. ಆದರೆ ನಿಜಕ್ಕೂ ಅವರು ಅಹಿಂದ ನಾಯಕರಲ್ಲ. ಬದಲಿಗೆ ಅವರು ಅಹಿಂದ ಸಮಾಜವನ್ನು ಹಿಂದೆ ಇಟ್ಟಿರುವ ನಾಯಕ ಎಂದು ವ್ಯಂಗ್ಯವಾಡಿದರು.

ವರುಣ ಕ್ಷೇತ್ರದ ವಾಜಮಂಗಲದಲ್ಲಿ ಅಂಬೇಡ್ಕರ್ ಪ್ರತಿಮೆ ವಿರೂಪಗೊಳಿಸಿ 15 ದಿನಗಳಾದರೂ ಏಕೆಯಾರನ್ನು ಬಂಧಿಸಿಲ್ಲ. ಸ್ವಕ್ಷೇತ್ರದಲ್ಲಿ ಬಾಬಾ ಸಾಹೇಬರ ಗೌರವ ಕಾಪಾಡಲಾರದ ಮುಖ್ಯಮಂತ್ರಿಗಳು ಪಾಕಿಸ್ತಾನದ ಮೇಲೆ ಯುದ್ಧ ಮಾಡಬಾರದೆಂದು ಪ್ರಧಾನಿ ಮೋದಿ ಅವರಿಗೆ ಬಿಟ್ಟಿ ಸಲಹೆ ಕೊಡುತ್ತಿದ್ದಾರೆ ಎಂದು ಟೀಕಿಸಿದರು.

ಬಿಜೆಪಿ ಮುಖಂಡ ಡಾ.ರೇವಣ್ಣ, ಸಾಮಾಜಿಕ ಕಾರ್ಯಕರ್ತ ವಾದಿರಾಜ್ ಮಾತನಾಡಿದರು. ಶಾಸಕ ಶ್ರೀವತ್ಸ, ಮಾಜಿ ಶಾಸಕ ಎಲ್. ನಾಗೇಂದ್ರ, ಮಾಜಿ ಉಪಮೇಯರ್ ಶೈಲೇಂದ್ರ, ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಮಹದೇವಯ್ಯ, ವರುಣ ಕ್ಷೇತ್ರದ ಅಧ್ಯಕ್ಷ ನಗರ್ಲೆ ಮಹದೇವಸ್ವಾಮಿ, ತಿ.ನರಸಿಪುರ ಕ್ಷೇತ್ರದ ಅಧ್ಯಕ್ಷ ಶಿವಕುಮಾರ್, ಮಾಜಿ ಅಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್, ಪ್ರಧಾನ ಕಾರ್ಯದರ್ಶಿಗಳಾದ ಡಾ.ಮಲ್ಲಿಕಾರ್ಜುನ ಸ್ವಾಮಿ, ವೆಂಕಟರಮಣ ಶೆಟ್ಟಿ, ಪುರಸಭಾ ಸದಸ್ಯ ಕಿರಣ್, ಮಾಜಿ ಜಿಪಂ ಸದಸ್ಯ ಸದಾನಂದ, ಜಿಲ್ಲಾ ಉಪಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ, ರಾಜ್ಯ ಅಲ್ಪಸಂಖ್ಯಾತರ ವಿಭಾಗದ ಅಧ್ಯಕ್ಷ ಡಾ. ಅನಿಲ್ ಥಾಮಸ್, ಮಾಜಿ ಮೇಯರ್ ಶಿವಕುಮಾರ್, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಸಾಮ್ರಾಟ್, ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ಎಸ್ಸಿ ಮೋರ್ಚಾ ಅಧ್ಯಕ್ಷ ಸಿದ್ದರಾಜು, ತಾಪಂ ಮಾಜಿ ಸದಸ್ಯ ಬಸವರಾಜು, ಭೈರಾಪುರ ಬಾಲು, ಜಿಲ್ಲಾ ಕಾರ್ಯದರ್ಶಿ ರಾಮಚಂದ್ರ, ಆಲಗೂಡು ಮಂಜು, ಜಿಲ್ಲಾ ಮಾಧ್ಯಮ ವಕ್ತಾರ ದಯಾನಂದ್ ಪಟೇಲ್, ಪಿಎಸ್‌ಸಿಎಸ್ ನಿರ್ದೇಶಕ ಪುಟ್ಟಸ್ವಾಮಿ, ವಿಚಾರವಾದಿ ಪ್ರಭುಸ್ವಾಮಿ, ಲಕ್ಷ್ಮಣ, ದಾಸಯ್ಯ, ಎನ್.ಲೋಕೇಶ್ ವಿಜಯ ಕುಮಾರ್ ಇತರರು ಹಾಜರಿದ್ದರು.

> ದಲಿತರ ಮೀಸಲು ನಿಧಿಯನ್ನು ಕಾಂಗ್ರೆಸ್ ಗ್ಯಾರೆಂಟಿ ಯೋಜನೆಗೆ ದುರುಪಯೋಗಪಡಿಸಿಕೊಂಡಿತು. ಕಾಂಗ್ರೆಸ್ ದಲಿತ ನಾಯಕರು ಯಾರು ಮಾತನಾಡಲಿಲ್ಲ ಏಕೆ? ರಾಹುಲ್ ಗಾಂಧಿ ಸಂವಿಧಾನವನ್ನು ಸಾವಿರ ವರ್ಷ ಹಿಂದೆ ಬರೆಯಲಾಗಿತ್ತು ಅಂದರು. ಡಿ.ಕೆ.ಶಿವಕುಮಾರ್ ಮುಸ್ಲಿಂ ಮೀಸಲಾತಿಗಾಗಿ ಸಂವಿಧಾನ ಬದಲಾಯಿಸುವುದಾಗಿ ತಿಳಿಸಿದರು.
>
> – ಎಲ್.ಆರ್.ಮಹದೇವಸ್ವಾಮಿ, ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ.

ಸರ್ವೇಯರ್, ಸಹಾಯಕನ ಮೇಲೆ ರೈತರಿಂದ ಹಲ್ಲೆ

ಹೆಚ್.ಡಿ.ಕೋಟೆ, ಏ.29– ರೈತರ ಜಮೀನಿನ ಅಳತೆಗೆ ಹೋಗಿದ್ದ ಸರ್ವೇಯರ್ ಮತ್ತು ಸಹಾಯಕರ ಮೇಲೆ ರೈತರು ಹಲ್ಲೆ ನಡೆಸಿರುವ ಘಟನೆ ತಾಲೂಕಿನ ಬೆಟ್ಟದಬೀಡು ಗ್ರಾಮದಲ್ಲಿ ನಡೆದಿದೆ.

ಭೂ ಮಾಪನ ಇಲಾಖೆಯ ಕೋಟೆ ಭೂಮಾಪನ ಇಲಾಖೆಯ ಸರ್ವೇಯರ್ ಅರ್ಜುನ್ ಮತ್ತು ಸಹಾಯಕ ಮಂಜುನಾಥ್ ಹಲ್ಲೆಗೊಳಗಾದವರು. ಇವರು ತಾಲೂಕಿನ ಬೆಟ್ಟದಬೀಡು ಗ್ರಾಮದ ಕರೀಗೌಡರಿಗೆ ಸೇರಿದ ಸರ್ವೇ ನಂ. 31/1ರಲ್ಲಿರುವ 3.20 ಎಕರೆ ಜಮೀನನ್ನು ಮಂಗಳವಾರ ಮಧ್ಯಾಹ್ನ ಅಳತೆ ಮಾಡುತ್ತಿದ್ದ ವೇಳೆ ಪಕ್ಕದ ಜಮೀನಿನ ರೈತರಾದ ಶಿವಣ್ಣ, ಸೋಮೇಗೌಡ, ಸ್ವಾಮಿ ಎಂಬುವರು ಅಳತೆ ಮಾಡುವ ವಿಚಾರವಾಗಿ ಗಲಾಟೆ ನಡೆಸಿ ಅರ್ಜುನ್ ಮತ್ತು ಮಂಜುನಾಥ್ ಅವರ ಮೊಬೈಲ್ ಮತ್ತು ಭೂಮಿ ಅಳತೆ ಮಾಡುವ ಚೈನ್ ಕಿತ್ತುಕೊಂಡು ಹಲ್ಲೆ ನಡೆಸಿದ್ದಾರೆ.

ಗಾಯಗೊಂಡ ಇವರಿಬ್ಬರೂ ಹೆಚ್.ಡಿ.ಕೋಟೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹಲ್ಲೆ ನಡೆಸಿದ ರೈತರ ವಿರುದ್ಧ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಸವರಾಜಶೆಟ್ಟಿ ನಿಧನ



ಹೆಚ್.ಡಿ.ಕೋಟೆ, ಏ.29– ಪಟ್ಟಣದ ನಿವಾಸಿ, ಮಡಿವಾಳ ಸಮಾಜದ ಮಾಜಿ ಯಜಮಾನ ಬಸವರಾಜಶೆಟ್ಟಿ(85) ಮಂಗಳವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಬೆಳಗ್ಗೆ 11 ಗಂಟೆಗೆ ಪಟ್ಟಣದ ಸಾರ್ವಜನಿಕ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಐಪಿಎಲ್ ಹಂಗಾಮ

ಡೆಲ್ಲಿ ವಿರುದ್ಧ ಜಯ: ಗೆಲುವಿನ ಹಳಿಗೆ ಮರಳಿದ ಕೆಕೆಆರ್

ನವದೆಹಲಿ, ಏ.29– ಕಳೆದ 2 ಪಂದ್ಯಗಳಲ್ಲಿ ಸತತ ಸೋಲು ಅನುಭವಿಸಿದ್ದ ಕೋಲ್ಕತ್ತಾ ನೈಟ್ ರೈಡರ್ಸ್ ಬ್ಯಾಟಿಂಗ್, ಬೌಲಿಂಗ್‌ನಲ್ಲಿ ಆಲ್‌ರೌಂಡರ್ ಆಟದ ಮೂಲಕ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 14 ರನ್ ಗಳ ಜಯ ಗಳಿಸಿತು. ಆ ಮೂಲಕ ಗೆಲುವಿನ ಹಳಿಗೆ ಮರಳಿದೆ.

ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೆಕೆಆರ್ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 204 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ಬಳಿಕ ಬ್ಯಾಟಿಂಗ್ ಮಾಡಿದ ಡೆಲ್ಲಿ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 190 ರನ್ ಗಳಿಸಿ ಸೋಲು ಅನುಭವಿಸಿತು.

ಆ ಮೂಲಕ ಆಡಿರುವ 10 ಪಂದ್ಯಗಳಲ್ಲಿ 4 ಗೆಲುವು, 5 ಸೋಲು, 1 ಡ್ರಾ ನೊಂದಿಗೆ 9 ಅಂಕ ಗಳಿಸಿ ಕೆಕೆಆರ್ 7 ಸ್ಥಾನದಲ್ಲಿದ್ದರೇ, ಡೆಲ್ಲಿ 10 ಪಂದ್ಯಗಳಲ್ಲಿ 6 ಗೆಲುವು, 4 ಸೋಲಿನೊಂದಿಗೆ ಅಂಕಪಟ್ಟಿಯಲ್ಲಿ 12 ಅಂಕಗಳೊಂದಿಗೆ 5ನೇ ಸ್ಥಾನದಲ್ಲಿದೆ.

205 ರನ್‌ಗಳ ಬೃಹತ್ ಗುರಿ ಬೆನ್ನತ್ತಿದ ಡೆಲ್ಲಿ ಪರ ಫಾಫ್ ಡು ಪ್ಲೆಸಿಸ್ 45 ಎಸೆತಗಳಲ್ಲಿ 7 ಬೌಂಡರಿ, 2 ಸಿಕ್ಸರ್ ಒಳಗೊಂಡ 62 ರನ್ ಗಳಿಸಿ ಔಟಾದರೇ, ಅಕ್ಷರ್ ಪಟೇಲ್ 23 ಎಸೆತಗಳಲ್ಲಿ 3 ಸಿಕ್ಸರ್, 4 ಬೌಂಡರಿ ಒಳಗೊಂಡ 43 ರನ್ ಗಳಿಸಿ ನಿರ್ಗಮಿಸಿದರು. ಅಲ್ಲದೇ ವಿಪ್ರಾಜ್ ನಿಗಮ್ 19 ಎಸೆತಗಳಲ್ಲಿ 5 ಬೌಂಡರಿ, 2 ಸಿಕ್ಸರ್ ಒಳಗೊಂಡ 38 ರನ್ ಗಳಿಸಿದರೇ, ಕನ್ನಡಿಗ ಕರುಣ್ ನಾಯರ್ 15 ರನ್ ಗಳಿಸಿದರು. ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ವಿಫಲವಾದರು. ಕೋಲ್ಕತ್ತಾ ಪರ ಸುನೀಲ್ ನರೇನ್ 3, ವರುಣ್ ಚಕ್ರವರ್ತಿ 2, ಅನುಕುಲ್ ರಾಯ್, ಆಂಡ್ರೆ ರಸೆಲ್ ಹಾಗೂ ವೈಭವ್ ಅರೋರ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೋಲ್ಕತ್ತಾಗೆ ರಹಮಾನುಲ್ಲಾ ಗುರ್ಬಾಜ್, ಸುನೀಲ್ ನರೇನ್ ಮೊದಲ ವಿಕೆಟ್‌ಗೆ 48 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಈ ವೇಳೆ 5 ಬೌಂಡರಿ, 1 ಸಿಕ್ಸರ್ ಒಳಗೊಂಡ 26 ರನ್ ಗಳಿಸಿ ಗುರ್ಬಾಜ್ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಬಿರುಸಿನ 27 ರನ್ ಗಳಿಸಿ ನಿರ್ಗಮಿಸಿದರೇ, ನಂತರ ಬಂದ ಅಜಿಂಕ್ಯಾ ರಹಾನೆ 26, ಅಂಗ್‌ಕ್ರಿಶ್ ರಘುವಂಶಿ 44, ರಿಂಕು ಸಿಂಗ್ 36, ಆಂಡ್ರೆ ರಸೆಲ್ 17 ರನ್ ಗಳಿಸಿದರು. ಡೆಲ್ಲಿ ಪರ ಮಿಚೆಲ್ ಸ್ಟಾರ್ಕ್ 3, ವಿಪ್ರಾಜ್ ನಿಗಮ್ ಮತ್ತು ಅಕ್ಷರ್ ಪಟೇಲ್ ತಲಾ 2, ಚಮೀರಾ 1 ವಿಕೆಟ್ ಕಿತ್ತರು. ಸುನೀಲ್ ನರೇನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.





ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಬೆಂಗಳೂರು	10	7	3	0	14
ಮುಂಬೈ	10	6	4	0	12
ಗುಜರಾತ್	9	6	3	0	12
ಡೆಲ್ಲಿ	10	6	4	0	12
ಪಂಜಾಬ್	9	5	3	0	11
ಲಕ್ನೋ	10	5	5	0	10
ಕೋಲ್ಕತ್ತಾ	10	4	5	0	9
ರಾಜಸ್ಥಾನ್	10	3	7	0	6
ಹೈದರಾಬಾದ್	9	3	6	0	6
ಚೆನ್ನೈ	9	2	7	0	4

ಇಂದಿನ ಪಂದ್ಯ

ಚೆನ್ನೈ ಸೂಪರ್ ಕಿಂಗ್ಸ್
V/S
ಪಂಜಾಬ್ ಕಿಂಗ್ಸ್

ಸಮಯ: ಸಂಜೆ 7.30

ಸ್ಥಳ : ಎಂ.ಎ. ಚಿದಂಬರಂ ಕ್ರೀಡಾಂಗಣ, ಚೆನ್ನೈ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗಂಧದ ಗುಡಿ (ಕ)+ ಒಡೆಲಾ–2 (ತೆ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಗುಡ್ ಬ್ಯಾಡ್ ಅಗ್ಲಿ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸಿಕಂದರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ದಾಸರಹಳ್ಳಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ವಿದ್ಯಾಪತಿ (ಕ)	4 ಪ್ರದರ್ಶನಗಳು
ರಾಜಕಮಲ್	
ಗ್ಯಾಂಗರ್ಸ್ (ತ)	4 ಪ್ರದರ್ಶನಗಳು
ಸಂಗಂ	
ವಾಮನ (ಕ)	4 ಪ್ರದರ್ಶನಗಳು
ಲಿಡೋ	
ದಾಸರಹಳ್ಳಿ (ಕ) + ರಿಕ್ಷಾ ಚಾಲಕ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಗುಡ್ ಬ್ಯಾಡ್ ಅಗ್ಲಿ (ತ): ಬೆ.10.30ಕ್ಕೆ, ಮ.1.25ಕ್ಕೆ, ಸಂ.4.20ಕ್ಕೆ, ರಾ.7.15ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಅಲಪ್ಪುಳ ಜಿಮ್ಖಾನ (ಮ): ಬೆ.10.20ಕ್ಕೆ, ಜಾಕ್ (ತೆ): ಮ.1.20ಕ್ಕೆ, ಸಂ.4.15ಕ್ಕೆ, ಅಜ್ಞಾತವಾಸಿ (ಕ): ರಾ.7.15ಕ್ಕೆ, ಬಜೂಕ (ಮ): ರಾ.9.55ಕ್ಕೆ.
ಸ್ಕ್ರೀನ್ 3	ದಿ ಅಮಚೂರ್ (ಇಂ): ಬೆ.10.40ಕ್ಕೆ, ರಾ.7.15ಕ್ಕೆ, ಅಲಪ್ಪುಳ ಜಿಮ್ಖಾನ (ಮ): ಮ.1.20ಕ್ಕೆ, ರಾ.10ಕ್ಕೆ. ಜಾಟ್ (ಹಿಂ): ಸಂ.4.10ಕ್ಕೆ.
ಸ್ಕ್ರೀನ್ 4	ವಿದ್ಯಾಪತಿ (ಕ): ಬೆ.10.30ಕ್ಕೆ, ರಾ.7.05ಕ್ಕೆ, ವಾಮನ (ಕ): ಮ.1.20ಕ್ಕೆ, ಸಂ.4.15ಕ್ಕೆ, ಜಾಟ್ (ಹಿಂ): ರಾ.9.55ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ವಿದ್ಯಾಪತಿ (ಕ): ಬೆ.10.45ಕ್ಕೆ, ಸಂ.4.15ಕ್ಕೆ, ಸಂ.6.45ಕ್ಕೆ, ಮನದ ಕಡಲು (ಕ): ಮ.1.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 2	ಗುಡ್ ಬ್ಯಾಡ್ ಅಗ್ಲಿ (ತ): ಬೆ.10.30ಕ್ಕೆ, ಸಂ.4ಕ್ಕೆ, ವಾಮನ (ಕ): ಮ.1.15ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ವಾಮನ (ಕ): ಬೆ.10.40ಕ್ಕೆ, ಸಂ.4.05ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಮ.1.20ಕ್ಕೆ, ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಎಂಪುರನ್ 2 (ಕ): ಮ.12.30ಕ್ಕೆ, ಬಜೂಕ (ಮ): ಮ.3.50ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸುತ್ತೂರು ಶ್ರೀ ಕ್ಷೇತ್ರದಲ್ಲಿ ರೈತರ ಶಿಬಿರ

ಮೈಸೂರು, ಏ. 29– ಸುತ್ತೂರು ಶ್ರೀಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳ ಸಂಯುಕ್ತಾಶ್ರಯದಲ್ಲಿ ಮೇ 3 ರಿಂದ 5ರವರೆಗೆ ಸುತ್ತೂರು ಶ್ರೀಕ್ಷೇತ್ರದಲ್ಲಿ ರೈತರ ಶಿಬಿರವನ್ನು ಏರ್ಪಡಿಸಲಾಗಿದೆ.

ಶಿಬಿರವು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಮಾರ್ಗದರ್ಶನ ಹಾಗೂ ದಿವ್ಯ ಆಶೀರ್ವಾದದೊಂದಿಗೆ ನಡೆಯಲಿದೆ. ಶಿಬಿರದಲ್ಲಿ ಸಾಮೂಹಿಕ ಪ್ರಾರ್ಥನೆ, ಯೋಗ, ವಿಶೇಷ ಉಪನ್ಯಾಸ, ಚಿಂತನ–ಮಂಥನ, ದೇಸಿ ಆಟಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿರುತ್ತವೆ. ಶಿಬಿರದಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಶಿಬಿರದ ಸಂಚಾಲಕರಾದ ಡಾ. ಬಿ.ಎನ್.ಜ್ಞಾನೇಶ್ (7893900 859), ಚಿನ್ನಸ್ವಾಮಿ ವಡ್ಡಗೆರೆ (9380477210) ದರೆಪ್ಪ ಪರಪ್ಪ ಕಿತ್ತೂರು (9916238273), ವೈ.ಎಸ್.ಮಂಜು ಪಟೇಲ್ (9731026150), ಪಿ.ಶಿವಕುಮಾರ್ (7899877940) ಅವರನ್ನು ದೂರವಾಣಿಗಳಲ್ಲಿ ಸಂಪರ್ಕಿಸಿ ವಿವರಗಳನ್ನು ಪಡೆದು ನೋಂದಾಯಿಸಿಕೊಳ್ಳಬಹುದಾಗಿದೆ.

ಮೇ ತಿಂಗಳಲ್ಲಿ ಮೂರು ತಿಂಗಳ 'ಗೃಹಲಕ್ಷ್ಮಿ' ಹಣ ಖಾತೆಗೆ

ಬೆಳಗಾವಿ, ಏ.29– ಬಾಕಿ ಉಳಿದಿರುವ ಮೂರು ತಿಂಗಳ ಗೃಹಲಕ್ಷ್ಮಿ ಯೋಜನೆ ಹಣ ಒಟ್ಟಿಗೆ ಬಿಡುಗಡೆ ಮಾಡಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ತಿಳಿಸಿದರು. ಬೆಳಗಾವಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಜನವರಿ, ಫೆಬ್ರವರಿ, ಮಾರ್ಚ್ ಈ ಮೂರು ತಿಂಗಳ ಗೃಹಲಕ್ಷ್ಮಿ ಹಣವನ್ನು ಮೇ ತಿಂಗಳಲ್ಲಿ ಬಿಡುಗಡೆ ಮಾಡಲಾಗುವುದು ಎಂದರು.



ಮೂರು ತಿಂಗಳ ಹಣ ಬಿಡುಗಡೆಗೆ ಹಣಕಾಸು ಇಲಾಖೆಯಿಂದ ಅನುಮೋದನೆ ಸಿಕ್ಕಿದ್ದು, ಒಂದು ವಾರ ಒಂದು ತಿಂಗಳ ಹಣ, ಮತ್ತೊಂದು ವಾರ ಮತ್ತೊಂದು ತಿಂಗಳ ಹಣವನ್ನು ಗೃಹಲಕ್ಷ್ಮಿಯರ ಬ್ಯಾಂಕ್ ಖಾತೆಗೆ ಬಿಡುಗಡೆ ಮಾಡಲಾಗುವುದು ಎಂದು ಹೇಳಿದರು.

ಅಂಬೇಡ್ಕರ್ ಕನಸು ನನಸಾಗಲು ಯುವ ಸಮೂಹ ಶಿಕ್ಷಣವಂತರಾಗಬೇಕು

ಮೈಸೂರು, ಏ.29(ಎಸ್‌ಪಿಎನ್)– ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರು, ತಮ್ಮ ಜೀವಿತಾವಧಿಯಲ್ಲಿ ಕಂಡು ಕನಸು ನನಸಾಗಬೇಕಾದರೆ, ದೇಶದ ಪ್ರತಿಯೊಬ್ಬ ಯುವ ಸಮೂಹ ಶಿಕ್ಷಣವಂತರಾಗಬೇಕು ಎಂದು ವಿದ್ಯಾರ್ಥಿ ಕ್ಷೇಮಾಪಾಲನಾ ನಿಧಿ ಸಹಾಯಕ ನಿರ್ದೇಶಕಿ ಡಾ. ಸುಷ್ಮಾ ಅಭಿಪ್ರಾಯಪಟ್ಟರು.

ಮೈಸೂರು ಮಹಾರಾಜ ಕಾಲೇಜು ವಸತಿ ನಿಲಯ ಆವರಣದಲ್ಲಿ ವಸತಿ ನಿಲಯದ ವಿದ್ಯಾರ್ಥಿಗಳು ಆಯೋಜಿಸಿದ್ದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜನ್ಮ ದಿನಾಚರಣೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಪಂಡಿತ್ ಜವಹರ್‌ಲಾಲ್ ನೆಹರು ಮಂತ್ರಿ ಮಂಡಲದಲ್ಲಿ ಅಂಬೇಡ್ಕರ್ ಅವರು, ಮೊದಲು ಕಾನೂನು ಮಂತ್ರಿಯಾಗಿ ಸಂವಿಧಾನದ ಹಲವು ಅಂಶಗಳನ್ನು ಜಾರಿಗೆ ತರಲು ಅವರ ಪಾತ್ರ ಬಹುಮುಖ್ಯವಾಗಿದೆ. ಸಾವಿರಾರು ವರ್ಷಗಳಿಂದ ಬಡವರು, ದಲಿತರು ಹಾಗೂ ಮಹಿಳೆಯರು ಶಿಕ್ಷಣದಿಂದ ದೂರ ಉಳಿದಿರುವುದನ್ನು ಮನಗಂಡು ಎಲ್ಲಾರಿಗೂ ಶಿಕ್ಷಣದಲ್ಲಿ



ಮೈಸೂರು ಮಹಾರಾಜ ಕಾಲೇಜು ವಸತಿ ನಿಲಯ ಆವರಣದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 134ನೇ ಜನ್ಮ ದಿನಾಚರಣೆ ನೆರವೇರಿತು.

ಸಮಾನತೆ ನೀಡಬೇಕು ಎಂದು ಪ್ರತಿಪಾದಿಸಿದ್ದ ಪ್ರಸಂಗಗಳನ್ನು ವಿವರಿಸಿದರು.

ದೇಶ, ಎಲ್ಲಾ ರಂಗದಲ್ಲೂ ಪ್ರಗತಿ ಸಾಧಿಸಲು ಶಿಕ್ಷಣ ಅತ್ಯವಶ್ಯಕ. ಹಾಗಾಗಿ ಎಲ್ಲಾ ವರ್ಗದ ಜನರು ಶಿಕ್ಷಣ ಕಲಿಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಪ್ರತಿಪಾದಿಸಿದ್ದರು. ಅಂತೆಯೇ ಉತ್ತರ ಮತ್ತು ದಕ್ಷಿಣ ರಾಜ್ಯಗಳಲ್ಲಿ ನೀರಾವರಿ ಕಲ್ಪಿಸಲು ಉತ್ತರ ಮತ್ತು ದಕ್ಷಿಣ ಭಾಗದ ನದಿಗಳ ಜೋಡಣೆಗೆ 1952ರಲ್ಲೇ ಸಲಹೆ ನೀಡಿದ್ದ ಅಂಬೇಡ್ಕರ್ ಅವರು, ಮಹಿಳೆಯರಿಗೆ ಸಮಾಜದ ಸಂಕೋಲೆಗಳಿಂದ ಬಿಡಿಸಲು ಹಿಂದೂ ಕೋಡ್ ಬಿಲ್ ರಚನೆ ಕಾರಣರಾದರು. ಈ ಬಿಲ್‌ನಲ್ಲಿ ಮಹಿಳಾ ಸಬಲೀಕರಣ ಕುರಿತು ಹಲವು ಅಂಶಗಳನ್ನು ಪ್ರತಿಪಾದಿಸಿದ್ದ ಪ್ರಸಂಗವನ್ನು ವಿವರಿಸಿದರು.

ಭಾರತದಂತಹ ಬೃಹತ್ ಪ್ರಜಾಪ್ರಭುತ್ವ ವ್ಯವಸ್ಥೆಗೆ ಶ್ರೇಷ್ಠ ಸಂವಿಧಾನ ನೀಡಿದ್ದಕ್ಕಾಗಿ ಅಮೆರಿಕಾದ ಕೊಲಂಬಿಯಾ ವಿಶ್ವವಿದ್ಯಾನಿಲಯ ಡಾಕ್ಟರ್ ಆಫ್ ಲಾ ಪದವಿ ನೀಡಿ ಗೌರವಿಸಿತು. ಆಂಧ್ರಪ್ರದೇಶದ ಉಸ್ಮಾನಿಯ ವಿಶ್ವವಿದ್ಯಾನಿಲಯ ಸಂವಿಧಾನ ರಚನೆಗೆ ಅವರ ಶ್ರಮವನ್ನು ಪರಿಗಣಿಸಿ ಡಾಕ್ಟರೇಟ್ ಪದವಿ ನೀಡಿತು. ರಾಜ್ಯಸಭಾ ಸದಸ್ಯರಾಗಿ ಸೇವೆ ಸಲ್ಲಿಸಿ, ನಂತರ ಸಕ್ರಿಯ ರಾಜಕಾರಣದಿಂದ ದೂರ ಸರಿದು ಬೌದ್ಧಧರ್ಮ ಸ್ವೀಕರಿಸಿದ ಪ್ರಸಂಗವನ್ನು ವಿವರಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಸಾಧನೆಯನ್ನು ಒಂದೆರಡು ದಿನಗಳಲ್ಲಿ ಹೇಳಿ ಮುಗಿಸುವಂತಹದ್ದಲ್ಲ. ಹಾಗಾಗಿ ಹಿರಿಯರು ಹಾಕಿಕೊಂಡು ಮಾರ್ಗದರ್ಶನದಲ್ಲಿ ಇಂದಿನ ಯುವಕರು ಅರಿತು ಸಾಗಬೇಕು. ಆಗ ಮಾತ್ರ ಸಮಾಜದಲ್ಲಿ ಉನ್ನತ ಮಟ್ಟಕ್ಕೇರಲು ಸಾಧ್ಯ. ಪ್ರಸ್ತುತ ಯುವ ಸಮೂಹ ಅಂಬೇಡ್ಕರ್ ಅವರ ಹೆಸರಿನಲ್ಲಿ ಆಚರಣೆಗಿಂತ, ಅವರ ಆದರ್ಶಗಳನ್ನು ಅನುಸರಣೆ ಮಾಡಿದರೆ ಉತ್ತಮ ಎಂದು ಕಿವಿ ಮಾತು ಹೇಳಿದರು.

ವೇದಿಕೆಯಲ್ಲಿ ಪ್ರಾಧ್ಯಾಪಕ ಡಾ.ಗುರುಸಿದ್ದಯ್ಯ, ಮಾಜಿ ಮೇಯರ್ ಪುರುಷೋತ್ತಮ್, ಡಾ.ಸಿ.ಕೆಪುಟ್ಟಸ್ವಾಮಿ, ಡಾ.ಬಿಪಿನ್ ನಾಗರಾಜು, ಸಿಂಡಿಕೇಟ್ ಸದಸ್ಯರಾದ ಡಾ.ಬಸವರಾಜು ಸಿ. ಜಟ್ಟಿ ಹುಂಡಿ, ಡಾ.ನಟರಾಜು, ಡಾ.ನಾಗರಾಜು, ಗೋಕುಲ್ ಗೋವರ್ಧನ್, ಡಾ. ಪುಟ್ಟನಂಜಯ್ಯ, ವಿನೋದ್, ಹರೀಶ್, ಮದನ್ ಸೇರಿದಂತೆ ಇತರರಿದ್ದರು.

ಶರಿಯಾ ಕೋರ್ಟ್ ಯಾವುದೇ ರೂಪದಲ್ಲೂ ಕಾನೂನಿನಲ್ಲಿ ಮಾನ್ಯತೆ ಹೊಂದಿಲ್ಲ: ಸುಪ್ರೀಂ

ನವದೆಹಲಿ, ಏ.29– ಸುಪ್ರೀಂ ಕೋರ್ಟ್ ತನ್ನ ಮಹತ್ವದ ತೀರ್ಪಿನಲ್ಲಿ, ಕಾಝಿ ನ್ಯಾಯಾಲಯ ದಾರುಲ್ ಕಾಜಾ (ದಾರುಲ್ ಕಾಜಾ) ಕಜಿಯತ್ ನ್ಯಾಯಾಲಯ, ಶರಿಯಾ ನ್ಯಾಯಾಲಯ ಇತ್ಯಾದಿಗಳು ಯಾವುದೇ ಹೆಸರು ಅಥವಾ ಶೈಲಿಯಾಗಿದ್ದರೂ, ಕಾನೂನಿನಲ್ಲಿ ಯಾವುದೇ ಮಾನ್ಯತೆ ಯನ್ನು ಹೊಂದಿಲ್ಲ ಎಂದು ಹೇಳಿದೆ. ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ ಸೆಕ್ಷನ್ 125ರ ಅಡಿಯಲ್ಲಿ ಸಲ್ಲಿಸಲಾದ ಮುಸಲ್ಮಾನ ಮಹಿಳೆಯ ಜೀವನಾಂಶ ವಿಚಾರಣೆ ಸಂದರ್ಭದಲ್ಲಿ ನ್ಯಾಯಾಲಯ ಈ ತೀರ್ಪು ನೀಡಿದೆ. ಅಲಹಾಬಾದ್ ಹೈಕೋರ್ಟ್‌ನ 2018ರ ಆದೇಶವನ್ನು ಪ್ರಶ್ನಿಸಿ ಶಹಜಹಾನ್ ಎಂಬ ಮಹಿಳೆ ಸಲ್ಲಿಸಿದ ಅರ್ಜಿಯನ್ನು ಆಲಿಸಿದ ಸುಪ್ರೀಂ ಕೋರ್ಟ್ ಪೀಠವು ಈ ತೀರ್ಪು ನೀಡಿದೆ.

2010ರಲ್ಲಿ ಝಾನ್ಸಿಯ ಕುಟುಂಬ ನ್ಯಾಯಾಲಯವು ತನ್ನ ಜೀವನಾಂಶವನ್ನು ನಿರಾಕರಿಸಿದ ತೀರ್ಪಿನ ವಿರುದ್ಧದ ಪರಿಷ್ಕರಣಾ ಅರ್ಜಿಯನ್ನು ಈ ಆದೇಶ ವಜಾಗೊಳಿಸಿತ್ತು ಕುಟುಂಬ ನ್ಯಾಯಾಲಯವು ಆಕೆಯ ಇಬ್ಬರು ಮಕ್ಕಳಿಗೆ ಕೇವಲ 2,500 ರೂಪಾಯಿ ಜೀವನಾಂಶ ನೀಡಿತ್ತು. ನ್ಯಾಯಮೂರ್ತಿಗಳಾದ ಸುಧಾಂಶು ಧುಲಿಯಾ ಮತ್ತು ಅಹ್ಸಾನುದ್ದೀನ್ ಅಮಾನುಲ್ಲಾ ನೇತೃತ್ವದ ಉನ್ನತ ನ್ಯಾಯಾಲಯದ ದ್ವಿಸದಸ್ಯ ಪೀಠವು, ನ್ಯಾಯಾಲಯದ ತೀರ್ಪುಗಳು ಯಾರ ಮೇಲೂ ಬದ್ಧವಾಗಿಲ್ಲ ಮತ್ತು ಬಲವಂತದ ಕ್ರಮಗಳಿಂದ ಜಾರಿಗೊಳಿಸಲಾಗುವುದಿಲ್ಲ ಎಂದು ಹೇಳಿದೆ.

ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ವರದಿ ವಿರೋಧಿಸುವ ಕಾಂಗ್ರೆಸ್ ನಾಯಕರಿಗೆ ಸೂಕ್ತ ನಿರ್ದೇಶನ ಕೋರಿ

ಹಿಂದುಳಿದ ವರ್ಗಗಳಿಂದ ರಾಹುಲ್ ಗಾಂಧಿಗೆ ಪತ್ರ ಚಳುವಳಿ

ಮೈಸೂರು,ಏ.29(ಎಂಟಿವೈ)– ರಾಜ್ಯ ಸರ್ಕಾರದ ವತಿಯಿಂದ ನಡೆಸಿರುವ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷಾ ವರದಿ ಜಾರಿಗೆ ವಿರೋಧಿಸುತ್ತಿರುವ ಕಾಂಗ್ರೆಸ್ ನಾಯಕರಿಗೆ ನಿರ್ದೇಶನ ನೀಡುವಂತೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಕಾರ್ಯಕರ್ತರು ಎಐಸಿಸಿ ನಾಯಕ ರಾಹುಲ್ ಗಾಂಧಿ ಅವರಿಗೆ ಮನವಿ ಮಾಡುವ ಅಂಚೆ ಚಳುವಳಿ ನಡೆಸಿದರು.

ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿರುವ ಅಂಚೆಪೆಟ್ಟಿಗೆಗೆ ಸಂಸದ ರಾಹುಲ್ ಗಾಂಧಿ ಅವರ ದೆಹಲಿಯ ಅಧಿಕೃತ ನಿವಾಸ ವಿಳಾಸಕ್ಕೆ ಬರೆದಿದ್ದ ಅಂಚೆ ಕಾರ್ಡ್‌ನ್ನು ಪೋಸ್ಟ್ ಮಾಡುವ ಮೂಲಕ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ವರದಿ ಜಾರಿಗೊಳಿಸುವಂತೆ ಆಗ್ರಹಿಸಿದರು.

ಈ ವೇಳೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್ ಮಾತನಾಡಿ, ಕರ್ನಾಟಕ ರಾಜ್ಯದಲ್ಲಿ ಮೊದಲ ಬಾರಿಗೆ ಎಲ್ಲಾ ಸಮುದಾಯಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಮೀಕ್ಷೆಯನ್ನು ಸಿದ್ದರಾಮಯ್ಯ ಅವರು ಕಳೆದ ಬಾರಿ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿಯೇ ಹಿಂದುಳಿದ ವರ್ಗಗಳ ಆಯೋಗದ ಮೂಲಕ ನಡೆಸಿದ್ದಾರೆ. ಶೋಷಿತ ಸಮುದಾಯಗಳೂ ಸೇರಿದಂತೆ ಎಲ್ಲಾ ಸಮುದಾಯಗಳು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ಅಂಕಿ ಅಂಶಗಳ ಸಮೇತ ತಿಳಿದುಕೊಳ್ಳುವ ಉದ್ದೇಶದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸಾಮಾಜಿಕ ಬದ್ಧತೆ, ಶೋಷಿತ ವರ್ಗಗಳ ಬಗ್ಗೆ ಇರುವ ಕಾಳಜಿಯಿಂದ ಈ ಸಮೀಕ್ಷೆಯನ್ನು ವೈಜ್ಞಾನಿಕವಾಗಿ ಮಾಡಲಾಗಿದೆ. ಕ್ಯಾಬಿನೆಟ್ ಸಭೆಯಲ್ಲಿ ವರದಿಯನ್ನು ಮಂಡಿಸಿ ಚರ್ಚಿಸಲಾಗಿದೆ. ಆದರೆ, ಕಾಂಗ್ರೆಸ್ ಪಕ್ಷದ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಹಾಗೂ ಕೆಲವು ಶಾಸಕರು, ಮುಖಂಡರು ವಿರೋಧಿಸುತ್ತಿರುವುದು ಬೇಸರ ತರಿಸಿದೆ.



ಸಾಮಾಜಿಕ, ಶೈಕ್ಷಣಿಕ ವರದಿ ಜಾರಿಗೊಳಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ಸಮಿತಿ ಕಾರ್ಯಕರ್ತರು ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿರುವ ಅಂಚೆಪೆಟ್ಟಿಗೆ ಬಳಿ ಅಂಚೆ ಚಳುವಳಿ ನಡೆಸಿದರು.

ಈ ಹಿನ್ನೆಲೆಯಲ್ಲಿ ಸಮೀಕ್ಷೆಯ ವರದಿ ಅನುಷ್ಠಾನಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವ ಕಾಂಗ್ರೆಸ್ ಮುಖಂಡರು, ಶಾಸಕರಿಗೆ ಸೂಕ್ತ ನಿರ್ದೇಶನ ನೀಡುವಂತೆ ಸಂಸದ ರಾಹುಲ್ ಗಾಂಧಿ ಅವರಿಗೆ ಅಂಚೆ ಕಾರ್ಡ್ ಕಳುಹಿಸಲಾಗಿದೆ ಎಂದರು.

ಈ ವರದಿಯಲ್ಲಿ ಜನಸಂಖ್ಯೆ ಮಾತ್ರವಲ್ಲದೆ, ಅಹಿಂದ ವರ್ಗಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ಅಂಕಿ ಅಂಶಗಳೊಂದಿಗೆ ಕ್ರೂಡೀಕರಿಸಲಾಗಿದೆ. ಅಲ್ಲದೆ ಮೀಸಲಾತಿ ವರ್ಗೀಕರಣ ಮಾಡಿ ಎಲ್ಲಾ ವರ್ಗಗಳಿಗೆ ಮೀಸಲಾತಿಯನ್ನು ಹೆಚ್ಚಿಸಲು ಶಿಫಾರಸನ್ನು ಮಾಡಲಾಗಿದೆ.

ಈ ವರದಿಯ ಅಂಕಿ ಅಂಶಗಳ ಆಧಾರದ ಮೇಲೆ ಅಹಿಂದ ಸಮುದಾಯಗಳಿಗೆ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಪ್ರಾತಿನಿಧ್ಯ ನೀಡಲು ಸರ್ಕಾರಕ್ಕೆ ಅನುಕೂಲವಾಗುತ್ತದೆ. ಆದರೆ ಈಗ ಕಾಂಗ್ರೆಸ್ ಪಕ್ಷದ ಕೆಲವು ಶಾಸಕರೇ ವಿರೋಧ ವ್ಯಕ್ತಪಡಿಸುತ್ತಿರುವುದು ದುರಂತ ಎಂದು ವಿಷಾದಿಸಿದರು.

ದೇಶದಲ್ಲಿ ಅಹಿಂದ ವರ್ಗಗಳು ಕಾಂಗ್ರೆಸ್ ಪಕ್ಷದ ಬೆನ್ನೆಲುಬಾಗಿ ಅಂದಿನಿಂದ ಇಂದಿನವರೆಗೂ ನಿಂತಿವೆ. ಅಲ್ಲದೆ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಜಾತಿ ಗಣತಿಯನ್ನು ದೇಶದಾದ್ಯಂತ ಮಾಡಿಸುತ್ತೇವೆ ಎಂದು ಭರವಸೆ ನೀಡಿದೆ. ಈ ಹಿನ್ನೆಲೆಯಲ್ಲಿ ಸಾಮಾಜಿಕ ನ್ಯಾಯ ಎತ್ತಿಹಿಡಿಯುವುದು ಕಾಂಗ್ರೆಸ್ ಪಕ್ಷ ಎಂಬ ನಂಬಿಕೆ ಅಹಿಂದ ವರ್ಗಗಳಿಗೆ ಇದೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಸಾಮಾಜಿಕ, ಆರ್ಥಿಕ ಸಮೀಕ್ಷೆಯ ವರದಿಯನ್ನು ಜಾರಿಗೊಳಿಸಬೇಕು ಎಂದು ಮನವಿ ಮಾಡಿದರು.

ಚಳುವಳಿಯಲ್ಲಿ ಜಿಲ್ಲಾ ಮಡಿವಾಳರ ಸಂಘದ ಅಧ್ಯಕ್ಷ ರವಿನಂದನ್, ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಎಸ್.ಯೋಗೀಶ ಉಪ್ಪಾರ್, ಜಿಲ್ಲಾ ಕುಂಬಾರ ಸಂಘದ ಅಧ್ಯಕ್ಷ ಹೆಚ್.ಎಸ್.ಪ್ರಕಾಶ್, ವಿಶ್ವಕರ್ಮ ಸಮಾಜದ ಅಧ್ಯಕ್ಷ ಮಗಣ್ಣಾಚಾರ್, ದಲಿತ ಸಂಘರ್ಷ ಸಮಿತಿಯ ದೇವಗಳ್ಳಿ ಸೋಮಶೇಖರ್, ರಾಜ್ಯ ನಾಯಕ ಹಿತರಕ್ಷಣ ಸಮಿತಿ ಅಧ್ಯಕ್ಷ ದ್ಯಾವಪ್ಪ ನಾಯಕ, ಹಿಂದುಳಿದ ವರ್ಗದ ಮುಖಂಡರಾದ ಲೋಕೇಶ್ ಕುಮಾರ್ ಮಾದಾಪುರ, ದಿನೇಶ್ ಶಿಂಷ, ರೆಸ್ಪಾನ್ಸಿಬಲ್ ಸಿಟಿಜನ್ ವಾಯ್ಸ್ ಅಧ್ಯಕ್ಷ ಕಲೀಮ್, ಸಂವಿಧಾನ ಸಂರಕ್ಷಣಾ ಸಮಿತಿಯ ಅಧ್ಯಕ್ಷ ಎನ್. ಭಾಸ್ಕರ್, ದಲಿತ ಸಂಘರ್ಷ ಸಮಿತಿಯ ಮುಖಂಡರಾದ ನಂಜುಂಡಸ್ವಾಮಿ, ಭಗವಾದಿ ನಾರಾಯಣಪ್ಪ, ಮುಖಂಡರಾದ ರಾಜಶೇಖರ್, ರೋಹಿತ್ ಮಂಜುಳಾ ಸೌಂಡ್ಸ್, ರಾಜೇಶ್, ಲಿಂಗರಾಜು, ಕೇಶವ, ದೀಪಕ್, ಪುಟ್ಟಸ್ವಾಮಿ, ರವಿನಾಯಕ್, ನಂಜುಂಡ, ಚಂದ್ರು ವಿಶ್ವಕರ್ಮ, ಲಕ್ಷ್ಮಿ, ಹರಿಶ್, ಇನ್ನಿತರರು ಉಪಸ್ಥಿತರಿದ್ದರು.

ಮೇ 4ಕ್ಕೆ ಭಗೀರಥ ಜಯಂತಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಶ್ರೀ ಭಗೀರಥ ಜಯಂತಿ ಕಾರ್ಯಕ್ರಮ ಪೋಸ್ಟರ್ ಅನ್ನು ಭಗೀರಥ ಜಯಂತಿ ಸಮಿತಿಯ ಪ್ರಚಾರ ಸಮಿತಿ ಅಧ್ಯಕ್ಷ ಕೆ.ಟಿ. ಮೋಹನ್‌ಕುಮಾರ್ ಹಾಗೂ ಸಮುದಾಯ ಮುಖಂಡರು ಬಿಡುಗಡೆ ಮಾಡಿದರು.

ಮೈಸೂರು,ಏ.29(ಎಂಟಿವೈ)– ಮೈಸೂರಿನ ಕಲಾಮಂದಿರದಲ್ಲಿ ಮೇ 4ರಂದು ಮಧ್ಯಾಹ್ನ 12 ಗಂಟೆಗೆ ಶ್ರೀ ಭಗೀರಥ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಭಗೀರಥ ಜಯಂತಿ ಸಮಿತಿಯ ಪ್ರಚಾರ ಸಮಿತಿ ಅಧ್ಯಕ್ಷ ಕೆ.ಟಿ. ಮೋಹನ್‌ಕುಮಾರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಜಿಲ್ಲಾ ಶ್ರೀ ಭಗೀರಥ ಜಯಂತ್ಯುತ್ಸವ ಸಮಿತಿ ಹಾಗೂ ಜಿಲ್ಲಾಡಳಿತದ ಸಂಯುಕ್ತಾಶ್ರಯದಲ್ಲಿ ಶ್ರೀ ಭಗೀರಥ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಕಾರ್ಯಕ್ರಮದ ಅಂಗವಾಗಿ ಅಂದು ಬೆಳಗ್ಗೆ 9.30ಕ್ಕೆ ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ಭಗೀರಥ ಮಹರ್ಷಿಗಳ ಭಾವಚಿತ್ರದ ಮೆರವಣಿಗೆ ನಡೆಸಲಾಗುತ್ತದೆ. ಉಪ್ಪಾರ ಸಮಾಜದ ಮೂಲ ಕಸುಬಾದ ಉಪ್ಪು ತಯಾರಿಕೆಯನ್ನು ಬಿಂಬಿಸುವ ಉಪ್ಪಿನ ರಾಶಿ, ಗಂಗಾ ಕಳಸ ಪೂಜೆ, ಪುಷ್ಪಾರ್ಚನೆಯೊಂದಿಗೆ ಶ್ರೀ ಭಗೀರಥ ಮಹರ್ಷಿ ಭಾವಚಿತ್ರವನ್ನು ಅಲಂಕೃತ ವಾಹನದಲ್ಲಿ ಸತ್ತಿಗೆ, ಸುರಪಾನಿ, ಮಾರಿ ಕುಣಿತ, ಬೀಸು ಕಂಸಾಳೆ, ಡೊಳ್ಳು ಕುಣಿತ, ಕತ್ತಿ ವರಸೆ ಸೇರಿದಂತೆ ವಿವಿಧ ಗ್ರಾಮೀಣ ಜನಪದ ಕಲಾತಂಡಗಳೊಂದಿಗೆ ಮೆರವಣಿಗೆ ನಡೆಸಲಾಗುತ್ತದೆ. ಕೆ.ಆರ್.ವೃತ್ತ, ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ ವಿನೋಬಾ ರಸ್ತೆ ಮೂಲಕ ಕಲಾಮಂದಿರಕ್ಕೆ ತಲುಪಲಿದೆ ಎಂದರು.

ನಂತರ ಕಲಾಮಂದಿರದಲ್ಲಿ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಭಗೀರಥ ಪೀಠದ ಶ್ರೀ ಪುರುಷೋತ್ತಮಾನಂದಪುರಿ ಸ್ವಾಮೀಜಿ, ಸಚಿವರು, ಶಾಸಕರು, ವಿಧಾನಪರಿಷತ್ ಸದಸ್ಯರು, ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದರು.

ಶ್ರೀ ಭಗೀರಥ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲಾ ಭಾಗದ ಉಪ್ಪಾರ ಸಮಾಜದ ಯಜಮಾನರು, ಜನಪ್ರತಿನಿಧಿಗಳು, ಮುಖಂಡರು, ಸಂಘಟನೆಗಳು, ಯುವಕರು, ಮಹಿಳೆಯರು, ನೌಕರರು, ವೃತ್ತಿಪರರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮದ ಯಶಸ್ಸಿಗೆ ಕಾರಣರಾಗಬೇಕೆಂದು ಅವರು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ಜಿಲ್ಲಾ ಶ್ರೀ ಭಗೀರಥ ಜಯಂತ್ಯುತ್ಸವ ಸಮಿತಿ ಗೌರವ ಸಲಹೆಗಾರ ಕರಳಾಪುರ ನಾಗರಾಜು, ಸ್ವಾಗತ ಸಮಿತಿ ಅಧ್ಯಕ್ಷ ಎಂ.ಮರೀಶೆಟ್ಟಿ, ಆಹಾರ ಸಮಿತಿಯ ಅಧ್ಯಕ್ಷ ಡಾ.ನಾಗರಾಜ್, ಮೆರವಣಿಗೆ ಸಮಿತಿ ಸದಸ್ಯ ಯೋಗೇಶ್ ಉಪ್ಪಾರ್, ಪ್ರಚಾರ ಸಮಿತಿ ಸದಸ್ಯ ಡಾ.ಎಂ.ಗೋವಿಂದರಾಜು, ಆಹಾರ ಸಮಿತಿ ಸದಸ್ಯ ಟಿ.ಎನ್.ಶಿವರಾಜ್. ಮಹದೇವ್, ಜಗನ್ನಾಥ ಇದ್ದರು.

ಸಾರ್ವಜನಿಕ ಪ್ರಕಟಣೆ


ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ 1) ಶ್ರೀ ಎಸ್.ಜಿ.ಶ್ರೀನಿವಾಸ್, ಬಿನ್ ಎಸ್.ಜಿ.ಶಂಕರ್ 2) ಕುಮಾರಿ. ಶ್ರದ್ಧಾ ಎಸ್. ಮತ್ತು 3) ಮಾಸ್ಟರ್. ಮಿಥುನ್ ಶ್ರೀವತ್ಸ ಎಸ್., ನಂ. 2 ಮತ್ತು 3, ಮೈನರ್ ಪರ ಗಾರ್ಡಿಯನ್ ಜನಕ ತಂದೆ ಶ್ರೀ ಎಸ್.ಜಿ.ಶ್ರೀನಿವಾಸ್ ರವರುಗಳು ಒಟ್ಟಾಗಿ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖುದ್ದಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ-ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 10 (ಹತ್ತು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖುದ್ದಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ-ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಹೆಬ್ಬಾಳ್, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಕೈಗಾರಿಕಾ ಪ್ಲಾಟ್ ನಂ. 410–413/18, ಹಾಲೀ ಹೂಟಗಳ್ಳಿ ನಗರ ಸಭೆ ವ್ಯಾಪ್ತಿಯಲ್ಲಿರುವ ಇ–ಖಾತೆಯಂತೆ ಸ್ವತ್ತಿನ ಸಂಖ್ಯೆ : 2687535478 & ವಾರ್ಡ್ ನಂ. 33 ಉಳ್ಳ ಕಟ್ಟಡವನ್ನೊಳಗೊಂಡ ಸ್ವತ್ತಿನ ವಿಸ್ತೀರ್ಣ ಪೂರ್ವ–ಪಶ್ಚಿಮ: [33.00 ಮೀಟರ್ + 27.80 ಮೀಟರ್] / 2 ಮತ್ತು ಉತ್ತರ–ದಕ್ಷಿಣ: [40.65 ಮೀಟರ್ + 45.60 ಮೀಟರ್]/2, ಒಟ್ಟು ವಿಸ್ತೀರ್ಣ: 1309.48 ಚದರ ಮೀಟರ್ ಉಳ್ಳ ಸ್ವತ್ತಿನ ಚಕ್ಕುಬಂದಿ, ಪೂರ್ವಕ್ಕೆ : ಪ್ಲಾಟ್ ನಂ. 17, ಪಶ್ಚಿಮಕ್ಕೆ : ಕೆ.ಐ.ಎ.ಡಿ.ಬಿ. ರಸ್ತೆ, ಉತ್ತರಕ್ಕೆ : ಖಾಸಗಿ ಜಾಗ ಮತ್ತು ದಕ್ಷಿಣಕ್ಕೆ : ಕೆ.ಐ.ಎ.ಡಿ.ಬಿ. ರಸ್ತೆ.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್
ನಂ. 1416, ನಾರಾಯಣಶಾಸ್ತ್ರಿ ರಸ್ತೆ,
ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.
ಮೊ: 9844640641
email: sldlawfirm2021@gmail.com





ಶ್ರೀಮತಿ ಜಿ.ಸುಶೀಲ ಮತ್ತು ಎಸ್.ಸಿ. ಬಸವರಾಜು (ಆನಂದ್)
ರವರಿಗೆ
38 ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು
ಶುಭಕೋರುವವರು: ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು, ಹಿಂಡುವಳ್ಳಿ, ಮೈಸೂರು ತಾ||

4ನೇ ವರ್ಷದ ಸವಿನೆನಪು



ರೇಣುಕಾ .ಹೆಚ್
ಜನನ: 31.07.1963 ಮರಣ: 30.04.2021
ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು : ಕುಟುಂಬವರ್ಗ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

[illegible]

ಪತ್ರಿಕಾ ಪ್ರಕಟಣೆ

[illegible]

ಸಹಿ/- [illegible]
[illegible]

ನಾಲ್ಕನೇ ವರ್ಷದ ಸವಿನೆನಪು



ಜನನ: 07-02-1974
ನಿಧನ: 30-04-2021
ಕಲ್ಪನ
ಸನ್‌ಲೈಟ್
ಕ್ಲೀನರ್ಸ್ ಮತ್ತು ಡ್ರೈಯರ್ಸ್
ಕೆ.ಆರ್.ಸರ್ಕಲ್, ಮೈಸೂರು
ದುಃಖತಪ್ತರು: ಪತಿ: ಶಂಕರ್ ಎಂ. ಮತ್ತು ಕುಟುಂಬವರ್ಗ



